ಅಜ್ಜಪ್ಪನ ಕತಾ ಭಂಡಾರಂದ
ಹೆಕ್ಕಿದ ಕತೆಗ

ಎಂ. ಜಿ ಕಾವೇರಮ್ಮ



ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ

ಹೆಕ್ಕಿದ ಕತೆಗ

ಅಜ್ಜಪ್ಪನ ಕತಾ ಭಂಡಾರಂದ
ಹೆರ್ಕಿದ ಕತೆಗ

ಎಂ.ಜಿ. ಕಾವೇರಮ್ಮ
“ನಿಸರ್ಗ” ಮಾವಜಿ, ಸುಳ್ಯ ದ.ಕ.

ಹೆರ್ಕಿದ ಕತೆಗ

'AJJAPPANA KATHA BHANDARANDA HERKIDA KATHEGA' a collection of Short Stories in Arebhase language written by M.G. Kaveramma, "Nisarga" Mavaji, Sullia, Dakshina Kannada, Published by 'Karnataka Arebhase Samskrithi Mathu Sahitya Academy'

ಬೆಲೆ : Price Rs. :

ಪ್ರಕಟಣೆ : 2015

ಸಲಹ ಸಮಿತಿ : **ಶ್ರೀ ಕೊಲ್ಯದ ಗಿರೀಶ್**

ಡಾ. ಪೂವಪ್ಪ ಕಣಿಯೂರು

ಡಾ. ಕೋರನ ಸರಸ್ವತಿ ಪ್ರಕಾಶ್

ಶ್ರೀ ಮೋಹನ ಸೋನ

ಶ್ರೀಮತಿ ಸಂಗೀತ ರವಿರಾಜ್

ಪ್ರಕಟಣೆ :

ರಿಜಿಸ್ಟ್ರಾರ್

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.

ಪುಸ್ತಕ ದೊರೆಯುವ ಸ್ಥಳ :

ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ.

ಕಾಫಿ ಕೃಪ ಬಿಲ್ಡಿಂಗ್,

ಮಹಾತ್ಮ ಗಾಂಧಿ ರಸ್ತೆ, ಮಡಿಕೇರಿ.

ದೂ. : 08272–223075

ಮುದ್ರಣ :

ಶ್ರೀ ಕೃಷ್ಣ ಕಂಪ್ಯೂಟರ್ಸ್ & ಪ್ರಿಂಟರ್ಸ್, ಮಡಿಕೇರಿ.

Ph : 08272-224919, 9448135592

“ಹೆರ್ಕಿದ ಕತೆಗ”

ಮುನ್ನುಡಿ

ಹೆಕ್ಕಿದ ಕತೆಗ

ಅಧ್ಯಕ್ಷರ ಮಾತ್

ಹೆಕ್ಕಿದ ಕತೆಗ

ನಾ ಬರ್ದ ಕತೆಗಳ ಬಗ್ಗೆ

ನನ್ನ ಅಪ್ಪನ ಅಪ್ಪ ಅಜ್ಜಪ್ಪ ಸೂಂತೋಡು ಬೋಳ ಗೌಡ್ರು ಹತ್ತೊಂಬತ್ತನೇ ಶತವಾನಲಿ ಹುಟ್ಟಿಹೋವು. 1956ರ್ಲಿ ತೀರಿಹೋದೊ. ಅವ್ಕೆ ಜಾತಕ ಇಲ್ಲೆ ವಿದ್ಯೆ ಇಲ್ಲೆ. ನೂರ ಆರು ವೊರ್ಸ ಬೊದ್ಕಿದೊ ಗಡ. ಅದರ್‌ಂದಾಗಿ ಅವು 1850ರ ಸುಮಾರ್‌ಲಿ ಹುಟ್ಟಿರ್‍ವೊಂತ ನೆನ್ಸಿನೆ. ಒಂದೇ ಒಂದು ಕಾಯ್ಲೆ ಕಸಾಲೆ ಅವ್ಕೆ ಇತ್ಲೆ. ನಾಯಕನ ಮುಟ್ಟಗಟ್ಟಿ ಮುಟ್ಟಾಗಿದ್ದೊ. ಅವು ಕಣ್ಣಸ ತೆಗ್ಯೊತಿದ್ದೊ. ದನಂಗಳಿಗೆ ನೂಲು ಮಂತ್ರಿಸಿಕೊಡ್ತಿದ್ದೊ. ಸಣ್ಣ ಪುಟ್ಟ ನಾಟಿ ಮೊದ್ದುನೂ ಅವ್ಕೆ ಗೊತ್ತಿತ್ತ್. ನನ್ನೊಟ್ಟಿಗೆ ಯಾಗೊಳು ಅವು 'ನೀ ಓದು ಬರ ಕಲ್ತಳ. ನನ್ನ ಕಣ್ಣಸ ತೆಗ್ಯವ ಮೊಂತ್ರಗಳ ನೀಬರ್ಕ. ನಿಂಗೆ ಹಿಂದೆ ಇಲ್ಲೆ. ಮುಂದೆ ಇಲ್ಲೆ (ನಾ ಹುಟ್ಟಿಕೆ ಮುಂದೆ ಮೂರು, ನಾ ಹುಟ್ಟಿದ ಮೇಲೆ ಎರ್ಡ್ ಮಕ್ಕ ತೀರಿ ಹೋಗಿದ್ದೋಗಡ) ನಿಂಗೆ ಮೊಂತ್ರ ಹಿಡ್ಯೊದೂಂತ ಹೇಳ್ತಿದ್ದೊ. ಅವರ ಒತ್ತಾಯಕ್ಕೆ ಅದರ ನಾ ಬರ್ದ್ ಸಾ ಇಸಿದ್ದೆ. ಆ ಮೇಲೆ ಅದ್ ಎಲ್ಲಿ ಇಟ್ಟ್ ಹೋತೋ ಗೊತ್ಲೆ. ನಂಗೆ ಅದರ್ಲಿ ಆಸಕ್ತಿನೂ ಇತ್ಲೆ. ಇಂದ್ ನಂಗೆ ನನ್ನ ಅಜ್ಜಪ್ಪನ ನೆನ್ಸಿಕನ ಅವರ ಹಿರಿಮೆ ಅರ್ಥ ಆದೆ. ಸತ್ತ್ ಸೊರ್ಗಲಿದ್ದ ಅವ್ಕೆ ನಾ ಇಲ್ಲಿಂದಳೇ ಕೈ ಮುಗ್ದನೆ.

ನಾವು ಸಂಣವಿರಿಕನ ನಾವುಗೆ ನಮ್ಮ ಅಪ್ಪನ ಅಪ್ಪ ಅಜ್ಜಪ್ಪ ತರತರದ ಕತೆಗಳ ಹೇಳ್ತಿದ್ದೊ. ಹೆಡ್ಡ ದೂಮನ ಕತೆ, ಬುರ್ಡ–ಬುರ್ಡಿ ಕತೆ, ರೆಕ್ಕೆ ಕುದ್ರೆ ಕತೆ, ರಕ್ಕಸ ಅಜ್ಜನ ಕತೆ– ಹೀಂಗೆಲ್ಲಾ ಒಳ್ಳೊಳ್ಳೆ ಕತೆಗಳ ಹೇಳ್ತಿದ್ದೊ. ಜೋರು ಮಳೆ ಬಾಕನ ನಾವ್ಗೆ ಶಾಲೆಗೆ ರಜೆ ಕೊಡ್ತಿದ್ದೊ.

ಆಗ ನಾವ್ಗೆ ಮಾಡಿಕೆ ಏನೂ ಕೆಲ್ಸ ಇಲ್ಲದೆ ಕಾಲ್ ಸುಟ್ಟ ಕೊತ್ತಿನ ಹಾಂಗೆ ಮನೆ ತುಂಬಾ ಓಡಾಡಿಕಂಡ್, ಅಟ್ಟಕ್ಕೆ ಹತ್ತಿ ಅವ್ವ ಮಳೆಗಾಲಕ್ಕೆ ಮಾಡಿಟ್ಟ, ಹಪ್ಪಳ, ಸಂಡಿಗೆ, ಗೆಣ್ಸ್‌ನ ಬಾಳಕ, ಸಾಂತಾಣಿ– ಇದರೆಲ್ಲಾ ಮಡ್ಕೆಲಿ ತುಂಬಿಸಿಟ್ಟ ತೊಡು ತಿನ್ಸ್‌ಗಳ, ಅರ್‌ಂಟ್‌ತಿದ್ದೊ. ಜೋಬು ತುಂಬಾ ಸಾಂತಾಣಿ ತುಂಬಿಸಿಕಂಡ್ ಬಾತಿದ್ದೊ. ಆಗ ಅಜ್ಜಪ್ಪ ನಮ್ಮ ಕರ್ದ್‌ದ್, 'ಬನ್ನಿ ಮಕ್ಕಳೇ, ಕತೆ ಹೇಳ್ನೇಂತ' ಹೇಳ್ತಿದ್ದೊ. ಅವು ದೊಡ್ಡ ಗಟ್ಟದ ಕಂಬೊಳಿ ಹೊದ್ದ್‌ಕಂಡ್ ಕುದ್ರ್‌ತಿದ್ದೊ. ನಮ್ಮ ಕರ್ದ್‌ದ್, ಆ ಕಂಬೊಳಿ ಒಳಗೆ ಕುದ್ರಿಸಿಕಂಡ್ ಕತೆ ಹೇಳ್ತಿದ್ದೊ. ಆಗ ನಂಗೆ ಎಂಟ್–ಹತ್ತ್ ವೊರ್ಸ. ದೊಡ್ಡ ತಮ್ಮ ನನ್ನಂದ ನಾಕ್ ವೊರ್ಸ ಸಂಣಂವ. ಸಂಣ ತಮ್ಮ ಅಂವಂದ ಎರ್ಡೊರ್ಸ ಸಂಣಂವ. ನಮ್ಮ ಮೂರ್ ಜನರ ಕಂಬೊಳಿ ಒಳಗೆ ಕುದ್ರಿಸಿಕಂಡ್ ಅಜ್ಜಪ್ಪ ಕತೆ ಹೇಳ್ತಿದ್ದೊ. ನಾವು ಕಂಬೊಳಿ ಒಳಗೆ ಕುದ್‌ಕಂಡ್, ಜೋಬುಲಿದ್ದ ತೊಡು ತಿನ್ಸ್‌ಗಳ ಬಾಯಿಗೆ ಹಾಕಿ ಕಟುಂ, ಕುಟುಂತ ಅಗ್ದ್‌ಕಂಡ್ ಕತೆನ ಕೇಳ್ತಿದ್ದೊ. ಅವು ಕತೆ ಹೇಳಿಕನ ನಾವು ಹ್ಞೂಂ ಗುಟ್ಟೊಕು. ಇಲ್ಲರೆ, 'ಏನ್ ಮಕ್ಕಳೇ ನಿದ್ದೆ ಮಾಡ್ರನೋಂತ' ಕೇಳ್ತಿದ್ದೊ. ಎಡೆ ಎಡೆಲಿ ಮಾತಾಡ್ರೆ ಬೊಯ್ಯೊತಿದ್ದೊ. ನಾವು ಕೊತ್ತಿಗಳಾಂಗೆ ಕುದ್ದ್‌ಕಂಡ್ ಕೆಬಿಕೊಟ್ಟ್ ಕೇಳ್ತಿದ್ದೊ. ನೀವು ಓದಿ ನೋಡಿನಿ.

ಅಜ್ಜಪ್ಪನ ಕತಾ ಭಂಡಾರಲಿ ನೂರಾರ್ ಕತೆಗಳ ಇದ್ದೊ. ಅದರೆಲ್ಲಾ ಈಗ ನಾ ನೆಂಪು ಮಾಡಿ, ಮಾಡಿ ಸುರುಗೆ ಹತ್ತ್ ಕತೆನ ಬರ್ದೆ. ಅದರ ನಾ ಶ್ರೀಮತಿ ಸಂಗೀತಾ ರವಿರಾಜ್‌ರಲ್ಲಿ ಕೊಟ್ಟೆ. ಅವು ಅದರ ಶ್ರೀಮಾನ್ ಪೂವಪ್ಪ ಕಣಿಯೂರು ಅವರಲ್ಲಿ ಕೊಟ್ಟೊ. ಪೂವಪ್ಪ ಕಣಿಯೂರು ದಂಪತಿಗ ನನ್ನ ಭೇಟಿಯಾಗಿ,

ಹೆಕ್ಕಿದ ಕತೆಗ

ಕತೆಗ ಲಾಯ್ ಒಳೊ. ಇನ್ನೂ ಒಂದು ಪುಸ್ತಕ ಮಾಡುವಷ್ಟ್ ಬರ್‍ಯೆನೀಂತ ಹೇಳ್ದೊ. ಅವರ ಒತ್ತಾಸೆಂದ ನಾ ನನ್ನ ತಮ್ಮ ಚಂದ್ರಶೇಖರ ಸೂಂತೋಡು (ಮೈಸೂರು) ಇವನೊಟ್ಟಿಗೆ ಫೋನ್‌ಲಿ ಮಾತಾಡ್ಸಿ ಕತೆ ಬಗ್ಗೆ ಕೇಳಿಕಾಕನ ಅದರ ಅಧಾರಂದ ಐದ್ ಕತೆಗಳ ಹೆಚ್ಚ್ ಬರ್ದೆ. ಈ ಕತೆಗಳ ಸಂಕಲನನ ಅರಭಾಷೆ ಅಕಾಡೆಮಿಯೊವು ಪುಸ್ತಕ ಮಾಡಿಕೆ ಒಪ್ಪಿಕೊಂಡೊಳೋಂತ ತಿಳ್ದ್, ನಂಗೆ ಬಾಳ ಕುಸಿ ಆತ್. ಹಾಂಗಾಗಿ ನಾ ಅರಭಾಷೆ ಅಕಾಡೆಮಿನ ಅಧ್ಯಕ್ಷರಿಗೆ ಹಾಂಗೂ ಪದಾಧಿಕಾರಿಗಳಿಗೆ ನನ್ನ ಕೃತಜ್ಞತೆನ ಅರ್ಪಿಸಿದೆ.

ಶ್ರೀ ಪೂವಪ್ಪ ಕಣಿಯೂರು ಇವರ ಲೇಖನಗಳ ಪತ್ರಿಕೆಲಿ ಓದಿದ್ದೆ. ಅವು ಮುಖತ: ಭೇಟಿ ಆಕನ ನಂಗೆ ಬಾಳ ಕುಸಿ ಆತ್. ನನ್ನ ಅಜ್ಜಪ್ಪನ ಕತಾ ಭಂಡಾರಂದ ಹೆಕ್ಕಿದ ಕತೆಗಳ ಬರೆಯಕ್ಕೆ ಒತ್ತಾಯಿಸಿದ ಅವ್ಕೆ, ನನ್ನ ಹೃದಯಾಳದ ಕೃತಜ್ಞತೆನ ಸಲ್ಲಿಸಿದೆ. ಹಾಂಗೂ ಇದಕ್ಕೆಲ್ಲಾ ಪ್ರೇರಣೆ ನೀಡಿ ಸಹಕರಿಸಿದ ಶ್ರೀಮತಿ ಸಂಗೀತಾ ರವಿರಾಜ ಅವ್ಕನೂ ನನ್ನ ಮನಪೂರ್ವಕ ಕೃತಜ್ಞತೆಗ.

"ಅರೆಭಾಷೆ ಬೆಳ್ಯಲಿ ಅರೆಭಾಷೆ ಉಳ್ಯಲಿ"

ಎಂ.ಜಿ. ಕಾವೇರಮ್ಮ

"ನಿಸರ್ಗ" ಮಾವಾಜಿ, ಸುಳ್ಯ ದ.ಕ.

ಅಜ್ಜಪ್ಪನ ಕತೆಗಳ ಭಂಡಾರಂದ ಒಂದನೇ ಕತೆ

ಅರ್ಸು ಮಕ್ಕಳ ಹೂನ ಕೊಪ್ಪಳ

ಒಂದ್ ಊರ್‌ಲಿ ಒಬ್ಬ ರಾಜ ಇತ್ತ್. ಅಂವಂಗೆ ನಾಕ್ ಜನ ಗಂಡ್ ಮಕ್ಕ. ಒಂದು ದಿನ ರಾಜ ಮಕ್ಕಳ ಕರ್ದ್, 'ನೀವು ಸುಮ್ಮನೆ ತಿಂದ್‌ಕಂಡ್ ಕುದ್ರ್‌ಬೊಡಿ. ಏನಾದರೂ ಒಂದು ದೊಡ್ಡ ಕೆಲ್ಸ ಮಾಡೀಂತ' ಹೇಳ್ದ. ಮಕ್ಕ ಒಟ್ಟು ಸೇರಿ ಯೋಚನೆ ಮಾಡ್ದೊ. ಏನ್ ಮಾಡ್ದೂಂತ, ಅಕೆರಿಗೆ ಹೂನ ಕೊಪ್ಪಳ ಮಾಡ್ದೂಂತ ಅಪ್ಪನೊಟ್ಟಿಗೆ ಹೇಳ್ದೊ, ರಾಜ ಸರೀಂತ, ಅವ್ಕೆ ಬೇಕಾದ ಜಾಗೆ, ದುಡ್ಡು ಕೊಟ್ಟತ್. ಬೇರೆ ಬೇರೆ ಕಡೆಂದ ಒಳ್ಳೊಳ್ಳೆ ಜಾತಿನ ಹೂನ ದೈಗಳ ತರ್ಸಿದ್ ಕೊಟ್ಟತ್.

ಹೆಕ್ಕಿದ ಕತೆಗ

ಮಕ್ಕ ಬಾಳ ಕುಸಿಂದ ಹೂನ ಕೊಪ್ಪಳ ಸುರು ಮಾಡ್ವೆ. ಮೂರು ತಿಂಗ ಕಳ್ಯಕನ ಬಾಳ ಪೊರ್ಲುನ ಹೂ ತೋಟ ಆತ್. ಅದರ ಪೊರ್ಲು ನೋಡಿಕೆ ಎರ್ಡ್ ಕಣ್ಣ್‌ಗ ಸಾಲ್ದ್. ನಾಳೆ ಹೂನೆಲ್ಲಾ ಕೊಯ್ದ್ದ್, ಮಾರೊನೋಂತ ಮಾತಾಡಿಕೊಂಡೊ. ಮಾರ್ಣೆದಿನ ಬಂದ್ ನೊಡ್ವೆ, ಹೂನ ತೋಟ ಎಲ್ಲಾ ಪಡ್ಚ. ಯಾವುದೋ ಕಾಡ್ ಮುರ್ಗ ಬಂದ್‌ದ್ ಮೇಂದ್ ಹೋಗುಟ್ಟು. 'ಅರೆ, ತೋಟಕ್ಕೆ ಭದ್ರದ ಬೇಲಿ ಉಟ್ಟು, ಬೀಗ ಹಾಕೊಳೊ. ಹಾಂಗಾರೆ ಎಲ್ಲಿಂದ ಬಾತ್?' ಮಕ್ಕಳಿಗೆ ಅದರ ನೋಡಿ ಮೊರ್ದಿಕೆ ಬಾತ್. ಸೋಜಿಗನೂ ಆತ್. ಏನ್ ಮಾಡ್ದು. ಅಪ್ಪಂಗೆ ಹೇಂಗೆ ಮೋರೆ ತೊರ್ಸುದೂಂತ ಅವ್ಕೆ ಬಾಳ ಬೇಜಾರ ಆತ್. ಅಣ್ಣ ಹೇಳ್ತ್. ಇದರ ಎಲ್ಲಾ ತೆಗ್ದ್‌ದ್ ಬೇರೆ ತೋಟ ಮಾಡೊಮೋಂತ.

ಸರೀಂತ ಎಲ್ಲೊವು ಕೂಡಿ ಹಳೆ ದೈಗಳ ಪೊರ್ಪಿ ತೆಗ್ದೊ. ಹೊಸ ದೈಗಳ ನೆಟ್ಟೊ. ಈ ಸಲ ನಾವು ದಿನಾ ಪಾರ ಕುದ್ರೊನೋಂತ ಹೇಳ್ದೊ. ಸಣ್ಣ ತಮ್ಮನ, 'ನೀ ಸಂಣವ ನೀ ಬೇಡಾಂತ' ಹೇಳ್ದೊ. ಹಾಂಗೆನೇ ಮೂರ್ ತಿಂಗ ಕಳ್ತ್. ಹೊಸ ಕೊಪ್ಪಳ ಮುಂದೆಂದಳೂ ಪೊರ್ಲು ಆತ್. ದೈಗ ಎಲ್ಲಾ ಸೊರ್ಕಿ ಪೊರ್ಲು ಪೊರ್ಲುನ ಹೂಗ ಆದೊ. ದಿನಾ ಪಾರ ಕುದ್ದೊ. ಆದರೆ ನಡ್ ಇರ್ಳ್ ಆಕನ ಅವುಕೆ ನಿದ್ದೆ ಬಾತಿತ್ತ್. ಒಂದು ದಿನ ಬೊಳ್ಪುಗೆ ನೋಡಿವೆ ದೈಗ ಎಲ್ಲಾ ಸಪಾಯಿ ತಿಂದ್ ಹೋಗುಂಟು. ಇನ್ ಏನ್ ಮಾಡ್ದೂಂತ ಗೇನ ಮಾಡ್ದೊ. ಆಗ ಸಂಣಂವ ಹೇಳ್ತ್, 'ಈ ಸಲ ನಾ ಪಾರ ಕುದ್ದನೆ, ಯಾವುದು ತಿಂದದೆ ನೋಡಿನೆ. ಅದರ ನಾ ಸುಮ್ಮನೆ ಬುಡಿಕಿಲ್ಲೇಂತ'. ಪುನಃ ಮಕ್ಕ ಹಳೆ ದೈಗಳ ಎಲ್ಲಾ ಪೊರ್ಪಿ ತೆಗ್ದ್‌ದ್ ಹೊಸ ದೈಗಳ ನೆಟ್ಟೊ.

ಮೂರ್ ತಿಂಗ ಆಕನ ಪೊರ್ಲು ಪೊರ್ಲುನ ಹೂಗ ಅರ್ಳಿ ದೈಗ ಎಲ್ಲಾ ನೆಗಾಡ್ದಂಗೆ ಕಾಂಬತಿದ್ದೊ. ಸಂಣಂವ ಹೇಳ್ತ್, 'ನಂಗೆ ಒಂದು ನಿಂಬುಳಿ ಮತ್ತೆ ಒಂದು ಚೂರಿ ಬೇಕೂಂತ. ಅಣ್ಣಂದರ್ ಕೊಟ್ಟೊ. ಸಂಣಂವ ಅಂವನ ಕೈ ಬೆರ್ಳ್‌ನ ಚೂರಿಲಿ ಕೊಯ್ದ್ ನಿಂಬುಳಿಗೆ ಒಂದು ಒಟ್ಟೆ ಮಾಡಿ, ಬೆರ್ಳ್‌ಗೆ ಹೋಗ್ಗಿಸಿತ್. ಆಗ ತಮ್ಮ ಅಜ್ಜಪ್ಪನ ಕೇಳ್ತ್, 'ಅಂವಂಗೆ ಉರ್‍ಯೋದಿಲ್ಲೆನೋ ಅಜ್ಜಂಪಾತ'. 'ಉರ್‍ಯೋಕೂಂತಳೇ ಅಂವ ಹಾಂಗೆ ಮಾಡ್ದ್. ಆಗ ಅಂವಂಗೆ ನಿದ್ದೆ ಬಾದುಲ್ಲೇಂತ' ಅಜ್ಜಪ್ಪ ಹೇಳ್ದೊ, 'ಈ ಸಲ ಕಳ್ಳ ಸಿಕ್ಕಿ ಬಿದ್ದದೇಂತ' ನಾವು ಹೇಳ್ದೊ. ಅಜ್ಜಪ್ಪ ಕತೆ ಮುಂದರಿಸಿದೊ. ನಡ್ ಇರ್ಳ್ ಆತ್. ಸಂಣ ರಾಜಕುಮಾರಂಗೆ ಕೈ ಬೆರ್ಳ್ ತುಂಬಾ ಉರ್‍ಯತಿತ್, ಅಂವಂಗೆ ಉರಿಗೆ ನಿದ್ದೆನೇ ಬಾತಿಲ್ಲೆ. ಆಗ ಆಕಾಸಂದ ಒಂದು ರೆಕ್ಕೆ ಇದ್ದ ಹಾರುವ ಕುದುರೆ ಹಾರಿಕಂಡ್ ಬಾತ್. ರಾಜಕುಮಾರ ಇದರ ನೋಡ್ತ್. ಅದ್ ಹೂನ ಕೊಪ್ಪಳದ ನಡುಲಿ ಇಳ್ತ್. ಹೂಗೆ ಬಾಯಿ ಹಾಕಿಕನ ಸಂಣಂವ ಓಡಿ ಹೋಗಿ ಅದರ ಬೀಲನ ಗಟ್ಟಿಲಿ ಹಿಡ್ಕಂಡತ್. ಇದರ ಕೇಳಿ ನಾವು ಮಕ್ಕ ಕುಸಿಲಿ ಚಪ್ಪಾಳೆ ಹೊಡ್ದೊ. ಅಜ್ಜಪ್ಪ ಸುಮ್ಮನಿರೀಂತ ಹೇಳ್ದೊ. ಆಗ ಕುದ್ರೆ ಪೆರ್ಚಿ ಬಿದ್ ಆಕಾಸಕ್ಕೆ ಹಾರ್ತ್. ಇಂವ ಬುಟ್ಟತಿಲ್ಲೆ. ನೇಲಿಕಂಡ್ ಹೋತ್. ಕುದ್ರೆ ಹಾರಿಕಂಡ್ ಎತ್ತರ ಎತ್ತರಕ್ಕೆ ದೂರ ದೂರ ಹೋತ್. ಒಂದು ದೊಡ್ಡ ಅರಮನೆ ಮುಂದೆ ಇಳ್ತ್. ಅದ್ ಕಿನ್ನರ ಲೋಕ. ಆಳ್‌ಗ ಓಡಿ ಬಂದ್ ಅವನ ಹಿಡ್ಕೊಂಡೊ. ಅವರ ರಾಣಿ ಹಕ್ಕಲೆ ಕರ್ಕಂಡ್ ಹೋದೊ. ಇಂವ ಹೆದ್ರ್‌ತಿಲ್ಲೆ. ರಾಣಿ ಕೇಳ್ತ್, 'ನೀ ಯಾಕೆ ಬಂದೇಂತ'. ಆಗ ಅಂವ ಎದೆ ಮುಂದೆ ಮಾಡಿ, 'ನಿನ್ನ ರೆಕ್ಕೆ ಕುದುರೆ ನಾವು ಕಷ್ಟ ಪಟ್ಟ್ ಮಾಡ್ಕ

ಹೂನ ಕೊಪ್ಪಳನ ಧ್ವಂಸ ಮಾಡಿಟ್ಟು. ಅದಕ್ಕೆ ನಾ ಬಂದೆ. ನಂಗೆ ನ್ಯಾಯ ಬೇಕೂಂತ'
ಹೇಳ್ತ್. ಇಂವನ ಧೈರ್ಯ ನೋಡಿ ರಾಣಿಗೆ ಬಾಳ ಕುಸಿ ಆದೆ. ಅದೂ ಅಲ್ಲದೆ ಅಂವ ಬಾರಿ ಪೊರ್ಲು ಇತ್ತ್. ರಾಣಿಗೆ ಕುಸಿ ಆದೆ. ಅದ್ ಹೇಳ್ತ್. 'ನಿಂಗೆ ನನ್ನ ಇಡೀ ರಾಜ್ಯನೇ ಕೊಟ್ಟನೆ, ನನ್ನ ಮೊದುವೆ ಆಗ್ಂತ. ಅದ್ಕೆ ಅಂವ ಹೇಳ್ತ್, 'ನೀ ನನ್ನೊಟ್ಟಿಗೆ ಬಾ, ನಂಗೆ ಅಪ್ಪ-ಅಮ್ಮ ಒಳೊ. ಅವು ಒಪ್ಪಿರೆ ಆದೂಂತ ಹೇಳ್ತ್. ಸರೀಂತ ರಾಣಿ ಅವನೊಟ್ಟಿಗೆ ರೆಕ್ಕೆ ಕುದ್ರೆ ಮೇಲೆ ಕುದ್ ಕಂಡ್ ಇಂವನ ರಾಜ್ಯಕ್ಕೆ ಬಾತ್.

ಇತ್ತ ರಾಜ್ಯಲಿ ರಾಜಂಗೆ ಬಾರೀ ಗಾಬೆರಿ ಆದೆ. ಸಣ್ಣ ಮಂಜ ಎಲ್ಲಿ ಹೋತೊಂತ ದೊಡ್ಡ ಮಕ್ಕಳಿಗೆ ಸಮಾ ರಾಜ ಬೊಯ್ದದೆ. ಸೈನಿಕರ ಬೇರೆ ಬೇರೆ ಕಡೆಗೆ ಹುಡ್ಕಿಕೆ ಕಳ್ಸಿದೆ. ಆದರೆ ಯಾರಿಗೂ ಅಂವ ಸಿಕ್ಕಿತಿಲ್ಲೆ. ರಾಜ ತುಂಬಾ ಚಿಂತೆಲಿ ಇದ್ದದೆ. ಅಷ್ಟಾಕನ ಆಕಾಸಂದ ಬೆಳ್ಳಿ ರೆಕ್ಕೆ ಕುದುರೆ ಇಳ್ಕಂಡ್ ಬಂದ್ ರಾಜನ ಅರಮನೆ ಮುಂದೆ ಇಳ್ತ್. ಇದರ ನೋಡಿ ಸೈನಿಕರ್ ಓಡೋಡಿ ಹೋಗಿ ರಾಜಂಗೆ ತಿಳ್ಸಿದೊ. ರಾಜ ಬಾತ್. ಇವರಿಬ್ಬರ ನೋಡಿ ಅಚ್ಚರಿ ಪಟ್ಟತ್. ಸಂಣ ಮಂಜ ನಡ್ದ ಕತೆ ಎಲ್ಲಾ ರಾಜಂಗೆ ತಿಳ್ಸಿದೆ. ರಾಜ ಸಂತೋಷಂದ ಅವ್ಕೆ ಇಬ್ರೊರಿಗೆ ಮೊದುವೆ ಮಾಡ್ಸಿದೆ. ಅವು ಇಬ್ರೊರು ರಾಜನ ಅಪ್ಪಣೆ ಪಡ್ದ್ ಕಿನ್ನರ ಲೋಕಕ್ಕೆ ಹೋದೊ. ಅಲ್ಲಿ ಸುಕಲಿ ಇದ್ದೊ. ನಾ ನೋಡಿಕಂಡ್ ಬಂದೆ. ಮಕ್ಕಳೇ ನೀವೂ ಒಮ್ಮೆ ಹೋಗಿ ನೋಡಿ ಬನ್ನೀಂತ ಅಜ್ಜಪ್ಪ ಕತೆನ ಮುಗ್ಸಿದೊ.

****

ಅಜ್ಜಪ್ಪನ ಕತೆಗಳ ಭಂಡಾರಂದ ಎರಡನೇ ಕತೆ

“ಬುರ್ಡ ಬುರ್ಡಿ”

ಒಂದ್ ಊರ್‌ಲಿ ಒಂದ್ ಅಜ್ಜಿ ಇತ್ತ್. ಅದ್ಕೆ ಐದ್ ಜನ ಪುಳ್ಳಿಕ. ಅದರ್ಲಿ ಅಕೇರಿಯಂವ ಹೆಡ್ಡ. ಅವನ ಬುರ್ಡಂತ ಅಜ್ಜಿ ಕರೀತಿತ್ತ್. ಬುರ್ಡಂಗೆ ಅಜ್ಜಿನ ಕಂಡ್ರೆ ತುಂಬಾ ಪ್ರೀತಿ. ಆದರೆ ಅಜ್ಜಿಗೆ ಇಂವಂದ ಏನೂ ಆಕಿಲ್ಲೇಂತ ಸಸಾರ. ಅಜ್ಜಿ ಗಂಜಿ ಬೇಯಕನ ಗಂಜಿ ಮಡ್ಕಗೆ ಒಂದು ಕೊಂಡೆ ತುಪ್ಪ ಹಾಕಿ ಅದರ ಅಡ್ಕರಕೆ ಬಾಗ್‌ತಿತ್ತ್. ಅಂಣಂದರಿಗೆ ಗೆಯ್ಯುವ ಮಕ್ಕಾಂತ ಹುಗ್ಗ ಕೊಡ್ತಿತ್ತ್. ಬುರ್ಡಂಗೆ ಇಂವ ಯಾವುದಕ್ಕೂ ಬಾರದಂವಾಂತ ತೆಳಿಗೆ ಒಂದು ಮಂಡಿ ಹುಗ್ಗ ಹಾಕಿ ಕೊಡ್ತಿತ್ತ್. ತುಪ್ಪ ಎಲ್ಲಾ ತೆಳಿಲಿ ನಿಲ್ತಿತ್ತ್. ಹಾಂಗಾಗಿ ಬುರ್ಡ ದಿನಂದ ದಿನಕ್ಕೆ ಗುಂಡ್ ಗುಂಡಾತ್.

ಒಂದಿನ ಅಜ್ಜಿ ಪುಳ್ಳಿಕಳ ಕರ್‍ದ್ ನಮ್ಮ ಮನೆ ಕುಂಬು ಆಗುಟ್ಟು. ನಾವು ಕಾಡಿಗೆ ಹೋಗಿ ಬೆದ್ರ್ ಕಡ್ದ್ ತರೊಮೋಂತ

ಹೇಳಿ, ಬೇಗ ಬೇಗ ಗಂಜಿ ಬೇಸಿ, ಕುಡುನ ಪೊಜ್ಜಿ ಕಡ್ದ್ ಬುತ್ತಿ ಕಟ್ಟಿತ್. ಅದರ ಹೊರಿಕೆ ಬುರ್ಡನ ಕೈಲಿ ಕೊಡ್ತ್. ಅಜ್ಜಿ, ಪುಳ್ಳಿಕ ಕಾಡಿಗೆ ಹೋದೊ. ಬೆದ್ರ್ ಕಡ್ದ್ ಹಾಕಿದೊ. ಹಿಂಬೊತ್ತ್ ಆಕನ ಹೊರುವಸ್ಟ್ ಹೊತ್ತ್‌ಕಂಡ್ ಮನೆಗೆ ಬಂದೊ. ಉಳ್ದದರ ನಾಳೆ ತರೊವೋಂತ ಹೇಳ್ದೊ. ಹೀಂಗೆ ಮನೆಗೆ ಬೇಕಾದ ಬೆದ್ರ್‌ನ ಕಡ್ದ್ ತಾಕೆ ಮುರ್ನಾಲ್ಕ್ ದಿನ ಕಾಡಿಗೆ ಹೋದೋ. ದೊಡ್ಡ ಪುಳ್ಳಿಕಳಿಗೆ ಅಜ್ಜಿನ ಮೇಲೆ ಬಾಳ ಸಿಟ್ಟ್ ಬಾತ್. 'ಈ ಅಜ್ಜಿ ನಮ್ಮ ಕುದ್ರಿಕೆ ಬುಡ್ದುಲ್ಲೆ. ಎಷ್ಟ್ ಬಂಜ ಬರ್ಸಿದೆ'. ಎಂತ ಮಾತಾಡಿಕೊಂಡೊ. ಬುರ್ಡಂಗೆ ಹೇಳ್ತಿಲ್ಲೆ. ಕಾಡಲಿ ಒಂದೊಂದ್ ಬೆದ್ರ್‌ನ ದೊಣ್ಣೆ ಮಾಡ್ಕಂಡ್ ಅಜ್ಜಿನ ಮಂಡೆಗೆ ಸಮಾ ಬೊಡ್ದೊ. ಅಜ್ಜಿ ಪಡ್ಚ. ಅಜ್ಜಿನ ಹೆಣನ ಬೆದ್ರ್ ಹಿಂಡ್ಲ್‌ಗೆ ಹಾಕಿ ಕಿಚ್ಚಿ ಕೊಟ್ಟೊ. ಅಷ್ಟಾಕನ ಬುರ್ಡ್ ಉಸ್ರ್ ಮೇಲೆ ಕೆಳಗೆ ಮಾಡ್ಕಂಡ್ ಬುತ್ತಿ ಗಂಟ್ ಹೊತ್‌ಕಂಡ್ ಸೇಂಕಿಕಂಡ್ ಬಾತ್. ಆಗ ಬೆದ್ರ್ ಹಿಂಡ್ಲ್‌ಂದ ಅಜ್ಜಿನ ತಲೆ ಬುರ್ಡೆ ಪಟಾರಾಂತ ಒಡ್ಡ ಸದ್ದ್ ಕೇಳ್ತ್. 'ಅದ್ ಎಂತ ಸದ್ದೂಂತ' ಬುರ್ಡ ಕೇಳ್ತ್. ಅದ್ಕೆ ಅಣ್ಣಂದರ್, 'ಅದ್ ಬೆದ್ರ್ ಹಿಂಡ್ಲಿಗೆ ಕಿಚ್ಚಿ ಬಿದ್ದುಟ್ಟು. ಬೆದ್ರ್ ಸುಡಿಕನ ಪಟಪಟಾಂತ ಹೇಳ್ದೇಂತ' ಹೇಳ್ದೊ. ಬುರ್ಡ ನಂಬಿತ್. 'ಉಗ್ಗವ ಎಲ್ಲೀಂತ' ಕೇಳ್ತ್. 'ಅದರ ಹುಲಿ ಹಿಡ್ತ್‌ಂತ' ಅಣ್ಣಂದರ್ ಹೇಳ್ದೊ. ಬುರ್ಡ ಮರ್ಟತ್. ಅಣ್ಣಂದ್ರ್ ಹೊರುವಸ್ಟ್ ಬೆದ್ರ್ ಹೊತ್ತ್‌ಕಂಡ್ ಮನೆಗೆ ಬಂದೊ. ಅವು ನಾಕ್ ಜನ ಹೊಸ ಮನೆ ಕಟ್ಟಿದೊ. ಬುರ್ಡನ, 'ನೀ ನಮ್ಮೊಟ್ಟಿಗೆ ಬೇಡ. ನಿಂಗೆ ಗೈಯ್ಯಕ್ಕೆ ಆದುಲ್ಲೆ. ನೀ ಹಳೆ ಮನೇಲೇ ಇರ್‌ಂತ' ಹೇಳಿ ಅವನ ಹಳೆ ಮನೇಲೇ ಬುಟ್ಟ್ ಇವು ಹೊಸಮನೆಗೆ ಹೋದೊ.

ಅಣ್ಣಂದರ್ ನಾಕ್ ಜನ ಮೊದ್ವೆ ಆದೊ. ತಮ್ಮಂಗೂ

ಒಂದು ಯಾರೂ ಗತಿ ಇಲ್ಲದ ಬಡ ಗೂಡೆನ ಮೊದ್ವೆ ಮಾಡ್ಸಿದೊ. ಬುರ್ಡನ ಹೆಣ್ಣ್‌ನ ಬುರ್ಡಿಂತ ಕರ್‍ದೊ. ಆದರೆ ಬುರ್ಡನ ಹೆಣ್ಣ್ ಗಟ್ಟಿಗಿತ್ತಿ. ಒಳ್ಳೆ ಗೈಮೆಗಾರ್ತಿ. ಇದರ ನೋಡಿ ಅಣ್ಣಂದರಿಗೆ ಬುರ್ಡನ ಮೇಲೆ ಹೊಟ್ಟೆಕಿಚ್ಚ್ ಆತ್. ಬುರ್ಡ ಮತ್ತ್ ಅಂವನ ಹೆಣ್ಣ್ ಬುರ್ಡಿ ಕೆಲ್ಸಕ್ಕೆ ಹೋಕನ ಅವನ ಮನೆಗೆ ಕಿಚ್ಚಿ ಕೊಟ್ಟೊ. ಪಾಪ ಅವು ಇಬ್ಬೊರು ಮನೆಗೆ ಬಾಕನ ಮನೆ ಹೊತ್ತಿ ಬೂದಿ ಆಗುಟು. ಬುರ್ಡಿಗೆ ಗೊತ್ತಾತ್. ಅದ್ ಭಾವಂದರ ಕೆಲ್ಸಾಂತ. ಅದ್ ಮಾತಾಡ್ತಿಲ್ಲೆ. ಬುರ್ಡನ ಹಿಡ್ಕಂಡ್ ಬುರ್ಡಿ ಮನೆ ಬೂದಿನ ಗುಡ್ಸಿ ಗೋಣಿಲಿ ತುಂಬಿಸಿತ್. ಇಬ್ಬೊರು ಹೊರುವಷ್ಟ್ ಹೊತ್ತ್‌ಕಂಡ್ ಸಂತೆಗೆ ಹೋದೊ. ದಾರಿಲಿ ಬುರ್ಡಿ ಹೇಳ್ದೆ, ‘ಇದ್ ನಮ್ಮ ಚಿನ್ನ. ಇದರ ಮಾರಿರೆ ನಮ್ಮ ಮುಂದೆನ ಬೊದ್ಕಿಗೆ ದಾರಿ ಸಿಕ್ಕುದೂಂತ.’ ಹೆಡ್ಡ ಬುರ್ಡಂಗೆ ಅರ್ಥ ಆತ್ಲೆ. ಅಂವ ಮಾತಾಡದೆ ಹೆಣ್ಣ್‌ನ ಹಿಂದೆ ಹೋತ್. ಬುರ್ಡಿ ಗಂಡನೊಟ್ಟಿಗೆ ಹೇಳ್ತ್, ಸಂತೆಲಿ ಯಾರಾದರೂ ಬೂದಿ ತಕಂಬವು ಒಳೊನೋಂತ ಇಚಾರ್ಸಿಕಂಡ್ ಬನ್ನೇಂತ ಹೋತ್. ಬುರ್ಡ ಗೋಣಿ ಚೀಲಗಳಿಗೆ ಪಾರ ಕುದ್ದತ್. ಅಷ್ಟಾಕನ ಒಬ್ಬ ಸಾವ್ಕಾರ, ಆಳ್ ಜನಂಗಳೊಂದಿಗೆ ಅಲ್ಲಿಗೆ ಬಾತ್. ‘ಈ ಗೋಣಿ ಚೀಲಲಿ ಏನುಟ್ಟೊಂತ’ ಕೇಳ್ತ್. ಅದ್ಕೆ ಬುರ್ಡ, ‘ಇದ್ ನಮ್ಮ ಪಾಲ್‌ನ ಬಂಗಾರಾಂತ’ ಹೇಳ್ದ. ಸಾವ್ಕಾರಂಗೆ ಆಶೆ ಆತ್. ಬುರ್ಡನ ನೋಡಿಕನ ಸಾವ್ಕಾರಂಗೆ ಹೆಡ್ಡನಾಂಗೆ ಕಾಂಬತಿತ್ತ್. ಸಾವ್ಕಾರ ಹೇಳ್ತ್, ‘ಇಂದಾ ಇದರ್‍ಲಿ ತುಂಬಾ ದುಡ್ಡು ಉಟ್ಟು. ಈ ದುಡ್ಡ್‌ನ ಗಂಟ್‌ನ ನೀ ತಕ. ನಿನ್ನ ಗಂಟ್‌ನ ನಂಗೆ ಕೊಡೂಂತ’ ಹೇಳಿ, ಅಂಬೆರ್ಪ್‌ಲಿ ಬುರ್ಡನ ಹಕ್ಕಲೆ ಇಸಿಕಂಡ್ ಇದ್ದ ಗೋಣಿ ಚೀಲಂಗಳ ಅವನೊಟ್ಟಿಗೆ ಬಂದ ಆಳ್‌ಗಳ ಕೈಯ್‌ಲಿ ಹೊರ್ಸಿಕಂಡ್ ಹೋತ್. ಬುರ್ಡಿ ಬಂದ್ ಗಂಡನೊಟ್ಟಿಗೆ

ಗೋಣಿ ಚೀಲಗ ಎಲ್ಲೀಂತ ಕೇಳ್ತ್. ಇಂದಾ ಈ ದುಡ್ಡುನ ಗಂಟ್‌ನ ನಂಗೆ ಕೊಟ್ಟ್ ಸಾವ್ಕಾರ ಅವನ ಆಳ್‌ಗಳ ಕೈಲಿ ಹೊರ್ಸಿಕಂಡ್ ಹೋದೋಂತ ಬುರ್ಡ ಹೇಳ್ತ್. ಏನೋ ಎಡವಟ್ಟ್ ನನ್ನ ಹೆಡ್ಡ ಗಂಡಂದ ಆಗುಟ್ಟೂಂತ ಬುರ್ಡಿಗೆ ಗೊತ್ತಾತ್. ನೀ ಏನಂತ ಹೇಳ್ದೇಂತ ಗಂಡನ ಕೇಳ್ತ್. ಇದ್ಕೆ ಬುರ್ಡ, 'ಅವು ಕೇಳ್ದೊ ಇದರೊಳಗೆ ಏನುಟ್ಟೂಂತ? ನಾ ಹೇಳ್ದೆ ಇದ್ ನಮ್ಮ ಪಾಲ್ನ ಚಿನ್ನಾಂತ' ಹೇಳ್ತ್. ಇದರ ಕೇಳಿ ಬುರ್ಡಿ ಹಣೆ ಹಣೆ ಬಡ್ಕಂಡತ್. ಅವುಕೆ ಗೊತ್ತಾದರೆ ನಮ್ಮ ಬುಡಿಕಿಲ್ಲೇಂತ ಸಂತೆ ಎಲ್ಲಾ ಅವರ ಬುರ್ಡಿ ಹುಡ್ಕಿತ್, ಸಾವ್ಕಾರ ಮತ್ತು ಅವನ ಕೆಲ್ಸದೊವು ಎಲ್ಲೂ ಕಾಂಬಕೆ ಸಿಕ್ಕಿತಿಲ್ಲೆ. ಕಡೆಗೆ ದೇವ್ರೇ ಗತೀಂತ ಮನೆಗೆ ಗಂಡನ ಕರ್ಕಂಡ್ ಹೋತ್. ಮನೆ ಹಿಂದೆ ಒಂದ್ ಗುಂಡಿ ತೆಗ್ದ್‌ದ್ ಆ ದುಡ್ಡುನ ಗಂಟ್‌ನ ಅಡ್ಗಿಸಿ ಇಸಿ ಅದರ ಮೇಲೆ ಮಣ್ಣ್ ಮುಚ್ಚಿತ್. ಆ ಹಳೆ ಮನೆ ಹಕ್ಕಲೆ ಅಲ್ಲಿ ಇಲ್ಲಿ ಬಿದ್ದ್‌ಕಂಡ್ ಇದ್ದ ಬೆದ್ರ್‌ಲಿ ಗಟ್ಟಿ ಇದ್ದದರ ಊರಿ ಡಬ್ಬಿ ತುಂಡು, ಗೋಣಿ ಚೀಲಗಳ ಅಡ್ಡಕಟ್ಟಿ ಒಂದ್ ಮಾಡಂಗೋಲ್ ಹಾಂಗೆ ಮಾಡಿಕಂಡ್ ಒಂದು ಆರ್ತಿಂಗ ಅಲ್ಲಿ ಇಲ್ಲಿ ಕೆಲ್ಸ ಮಾಡಿಕಂಡ್ ದಿನ ದೂಡ್ತ್. ದುಡ್ಡುನ ಕೇಳಿ ಕಂಡ್ ಯಾರೂ ಬಾತಿಲ್ಲೆ. ಆಗ ಅದ್ಕೆ ಧೈರ್ಯ ಬಾತ್. ಅದ್ ಆ ದುಡ್ಡ್‌ಲಿ ಹಂಞ ಗದ್ದೆ, ತೋಟ, ಮನೆ ತಕಂಡ್ ಗಂಡನೊಟ್ಟಿಗೆ ಅಲ್ಲಿಗೆ ಹೋತ್.

ಈ ಸಂಗತಿ ಬುರ್ಡನ ಅಣ್ಣಂದರಿಗೆ ಗೊತ್ತಾತ್. ಅವು, 'ಎಲಾ ಇವಂಗೆ ದುಡ್ಡು ಎಲ್ಲಿತ್ತ್? ಹೇಂಗೆ ಇವು ಇದೆಲ್ಲಾ ತೆಗ್ದೋಂತ' ಕೇಳಿಕೆ ಅವರ ಹೆಣ್ಮಕ್ಕಳ ಅವನಲ್ಲಿಗೆ ಕಳ್ಸಿದೊ. ಅವು ಬಂದ್ ಬುರ್ಡನ ಹೆಣ್ಣ್ ಬುರ್ಡಿ ಹಕ್ಕಲೆ ಇಚಾರ್ಸಿದೊ. ಅದ್ ಹೇಳ್ತ್, 'ಮನೆ ಬೂದಿ ಮಾರಿ ಈ ಆಸ್ತಿ ತೆಗ್ದೋಂತ.' ಇದರ ಕೇಳಿ ಅಣ್ಣಂದರಿಗೆ

ಆಸೆ ಆತ್. ಮನೆ ಬೂದಿಗೆ ಇಸ್ಟೊಂದ್ ಹಣ ಸಿಕ್ಕುದಾದರೆ ನಾವೂನೂ ಹಾಗೆ ಮಾಡೊಮೋಂತ ಅವು ಕಟ್ಟಿದ ಮನೆಗೆ ಕಿಚ್ಚಿಕೊಟ್ಟ್ ಬೂದಿ ಮಾಡ್ದೋ. ಅದರೆಲ್ಲಾ ಗೋಣಿಲಿ ತುಂಬಿಸಿಕಂಡ್ ಸಂತೆಗೆ ಹೋದೋ. 'ಮನೆ ಬೂದಿ ಬೇಕೇ, ಮನೆ ಬೂದಿ ಬೇಕೇಂತ' ಕರ್ದ್ ಕೇಳ್ದೊ. ಯಾರೂ ತಕಂಡ್‌ತಿಲ್ಲೆ. ಆಗ ಆ ಸಾವ್ಕಾರ, ಅವನ ಆಳ್‌ಗ ಅಲ್ಲಿಗೆ ಬಂದೊ. ಬುರ್ಡನ ಹಾಂಗೆ ಇದ್ದ ಅವನ ಅಣ್ಣಂದರ ನೋಡಿ ಸಿಟ್ಟ್ಂದ, 'ನಂಗೆ ಬೂದಿ ಹಿಡ್ಸಿದವ ಇವನೇಂತ' ಅವ್ಕೆ ಬೆರ್ಸಿ ಬೆರ್ಸಿ ಬೊಡ್ದ್ ಕೈಕಾಲ್ ಮುರ್ದಾಕಿ ಹೋದೋ. ಸಂತೆಗೆ ಹೋದ ಗಂಡಂದರ್ ಬಾತಿಲ್ಲೇಂತ ಅವರ ಹೆಣ್ಮಕ್ಕ ಹುಡ್ಕಿಕಂಡ್ ಬಂದ್, ಕೈಕಾಲ್ ಮುರ್ದ್ ಬಿದ್ದ ಅವರ ನೋಡಿ ಹೆಂಗಾರ ಮಾಡಿ ಜನರ ಸಹಾಯಂದ ಮನೆಗೆ ಹೊರ್ಸಿಕಂಡ್ ಬಂದೊ. ಇತ್ತ ಕುದ್ರಿಕೆ ಮನೆನೂ ಇಲ್ಲೆ. ಅತ್ತ ದುಡ್ಯಕೆ ಗಂಡಂದರೂ ಕೈಕಾಲ್ ಮುರ್ದ್‌ದ್ ಬಿದ್ದೊಳೊ. ಅವರ ಹೆಣ್ಮಕ್ಕ ಗೋಳೋಂತ ಮರ್ಟ್‌ಕಂಡ್ ಬುರ್ಡನ ಮನೆಗೆ ಬಂದೊ. ಬುರ್ಡ ಪಾಪಾಂತ ಹೇಳಿ ಅವರ ಮನೆನ ಕೊಟ್ಟಿಗೆಲಿ ಇರಿಕೆ ಹೇಳ್ತ್. ಅವರ ಹೆಣ್ಮಕ್ಕ ಬುರ್ಡನ ತೋಟಲಿ ಕೆಲ್ಸ ಮಾಡಿ, ಕೈಕಾಲ್ ಮುರ್ದ ಗಂಡಂದರ ಚಾಕ್ರಿ ಮಾಡಿಕಂಡ್ ದಿನಕಳ್ದೊ. ನಾವು ಬೇರೆಯವ್ಕೆ ಅನ್ಯಾಯ ಮಾಡಿರೆ ಅದ್ ತಿರ್ಗಿ ನಾವ್ಗೇ ಅನ್ಯಾಯ ಆದೆ. ಮಕ್ಕಳೇ ಅದ್ಕೇ ಹೇಳ್ದು. ನಾವು ಯಾಗೊಳು ಸತ್ಯ ಧರ್ಮಲಿ ಇರೊಕೂಂತ. ನಾನ್ ಹೋಗಿ ನೋಡಿಕಂಡ್ ಬಂದೆ. ಮಕ್ಕಳೇ ನೀವುನೂ ಹೋಗಿ ಬುರ್ಡ ಬುರ್ಡಿನ ನೋಡಿಕಂಡ್ ಬನ್ನೀಂತ ಅಜ್ಜಪ್ಪ ಕತೆನ ಮುಗ್ಸಿದೊ.

******

“ಅಜ್ಜಪ್ಪನ ಕತೆಗಳ ಭಂಡಾರಂದ ಮೂರನೇ ಕತೆ”

ಏಳ್ ಜನ ರಾಜಕುಮಾರರ ಕತೆ

ಅಂದ್ ಶನಿವಾರ. ಮಧ್ಯಾಹ್ನದ ಮೇಲೆ ಸಾಲೆಗೆ ರಜೆ. ನಾವು ಉಂಡ್‌ದ ಅಜ್ಜಪ್ಪನ ಕತೆ ಹೇಳಿಕಾಗಿ ಹಿಡ್ಕಿದೊ. ಅವು ನಡುಕೋಣೆಲಿದ್ದೊ. ಅಜ್ಜಪ್ಪಾ ಕತೆ ಹೇಳೀಂತ ಕೇಳ್ದೊ. ಹಗ್‌ಲ್ ಕತೆ ಹೇಳಿಕೆ ಆಗದ್. ಕತ್ತಲೆ, ಕತ್ತಲೆ ಆಕನ ಸುರು ಮಾಡೊಮೋಂತ ಅಜ್ಜಪ್ಪ ಹೇಳ್ದೊ. ಯಾಕಜ್ಜಪ್ಪಾಂತ ನಾವು ಕೇಳ್ದೊ. ಹಗ್‌ಲ್ ಕತೆ ಹೇಳ್ರೆ ಸೋದರ ಮಾಂವಂಗೆ ದಾರಿ ಸಿಕ್ಕಿಕ್ಕಿಲ್ಲೇಂತ ಹೇಳ್ದೊ. ನಾವು ಉಪಾಯ ಇಲ್ಲದೆ ಹಿಂಬೊತ್ತ್ ಆಕನ ಮುಟ್ಟಕಾದ್ ಕುದ್ದೊ. ಕತ್ತಲೆ ಆಕಾಕನ ಅಜ್ಜಪ್ಪ ಕತೆ ಸುರು ಮಾಡ್ದೊ.

ಒಬ್ಬ ರಾಜಂಗೆ ಏಳ್ ಜನ ಮಕ್ಕ. ಅದರ್ಲಿ ಅಕೇರಿದ್ ಹೆಣ್ಣ್. ಗೂಡೆ. ತಂಗೇಂತೇಳ್ರೆ ಅಣ್ಣಂದರಿಗೆ ಭಾರಿ ಪ್ರೀತಿ. ಮಕ್ಕ ಬೆಳ್ದ್ ದೊಡ್ಡೋವು ಆದೊ. ವಿದ್ಯೆ, ಬುದ್ಧಿ ಕಲ್ತೊ. ಗಂಡ್ ಮಕ್ಕ ರಾಜನಲ್ಲಿ ನಾವು ದೇಸ ಸುತ್ತಿ ಬಂದವೇಂತ ಹೇಳ್ದೊ. ರಾಜ ಒಪ್ಪಿತ್. ಒಬ್ಬೊಬ್ಬರಿಗೆ ಒಂದೊಂದ್ ಕುದ್ರೆ, ಕರ್ಚಿಗೆ ಬೇಕಾದಷ್ಟ್

ದುಡ್ಡು ಕೊಟ್ಟತ್ತ್. ರಾಜನ ಮಕ್ಕ ಊರು ಬುಟ್ಟೊ. ಹೋಕನ ತಂಗೆನ ಕರ್ದ್, 'ನಿಂಗೇನ್ ಬೇಕ್ ಹೇಳ್ಂತ' ಕೇಳ್ದೊ. ತಂಗೆ ಹೇಳ್ತ್, 'ನಂಗೇನು ಬೇಡ, ನೀವು ಪೊರ್ಲುಲಿ ಹೋಗಿ ಬನ್ನೀಂತ'. ಅದಕ್ಕೆ ದೊಡ್ಡ ಅಣ್ಣ ಹೇಳ್ತ್, 'ನೀ ನಮ್ಮ ಮುದ್ದುನ ತಂಗೆ, ನಿಂಗೆ ಮುತ್ತುನ ಸರ ತನ್ನೀಂತ.' ಇನ್ನೊಬ್ಬ ಹೇಳ್ತ್, 'ನಿಂಗೆ ಹವಳದ ಮಾಲೆ ತನ್ನೀಂತ.' ಒಬ್ಬೊಬ್ಬ ಅಣ್ಣಂಗ ಒಂದೊಂದ್ ಸೊತ್ತ್‌ನ ತನ್ನೀಂತ ಅದ್ಕೆ ಮಾತ್ ಕೊಟ್ಟೊ. ತಂಗೆ ಸಂತೋಸಂದ ಅಣ್ಣಂದರಿಗೆ ಆರತಿ ಎತ್ತಿ ಕುಂಕುಮದ ಬೊಟ್ಟಿಟ್ಟ್ ಕುರ್ದಿ ನೀರ್ನ ಚಾಳೆಗೆ ಹೊಯ್ದ್ 'ಹೋಗಿ ಬನ್ನೀಂತ' ಹೇಳ್ತ್. ಅಣ್ಣಂದರ್ ಹೊರ್ಟೊ. ವರ್ಸ ಒಂದಾತ್, ಎರ್ಡಾತ್, ಮೂರಾತ್ ಮಕ್ಕ ಬಾತೇ ಇಲ್ಲೆ. ರಾಜಂಗೆ ಚಿಂತೆ ಸುರು ಆತ್. ಆಗ ಹೆಣ್ಣ್ ಮಗ ಹೇಳ್ತ್, 'ಅಪ್ಪಾ ನಾ ಅಣ್ಣಂದರ ಹುಡ್ಕಿಕಂಡ್ ಬನ್ನೀಂತ.' ರಾಜ ಹೇಳ್ದ್, 'ಬೇಡ ಮಗಾ, ನೀ ಹೆಣ್ಣ್ ಗೂಡೆ ಬೇಡಾಂತ.' ಆದರೆ ಗೂಡೆ ಒಪ್ಪಿತ್ಲೆ. ರಾಜ ಅದಕ್ಕೆ ಹೆಣ್ಣು ಗೂಡೆ ಆದ್ರೂ ಎಲ್ಲಾ ವಿದ್ಯೆ, ಬುದ್ಧಿ ಕಲ್ಸಿತ್ತ್, ಕುದ್ರೆ ಸವಾರಿ, ಕತ್ತಿ ಕಾಳಗ ಎಲ್ಲಾ ಅದ್ಕೆ ಗೊತ್ತಿತ್ತ್. ಅದ್ ಹೆದ್ರ್ ತಿಲ್ಲೆ. ಅಪ್ಪನೊಟ್ಟಿಗೆ ಕೇಳಿ ಗಂಡ್ ಕಚ್ಚೆ ಹಾಕಿ ತಲೆಗೆ ಮುಂಡಾಸ್ ಕಟ್ಟಿ ಒರೆಲಿ ಖಡ್ಗ ಕೋಸಿ, ಕುದ್ರೆ ಹತ್ತಿ ಅಣ್ಣಂದರ ಹುಡ್ಕಿಕೆ ಹೊರ್ಟ್ಟೇ ಬುಡ್ತ್. ರಾಜಂಗೆ ಭಯ ಆತ್. ಅಂವ ಅದರಷ್ಟೇ ಧೈರ್ಯ ಇದ್ದ ಅಂವನ ತಮ್ಮನ ಮಗಳ್ನೂ ಒಟ್ಟಿಗೆ ಕಳ್ಸಿತ್. ಅವಿಬ್ಬೊರು ಗಂಡುಡುಗೆ ತೊಟ್ಟ್, ಒರೆಲಿ ಖಡ್ಗ ಕೋಸಿಕಂಡ್, ತಲೆಗೆ ಮುಂಡಾಸ್ ಕಟ್ಟಿಕಂಡ್ ಕುದ್ರೆ ಹತ್ತಿ ಹೊರ್ಟೊ.

ಅವಿಬ್ಬೊರು ದೇಸದ ಗಡಿ ದಾಟಿ ಪರರಾಜ್ಯಕ್ಕೆ ಹೋದೊ.

ಎದ್ರ್‌ಂದ ಅವರಾಂಗೆ ಊರ್ ಸುತ್ತಿಕೇಂತ ನೆರೆ ರಾಜ್ಯದ ರಾಜಕುಮಾರ, ಮಂತ್ರಿಕುಮಾರ ಕುದ್ರೆ ಹತ್ತಿಕಂಡ್ ಬಾತಿದ್ದೊ. ಇವರ ನೋಡಿ, ಕುದ್ರೆ ನಿಲ್ಸಿ ಮಾತಾಡ್ಸಿದೊ. ಇವುನೂ ದೇಸ ಸುತ್ತಿಕೆ ಹೊರ್ಟೊವೂಂತ ಗೊತ್ತಾಗಿ ಅವ್ಕೆ ಬಾಳ ಕುಸಿ ಆತ್. 'ನಾವು ನಾಕ್ ಜನ ಒಟ್ಟಿಗೆ ಪೋಯೀಂತ' ಹೇಳ್ದೊ. ಗೂಡೆಗಳಿಗೆ ಭಯ ಆತ್. ನಮ್ಮ ಗುಟ್ಟು ಅವ್ಕೆ ಗೊತ್ತಾದೂಂತ. ಆದ್ರೆ ಉಪಾಯ ಇಲ್ಲದೆ ಅವರೊಟ್ಟಿಗೆ ಹೊರ್ಟೊ. ದಾರಿ ಹೋಗುವ ಜನರೊಟ್ಟಿಗೆ ಇಚಾರ್ಸಿದೊ. ' ಈ ಊರ್ಲಿ ನಿಲ್ಲಿಕೆ ಎಲ್ಲಿ ಜಾಗೆ ಸಿಕ್ಕುದೂಂತ.' ಅವು ಒಂದ್ ಅಡಗೂಲಜ್ಜಿನ ಮನೆ ತೋರ್ಸಿದೊ. ಆಗ ನಾ ಕೇಳ್ದೆ.'ಅಡಗೂಲಜ್ಜಿ ಅಂದ್ರೆ ಯಾರ್ ಅಜ್ಜಪ್ಪಾಂತ.' ಅದಕ್ಕೆ ಅಜ್ಜಪ್ಪ ಹೇಳ್ದೊ, 'ಆ ಕಾಲಲಿ ಈಗಿನ ಹಾಂಗೆ ಹೋಟ್ಲ್, ಗೀಟ್ಲ್ ಇತ್ತಿಲ್ಲೆ. ದಾರಿ ಹೋಗೋವ್ಕೆ ಕೆಲವು ಜನ ಹೊಟ್ಟೆ ಪಾಡಿಗಾಗಿ ತಮ್ಮ ಮನೆಲಿ ಊಟ ಕೊಟ್ಟ್ ಮಲ್ಗಿಕೆ ಜಾಗ ಕೊಟ್ಟಿದ್ದೊ. ಅಡ್ಗೆ ಮಾಡಿ ಹಾಕುವ ಅಜ್ಜಿಕಳಿಗೆ ಅಡಗೂಲಜ್ಜೀಂತ ಹೇಳ್ತಿದ್ದೋಂತ' ಅಜ್ಜಪ್ಪ ಕತೆ ಮುಂದರ್ಸಿದೊ. ಇವು ನಾಕ್ ಜನ ಅಲ್ಲಿಗೆ ಹೋಗಿ ಜಾಗೆ ಕೇಳ್ದೊ. ಅಡಗೂಲಜ್ಜಿ ಅವ್ಕೆ ಒಂದು ಕೋಣೆ ತೋರ್ಸಿತ್. ಊಟ ಕೊಟ್ಟತ್. ಇರ್ಳ್ ಮಲ್ಗಿಕನ ಗೂಡೆಗ ಮುಂಡಾಸ್ ಬಿಚ್ಚಿತಿಲ್ಲೆ. ಮಂತ್ರಿಕುಮಾರಂಗೆ ಅನ್ಮಾನ ಬಾತ್. ಅಂವ ಗುಟ್ಟ್‌ಲಿ ರಾಜಕುಮಾರಂಗೆ ಹೇಳ್ತ್, 'ನಂಗೇನೊ ಎರ್ಡ್ ಹೈದಂಗ ಗೂಡೆಗಳಾಂಗೆ ಕಂಡವೇಂತ.' ಅದ್ಕೆ ರಾಜಕುಮಾರ ಒಪ್ಪಿತಿಲ್ಲೆ. 'ಹಾಂಗೆಲ್ಲಾ ಗೂಡೆಗಳ ಅಪ್ಪಂದರ್ ದೇಸ ಸುತ್ತಿಕೆ ಕಳ್ಸಿಕ್ಕಿಲ್ಲೆ. ನೀ ಸುಮ್ಮನೆ ಮಲ್ಗ್‌ಂತ 'ಹೇಳ್ತ್. ಮಾರ್ಣೆ ದಿನ ಅಜ್ಜಿನೊಟ್ಟಿಗೆ ಕೇಳ್ದೊ, 'ಅಜ್ಜೀ ಈ ಊರ್‌ಲಿ ಏನ್ ವಿಸೇಸಾಂತ.' ಅಜ್ಜಿ ಹೇಳ್ತ್, ಈ

ಊರ್ಲಿ ಭಾರಿ ದೊಡ್ಡ ಶ್ರೀಮಂತ ಸೂಳೆ ಉಟ್ಟೊಂತ'. ಆಗ ದೊಡ್ಡ ತಮ್ಮ ಸೂಳೇಂತೇಳ್ರೆ ಯಾರಜ್ಜಪ್ಪಾಂತ ಕೇಳ್ತ್. ಆಗ ಅಜ್ಜಪ್ಪ, 'ಅವು ಗಂಡ್‌ಗಳ ಮರ್‍ಳ್ ಮಾಡಿ ಜೀವನ ಸಾಗ್ಸುವ ಒಂದು ಜಾತಿ ಹೆಣ್ಣ್‌ಗಾಂತ' ಹೇಳ್ದೊ.

ಅಜ್ಜಪ್ಪ ಕತೆ ಮುಂದುವರ್ಸಿದೊ. ಅಜ್ಜಿ ಹೇಳ್ತ್, 'ಸೂಳೆನ ಹಕ್ಕಲೆ ಒಂದು ಕೊತ್ತಿ ಉಟ್ಟು. ಅದರ ತಲೆ ಮೇಲೆ ದೀಪ ಇಸಿ ಸೂಳೆ ಇರ್‍ಳ್ ಪಗ್ಡೆ ಆಟ ಆಡ್ದೆ. ಸೋತರೆ ಅವರಕ್ಕಲೆ ಇದ್ದದರ ಕಿತ್ತ್‌ಕಂಡ್, ಅವ್ಳ ಹೂನ ಕೊಪ್ಪಳಕ್ಕೆ ನೀರ್ ಹ್ಯೊಯ್ಯಕ್ಕೆ ಕಳ್ಸಿದೆ. ಎಲ್ಲರ ಬಂಧನಲಿ ಇಸಿದೇಂತ' ಅದರ ಕೇಳಿ ಅರ್‍ಸು ಮಕ್ಕಳಿಗೆ ಸೋಜಿಗ ಆತ್. ನಾವೂ ನೋಡೋಮೋಂತ ಹೊರ್‍ಟೊ. ಇರ್‍ಳ್ ಅದರ ಮನೆಗೆ ಹೋದೊ. ನಾಕ್ ಜನ ಹೊಂತಗಾರ ಹೈದಂಗ ಒಟ್ಟಿಗೆ ಬಂದದರ ನೋಡಿ ಸೂಳೆಗೆ ಬಾಳ ಕುಸಿ ಆತ್. ಪಗಡೆ ಹಾಸ್ ತಂದ್ ಇವ್ರ ಎದ್ರಿಗೆ ಹಾಸಿತ್. ರಾಜಕುವಾರ, ಮಂತ್ರಿಕುಮಾರ ಆಟಕ್ಕೆ ಕುದ್ದೊ. ಸೂಳೆನ ಹಕ್ಕಲೆ ಒಂದು ಕೊತ್ತಿ ಬಂದ್ ಕುದ್ದತ್. ಕೊತ್ತಿ ತಲೆ ಮೇಲೆ ಒಂದು ಚಿಬುಳಿ ಇಸಿ, ಅದ್ಕೆ ಎಂಣೆ ಹ್ಯೊದ್ ನೆಣೆ ಹಾಕಿ ದೀಪ ಹೊತ್ತಿಸಿತ್. ಕೊತ್ತಿ ಕಣ್ಣ್ ಮುಚ್ಚಿ ಹಂದಾಡದೆ ಕುದ್ದತ್. ಆಟ ಸುರು ಆತ್. ಮೂರು ಆಟಲೂ ರಾಜಕುಮಾರ, ಮಂತ್ರಿಕುಮಾರ ಸೋತೊ. ಸೂಳೆ ಚಪ್ಪಾಳೆ ತಟ್ಟಿತ್. ಆಗ ರಕ್ಕಸರ ಹಾಂಗೆ ಇದ್ದ ನಾಕ್ ಜನ ಹೊಂತಗಾರ ಆಳ್‌ಗ ಬಂದೊ. ಇವರ ಹಕ್ಕಲೆ ಇದ್ದದನ್ನೆಲ್ಲಾ ಕಿತ್‌ಕಂಡ್ ಇವರ ಇಬ್ಬರ ಎಳ್ಕೊಂಡ್ ಹೋಗಿ ಹೂನ ಕೊಪ್ಪಳದ ಬಾಗಿಲ್ ತೆಗ್ದ್ ಅದರೊಳಗೆ ದೂಡಿ ಬೀಗ ಹಾಕಿದೊ.

ಇದನ್ನೆಲ್ಲಾ ಗೂಡೆಗ ನೋಡ್ದೊ. ಸೂಳೆ ಹೇಳ್ತ್, 'ಆಟ

ಆಡೂಮೋಂತ.' ಗೂಡೆಗ, 'ನಾಳೆ ಬಂದವೇಂತ' ಹೇಳಿ ಅಲ್ಲಿಂದ ಅಡಗೂಲಜ್ಜಿ ಮನೆಗೆ ಬಂದೊ. ಅಜ್ಜಿ,' ಉಳ್ದವು ಇಬ್ಬೊರು ಎಲ್ಲೀಂತ' ಇಚಾರ್ಸಿತ್. ಅವು ಆಟಲಿ ಸೋತ್ ಬಂಧನಲಿ ಒಳೋಂತ ಹೇಳ್ದೊ. ಆಗ ಅಜ್ಜಿ ಹೇಳ್ತ್, ' ನೀವು ನಾಳೆ ಅಲ್ಲಿಗೆ ಹೋಗ್ಬೋಡಿ. ನೀವೂನೂ ಆಟಲಿ ಸೋತ್ ಸೂಳೆನ ಹೂನ ಕೊಪ್ಪಳಕ್ಕೆ ನೀರ್ ಹುಯ್ಯೊಕಾದೂಂತ.' ಗೂಡೆಗ ಒಪ್ಪಿತಿಲ್ಲೆ. ಅವ್ಕೆ ಅನ್ಮಾನ ನಮ್ಮ ಅಣ್ಣಂದರುನೂ ಸೂಳೆನ ಬಂಧನಲಿ ಇರ್‍ವೋಂತ. ಗೂಡೆಗ ಅಜ್ಜಿನಲ್ಲಿ 'ನಾವು ಹೋಗಿಯೇ ಹೋದವೇಂತ' ಹೇಳ್ದೊ. ಅಜ್ಜಿಗೆ ಇವರಿಬ್ಬರ ಒಟ್ಟಿಗೆ

ಬಾಳ ಪಿರೀತಿ ಆತ್. ಅದ್ ಇವ್ಕೆ ಹೇಳ್ತ್, 'ನಾ ನೀವ್ಗೆ ಮೂರು ಎಲಿಮೊರಿನ ಹಿಡ್ದ್‌ಕೊಟ್ಟನೆ, ನೀವು ಅದರ ಚೀಲದೊಳಗೆ ಇಸಿಕೆಣೆ, ನೀವು ಸೋಲುವ ಅಂದಾಜಿ ಬಾಕನ ಒಂದು ಎಲಿಮೊರಿನ ಬುಡಿನಿ. ಅದ್ ಓಡಿಕನ ಅದರ ಹಿಡಿವ ಆಸೆಗೆ ಕೊತ್ತಿ ಹಾರ್‍ದೆ. ಆಗ ದೀಪ ಕಂಕಣೆ ಆದೆ. ಆಗ ನೀವು ಪಗಡೆ ಹಾಸ್‌ನ ಮೊಗ್ಚಿ ಇಸಿನಿ. ನೀವೇ ಗೆದ್ದರೇಂತ' ಹೇಳ್ತ್. ಗೂಡೆಗ ಒಪ್ಪಿದೊ. ಅಜ್ಜಿ ನಾವ್ಗೆ ಇಸ್ಟ್ ಸಹಾಯ ಮಾಡಿಕನ ಅಜ್ಜಿನೊಟ್ಟಿಗೆ ನಾವು ಸತ್ಯ ಸಂಗತಿ ಹೇಳೊಕೂಂತ ಗೂಡೆಗ ಮಾತಾಡಿಕಂಡ್, ನಾವ್ ಯಾರ್, ಯಾಕೆ ಬಂದೋಂತ ಎಲ್ಲಾ ಸತ್ಯ ಸಂಗತಿಗಳ ಗೂಡೆಗ ಅಜ್ಜಿನೊಟ್ಟಿಗೆ ಹೇಳ್ದೊ.ಅಜ್ಜಿಗೆ ಗೂಡೆಗಳ ಸಾಹಸಕ್ಕೆ ಬಾಳ ಕುಸಿ ಆತ್. ಅವ್ಕೆ ಮೀಯಕೆ ನೀರ್ ಕಾಸಿ ಕೊಟ್ಟತ್. ಗಮ್ಮತ್ತ್‌ನ ಅಡ್ಗೆ ಮಾಡಿ ಬಡ್ಸಿತ್. ಬೊಳ್ಪುಗೆ ಬೇಗ ಎದ್ದ್ ಮೂರು ಎಲಿಮೊರಿಗಳ ಹಿಡ್ದ್ ಮೂರು ಚೀಲಲಿ ತುಂಬಿಸಿ ಬಾಯಿ ಕಟ್ಟಿ ಗೂಡೆಗಳಿಗೆ ಕೊಟ್ಟತ್. ನೀವು ಈಗ ನಿದ್ದೆ ಮಾಡಿ. ಹಿಂಬೊತ್ತ್ ಹೊರ್‍ಡೀಂತ ಅಜ್ಜಿ ಹೇಳ್ತ್

ಕತ್ತಲಾಕನ ಗೂಡೆಗ ಎದ್ದ್, ಗಂಡುಡುಗೆ ತೊಟ್ಟ್, ಮುಂಡಾಸ್ ಕಟ್ಟಿ, ಒರೆಲಿ ಕತ್ತಿ ಕೋಸಿ, ಅಜ್ಜಿ ಹಿಡ್ದ್ ಕೊಟ್ಟ ಎಲಿಮೊರಿಗಳ ಜೋಳಿಗೆಲಿ ತುಂಬಿಸಿಕಂಡ್ ಗೂಡೆಗ ಸೂಳೆ ಮನೆಗೆ ಹೊರ್ಟೊ. ಸೂಳೆ ಬಾಳ ಕುಸಿಲಿ ಆಟ ಸುರು ಮಾಡ್ತ್. ಗೂಡೆಗ ಸೋಲುವ ಅಂದಾಜ್ ಆಕನ ಮೆಲ್ಲಗೆ ಒಂದು ಚೀಲನ ಬಾಯಿ ಬಿಚ್ಚಿತ್. ಆಗ ದಢಕ್ಕನೆ ಎಲಿ ಮೊರಿ ಹೊರಗೆ ಹಾರ್ತ್. ಅದರ ನೋಡಿ ಕೊತ್ತಿ ಹಾರಿ, ಎಲಿನ ಹಿಡ್ತ್. ದೀಪ ಕಂಕಣೆ ಆತ್. ಥತ್ತೇರೀಂತ ಸೂಳೆ ಕೊತ್ತಿಗೆ ಬೊಯ್ದ್ ದೀಪ ಹೊತ್ತಿಸಿಕೇಂತ ಒಳಗೆ ಎದ್ದ್ ಹೋತ್. ಗೂಡೆಗ ಪಗಡೆ ಹಾಸ್‌ನ ತಿರ್ಗಿಸಿ ಇಸಿದೊ. ಸೂಳೆ ದೀಪ ಹೊತ್ತಿಸಿ ಕಂಡ್ ಬಂದ್ ಕೊತ್ತಿಗೆ ಎರ್ಡ್ ಬೊಡ್ದ್ ಕುದ್ರಿಸಿ ಅದರ ತಲೆ ಮೇಲೆ ಚಿಬುಳೆ ದೀಪ ಇಸಿತ್. ಕೊತ್ತಿ ಹಂದಾಡದೆ ಕಣ್ಣ್ ಮುಚ್ಚಿ ಕುದ್ದತ್. ಸೂಳೆಗೆ ಸೋಜಿಗ ಆತ್. ಇಷ್ಟ್ ದಿನ ನಾ ಸೋತತಿಲ್ಲೆ. ಈ ಅರ್ಸುಮಕ್ಕ ಬಾಳ ಉಸಾರ್ ಒಳೊ. ಜಾಗ್ರತೆ ಆಡೊಕೂಂತ ಆಟ ಸುರು ಮಾಡ್ತ್. ಎರಡನೆ ಆಟನೂ ಹಾಂಗೇ ಆತ್. ಸೋಲುವ ಅಂದಾಜು ಗೊತ್ತಾಕನ ಗೂಡೆಗ ಎರಡ್ನೇ ಚೀಲನ ಬಿಚ್ಚಿ ಎಲಿಮೊರಿನ ಬುಟ್ಟೊ. ಕೊತ್ತಿ ಎಲಿ ಹಿಡ್ಯಕೆ ಹಾರ್ತ್. ದೀಪ ಕೆಟ್ಟತ್ತ್. ಸೂಳೆ ಸೋತತ್. ಹೀಂಗೆ ಮೂರು ಆಟಲಿ ಸೂಳೆ ಸೋಲಿಕನ ಇವರ ಗೆಲ್ಮೆಗೆ ಸೂಳೆ ಮೆಚ್ಚಿ, ‘ಇಸ್ಟ್ ದಿನ ನನ್ನ ಸೋಲ್ಸಿದೊವು ಯಾರೂ ಇತ್ತಿಲ್ಲೆ. ನೀವು ಗೆದ್ದೊಳೊರಿ. ನೀವ್ಗೇನ್ ಬೇಕೂಂತ ಕೇಳೀಂತ’ ಹೇಳ್ತ್. ಆಗ ಗೂಡೆಗ, ‘ ನೀ ಬಂಧನಲಿ ಇಸಿದ ಹೈದಂಗಳ ಎಲ್ಲಾ ಬುಡೊಕೂಂತ ಹೇಳ್ದೋ. ಸೂಳೆ ಒಪ್ಪಿತ್. ಎಲ್ಲರ ಬಂಧನಂದ ಬುಡ್ಗಡೆ ಮಾಡ್ತ್. ನೋಡಿಕನ ಆ ಗೂಡೆಗಳ ಆರು ಜನ ಅಣ್ಣಂದರೂ ಅದರ್ಲಿ ಇದ್ದೊ. ಅಣ್ಣಂದರ

ನೋಡಿಕನ ತಂಗೆಕ ಓಡಿ ಹೋಗಿ ಅವರ ತಬ್ಬಿಕೊಂಡ್ ಅಣ್ಣಾಂತ ಕರ್ರ್ದೋ. ಆಗ ಅವರ ತಲೆನ ಮುಂಡಾಸ್ ಬಿಚ್ಚಿತ್. ಉದ್ದದ ಕೂದಲ್ ಹರಂಡಿತ್. ಅಣ್ಣಂದರಿಗೆ ಇವರಿಬ್ಬರ ಗುರ್ತು ಸಿಗ್ತ್. ಎಲ್ಲೋವ್ಕ ಸೋಜಿಗ ಆತ್, ಇವು ಗೂಡೆಗಾಂತ. ಇವರೊಟ್ಟಿಗೆ ಇದ್ದ ರಾಜಕುಮಾರ, ಮಂತ್ರಿಕುಮಾರರ್ ಓಡಿ ಬಂದ್ ಇವರ ಎದ್ರ್ ನಿಂತೊ. ಗೂಡೆಗಳಿಗೆ ನಾಚಿಕೆ ಆತ್. ಮಂತ್ರಿಕುಮಾರ ರಾಜಕುಮಾರನೊಟ್ಟಿಗೆ ಹೇಳ್ತ್,' ಅಂದ್ ನಾ ಹೇಳ್ದೇನ್? ನೀ ನಂಬತಿಲ್ಲೆ. ನಂಗೆ ಅಂದೇ ಅನ್ಮಾನ ಇತ್ತ್ಂತ.' ರಾಜಕುಮಾರ ನೆಗಾಡ್ತ್. ಇವರ ಅಣ್ಣಂದರೂ ರಾಜಕುಮಾರ, ಮಂತ್ರಿಕುಮಾರರೂ, ಗೂಡೆಗಳ ಕರ್ಕಂಡ್ ಅಡಗೂಲಜ್ಜಿ ಮನೆಗೆ ಬಂದೊ. ಅಜ್ಜಿಗೆ ಬಾಳ ಕುಸಿ ಆತ್. ಅಜ್ಜಿನೊಟ್ಟಿಗೆ ನೀ ಒಬ್ಬಳೇ ಇಲ್ಲಿ ಇರ್ದು ಬೇಡ. ನಮ್ಮೊಟ್ಟಿಗೆ ನಮ್ಮ ರಾಜ್ಯಕ್ಕೆ ಬಾ. ಸಾಯಕನ ಮುಟ್ಟಾ ನಿನ್ನ ಪೊರ್ಲುಲಿ ನೋಡಿಕೊಂಡವೇಂತ ಹೇಳ್ದೋ. ಅಜ್ಜಿ ಒಪ್ಪಿತ್. ಅಜ್ಜಿನ ಕರ್ಕಂಡ್ ಅವೆಲ್ಲಾ ಗೂಡೆಗಳ ರಾಜ್ಯಕ್ಕೆ ಬಂದೋ. ಗೂಡೆಗಳ ಅಪ್ಪ ರಾಜಂಗೆ ಬಾಳ ಕುಸಿ ಆತ್. ಮಕ್ಕಳ ತಬ್ಬಕೊಂಡತ್. ರಾಜಕುಮಾರ, ಮಂತ್ರಿಕುಮಾರಂಗೆ ಹೇಳ್ತ್. ನಮ್ಮ ಗೂಡೆಗಳ ನೀವಿಬ್ಬೊರು ಮೊದ್ವೆ ಆಗೀಂತ. ಅವು ಹೇಳ್ದೋ, 'ನಾವುಗೆ ಆರ್ ಜನ ತಂಗೆಕ ಒಳೊ. ಅವರ ನಿಮ್ಮ ಮಕ್ಕ ಮದ್ವೆ ಆದರೆ ನಾವು ನಿಮ್ಮ ಗೂಡೆಗಳ ಮೊದುವ ಆದವೇಂತ. ರಾಜ ಒಪ್ಪಿತ್. ಎರ್ಡ್ ರಾಜ್ಯದೊವು ಸೇರಿ ಗಡ್ದ್‌ಲಿ ಮೊದ್ವೆ ಮಾಡ್ದೊ. ಅವೆಲ್ಲಾ ಸುಕಲಿ ಇದ್ದೊ. ಮಕ್ಕಳೇ ನಾ ನೋಡಿ ಬಂದಳೆ. ನೀವುನೂ ಒಮ್ಮೆ ಹೋಗಿ ನೋಡಿ ಬನ್ನಿ. ನಾವು ಮಕ್ಕ ಆತ್ ಅಜ್ಜಪ್ಪ ಈಗಳೇ ಹೊರ್ಡ್ವೋಂತ ಹೇಳಿ ಅಲ್ಲಿಂದ ಎದ್ದ್ ಮೀಯಕ್ಕೆ ನೀರಡಿಗೆ ಓಡ್ದೊ.

"ಅಜ್ಜಪ್ಪನ ಕತೆಗಳ ಭಂಡಾರಂದ ನಾಲ್ಕನೇ ಕತೆ"

ರಕ್ಕಸಿ ಅಜ್ಜಿ

ಒಂದ್ ಊರಿಲಿ ಒಂದ್ ರಕ್ಕಸಿ ಅಜ್ಜಿ ಇತ್ತ್. ಎತ್ತರ, ದಪ್ಪ ಇದ್ದ್ ಅದಕೆ ತುಂಬಾ ಶಕ್ತಿ ಇತ್ತ್. ನೋಡಿಕೆ ಎಲ್ಲಾ ಅಜ್ಜಿಕಳ ಹಾಂಗೆ ಇತ್ತ್. ಯಾರಿಗೂ ಗೊತ್ತಿಲ್ಲೆ. ಅದ್ ರಕ್ಕಸಿ ಅಜ್ಜೀಂತ. ಅದ್ ನರಮ್ಯೊನ್ಸರ ತಿಂಬತಿತ್ತ್. ಅದಕ್ಕೊಬ್ಬ ಮಂಜ ಇತ್ತ್. ಅವನೂ ರಕ್ಕಸನೆ, ಅಜ್ಜಿ ಊರ್‌ನ ಹೊರಗೆ ಒಂದು ಮನೆ ಕಟ್ಟಿಕಂಡ್ ಮಂಜನೊಟ್ಟಿಗೆ ಇತ್ತ್. ಯಾರೂ ಅವರ ಮನೆಗೆ ಹೋಗ್‌ತಿತ್ಲೆ. ಅಜ್ಜಿ ವಾರಕ್ಕೊಮ್ಮೆ ಊರೊಳಗೆ ಬಾತಿತ್ತ್. ದನ ಮೇಪತ ಹೈದಂಗ ದನ ಮೇಸುವಲ್ಲಿಗೆ ಹೋಗ್‌ತಿತ್ತ್. ಯಾರಾದರೊಬ್ಬ ಹೈದನ ತಂಜಣೆ, ಮಂಜಣೆ ಮಾಡಿ ಮಾತಾಡ್ಸಿ ಮರ್ಳ್ ಮಾಡ್ತಿತ್ತ್. ಅದರೊಟ್ಟಿಗೆ ಒಂದು ಉದ್ದದ ಮಡ್ಸರದ ತರದ ಗೋಣಿ ಚೀಲ

ಇತ್ತ್. ಅದರ್ಲಿ ಹೇಂಗಾರ ಮಾಡಿ, ಒಬ್ಬ ಹೈದನ ತುಂಬಿಸಿ ಹೊತ್ತ್‌ಕಂಡ್ ಮನೆಗೆ ಬಂದ್ ಬೊಡ್ಡ್ ಕೊಂದ್ ಅಳಗೆ ತುಂಬಾ ಗೈಪು ಮಾಡಿ, ವಾರಕ್ಕೆ ಮುಟ್ಟ ಇಸಿಕಂಡ್ ಅಯ್ಯೆ–ಮಂಜ ತಿಂಬೊತಿದ್ದೊ. ಮಂಜ ಕೆಲ್ಸಕ್ಕೆ ಹೋಗ್‌ತಿತ್ಲೆ. ಅಯ್ಯೆ ಕೊಟ್ಟದರ ತಿಂದ್ ಕಳ್ಳ್ ಕುಡ್ದ್ ಅಟ್ಟ ಹತ್ತಿ ಮೊಲ್ಗ್‌ತಿತ್ತ್. ಮಾಡ್ದ ಅಡ್ಗೆ ಇನ್ ಎರ್ಡ್ ದಿನಲಿ ಮುಗ್ದದೇಂತ ಗೊತ್ತಾಕನ ರಕ್ಕಸಿ ಅಜ್ಜಿ ಗೋಣಿ ಚೀಲ ಹೊತ್ತ್‌ಕಂಡ್ ನರ ಬೇಟೆಗೆ ಊರಿಗೆ ಬಾತಿತ್ತ್. ಆಗ ನಾ ಕೇಳ್ದೆ, 'ಮಕ್ಕ ಕಾಣೆ ಆಕನ ಊರಿನೋವು ಹುಡ್ಕುದಿಲ್ಲೆನೋಂತ.' ಅಜ್ಜಪ್ಪ ಹೇಳ್ದೊ, 'ಮತ್ತೆ ಹುಡ್ಕದೆ?' ದಿನಂದ ದಿನಕ್ಕೆ ಒಬ್ಬೊಬ್ಬ ದನ ಮೇಸುವ ಹೈದಂಗ ಕಾಣೆ ಆಕನ ಊರುವೆಲ್ಲಾ ಹುಲಿಹಿಡ್ತ್‌ಂತ ನೆನ್ಸಿಕೊಂಬೊತಿದ್ದೊ. ಆ ಮೇಪತ ಹೈದಂಗಳ ಪೈಕಿ ಒಬ್ಬ ಹೈದ ಕುಳ್ಳಪ್ಪಾಂತ ಅವನ ಹೆಸ್ರ್. ಅಂವ ತುಂಬಾ ಚಾಲಾಕ್ ಹೈದ. ನರಿನ ಬುದ್ಧಿ. ಯಾವ್ದೊಕ್ಕೂ ಹೆದ್ರ್‌ತಿಲ್ಲೆ.

ಒಂದು ದಿನ ಅಜ್ಜಿ ಗೋಣಿ ಚೀಲ ಹೊತ್‌ಕಂಡ್ ದನ ಮೇಸುವಲ್ಲಿಗೆ ಬಾತ್. ದೂರಲಿ ಒಂದ್ ಕಲ್ಲ್‌ನ ಮೇಲೆ ಕುದ್ದ್‌ಕಂಡ್ ಹೈದಂಗಳ್ನೇ ನೋಡ್ತಿತ್ತ್. ಮೇಪತ ಹೈದಂಗ ಅದರ ಕ್ಯಾರೇ ಮಾಡದ ಅವರಷ್ಟಕ್ಕೆ ಪದ ಹಾಡಿಕಂಡ್, ಆಟ ಆಡಿಕಂಡ್ ಇದ್ದೊ. ಅಜ್ಜಿ ದೂರಂದ ನೋಡ್ತಿತ್ತ್. ಕುಳ್ಳಪ್ಪ ಉಚ್ಚೆ ಹೊಯ್ಯಕ್ಕೇಂತ ಅಜ್ಜಿ ಇದ್ದ ಕಡೆ ಬಾತ್. ಉಚ್ಚೆ ಹೊಯ್ದ್ ಹೊರ್ಡಿಕನ ಅಜ್ಜಿ ಕೈ ಬಾಸೆಲಿ ಬಾಂತ ಕರ್ತ್. ಕುಳ್ಳಪ್ಪ ಅಜ್ಜಿ ಹಕ್ಕಲೆ ಹೋತ್. ಅಜ್ಜಿ ಹೇಳ್ತ್, ಮಂಜ ನನ್ನ ಕಾಲಿಗೆ ಮುಳ್ಳು ಹೆಟ್ಟಿಟ್ಟು. ಒಮ್ಮೆ ನೋಡು ಬಾಂತ ಕರ್ತ್. ಕುಳ್ಳಪ್ಪ ಅಜ್ಜಿ ಹಕ್ಕಲೆ ಹೋಗಿ ಅದರ ಅಂಗಾಲ್ ಎತ್ತಿ ನೋಡ್ತ್. ಅಂವಂಗೆ ಎಲ್ಲಿನೂ ಮುಳ್ಳು ಕಂಡತಿಲ್ಲೆ. ಕೈ ಬೆರ್ಳ್‌ಲಿ ಒತ್ತಿ ಒತ್ತಿ, 'ಇಲ್ಲಿ ಬೇನೆ

ಉಟ್ಟೋ ಅಜ್ಜಿ, ಇಲ್ಲಿ ಬೇನೆ ಉಟ್ಟೋಂತ' ಕೇಳ್ತ್. ಅಜ್ಜಿ. 'ಹ್ಞಾಂ. ಅಲ್ಲಿ ಬೇನೆ ಉಟ್ಟು. ನನ್ನ ಮೊಡ್ಸರಲಿ ಸೂಜಿ ಉಟ್ಟು ತಕಂಡ್ ಬಾ ಅದರ್ಲಿ ಕುತ್ತಿ ಮುಳ್ಳು ತೆಗೀಂತ' ಹೇಳ್ತ್. ಕುಳ್ಳಪ್ಪ ಸತ್ಯ ನಂಬಿ ಮೊಡ್ಸರ ಬಿಚ್ಚಿತ್. ಅದ್ ತುಂಬಾ ಉದ್ದ ಇತ್ತ್. ನಿಂಗೆ ಸಿಕ್ಕಿಕಿಲ್ಲೆ ಅದರ ಒಳಗೆ ಹುಗೂಂತ ಅಜ್ಜಿ ಹೇಳ್ತ್. ಕುಳ್ಳಪ್ಪ ಗೋಣಿ ಚೀಲನ ಉದ್ದಕ್ಕೆ ಹಾಸಿ ಅದರೊಳಗೆ ಹೊಕ್ಕತ್. ಆಗ ಅಜ್ಜಿ ಓಡಿ ಬಂದ್ ಚೀಲನ ಬಾಯಿ ಕಟ್ಟಿತ್. ಆಗ ಕುಳ್ಳಪ್ಪಂಗೆ ಗೊತ್ತಾತ್, ನಾ ಕೆಟ್ಟೇಂತ. ಇದ್ ಸಾಮಾನ್ಯದ ಅಜ್ಜಿ ಅಲ್ಲ. ಮಕ್ಕಳ ಕದಿವ ಮಾಟಗಾತಿ ಅಜ್ಜೀಂತ. ಆಗ ದೊಡ್ಡ ತಮ್ಮ ಎಡೆಲಿ ಬಾಯಿ ಹಾಕಿ, 'ಅವಂಗೆ ಉಸ್ರ್ ಕಟ್ಟಿತಿಲ್ಲೇನೋ ಅಜ್ಜಪ್ಪಾಂತ' ಕೇಳ್ತ್. ಅಜ್ಜಪ್ಪ ಹೇಳ್ದೋ, 'ಬೇರೆ ಮಕ್ಕ ಆದರೆ ಹೆದ್ರಿದ್ ಉಸ್ರ್ ಕಟ್ಟಿ ಸಾಯೊತಿದ್ದೊ. ನಾ ಆಗಳೇ ಹೇಳ್ತಿಲ್ಲೆನೋ ಕುಳ್ಳಪ್ಪ ಬಾಳ ನರಿ ಬುದ್ದಿನ ಹೈದಾಂತ. ಅಂವ ಹೆದ್ರ್‌ತಿಲ್ಲೆ. ಹಲ್ಲ್‌ಲಿ ಕಚ್ಚಿ, ಕಚ್ಚಿ ಆ ಮೊಡ್ಸರಕ್ಕೆ ಒಂದ್ ಒಟ್ಟೆ ಮಾಡ್ತ್. ಆಗ ಅಂವಂಗೆ ಉಸ್ರ್ ತೆಗ್ಯಕೆ ಆತ್. ಅಜ್ಜಿ ಅವನ ಹೊತ್‌ಕಂಡ್ ಅದರ ಮನೆಗೆ ಹೋತ್. ಅಡ್ಗೆ ಕೋಣೆಲಿ ಬಾಗ್ಲ್‌ನ ಮೂಲೆಲಿ ಆ ಕಟ್ಟ್‌ನ ಇಸಿ, ಬಾಗಿಲ್ ಹಾಕಿ ಕೊಂಡಿ ಕೋಸಿತ್. ಕುಳ್ಳಪ್ಪ ಹಲ್ಲ್‌ಲಿ ಕಚ್ಚಿ, ಕಚ್ಚಿ ಕೈಲಿ ಒಟ್ಟೆನ ದೊಡ್ಡದ್ ಮಾಡ್ತ್. ಮೊಡ್ಸರಂದ ಹೊರಗೆ ಬಂದು ಆ ಗೋಣಿ ಚೀಲ ತುಂಬಾ ಅಲ್ಲಿದ್ದ ಕಾಯಿ ಚೊಪ್ಪು, ಸೌದೆ ತುಂಡುಗಳ ತುಂಬುಸಿ ಬಾಯಿ ಕಟ್ಟಿತ್. ಅಡ್ಗೆ ಕೋಣೆಲಿ ಇದ್ದ ಒಂದು ಮಡ್ಕೆ ಸೆರೆಲಿ ಅಡಿಂಗಿ ಕುದ್ದತ್.

ಅಜ್ಜಿನ ಮಂಜ ಬೊಬ್ಬೆ ಹೊಡ್ಕಂಡ್ ಅಟ್ಟಂದ ಇಳ್ದ್‌ಬಾತ್. ನಂಗೆ ಹೊಟ್ಟೆ ಇಸಿದೆ ತಿಂಬಕ ಕೊಡೂಂತ ಅಯ್ಯೆನ

ಕೇಳ್ತ್. ರಕ್ಕಸಿ ಅಜ್ಜಿ ಒಂದು ಚಟ್ಟೆಲಿ ನರಮೊಯ್ಸ್ನಸರ ಮಾಸದ ಗೈಪುನ ಹಾಕಿ ತಿಂಬಕೆ ಕೊಟ್ಟ್, ಕುಡ್ಯಕೆ ಒಂದ್ ಮೊಣ್ಣುನ ಗುಂಬಲಿ ಕಳ್ಳ್ ಇಸಿತ್. ಅಂವ ಗೈಪು ತಿಂದ್ ಕಳ್ಳ್ ಕುಡ್ದ್ ಅಟ್ಟ ಹತ್ತಿ ಮೊಲ್ಗಿತ್. ಕತ್ತಲೆ ಕತ್ತಲೆ ಆಕನ ರಕ್ಕಸಿ ಅಜ್ಜಿ, ಅಡ್ಗೆ ಕೋಣೆಗೆ ಹೋತ್. ಸಂಕೋಲೆ ತೆಗ್ದ್ ಬಾಗಿಲ್ ತೆಗ್ದ್ ಮೂಲೆಲಿದ್ದ ಗೋಣಿ ಕಟ್ಟ್‌ನ ನೋಡ್ತ್. ಅಲ್ಲೇ ಇದ್ದ ಒಂದು ಒನ್ಕೆನ ತೆಗ್ದ್ ಗೋಣಿ ಚೀಲಕ್ಕೆ ಸಮಾ ಬೊಡ್ತ್. ಗೋಣಿನ ಎತ್ತಿಕಂಡ್ ಮನೆ ಹಿಂದೆ ಮಾಸ ಹಜಿರ್ ಮಾಡಿಕೆ ತಕಂಡ್ ಹೋತ್.

ಅಷ್ಟಾಕನ ರಕ್ಕಸ ಮಂಜ ಅಯ್ಯೆನ ಕರ್ತ್. ನಂಗೆ ಹೊಟ್ಟೆ ಬೇನೆ ಆದೇಂತ ಆರ್ಭಟೆ ಕೊಟ್ಟತ್. ರಕ್ಕಸಿ ಅಜ್ಜಿ ಗೋಣಿ ಚೀಲನ ಅಲ್ಲೇ ಬುಟ್ಟ್ ಓಡಿ ಹೋಗಿ ಅಟ್ಟ ಹತ್ತಿ ಮಂಜನ ನೋಡ್ತ್.

ಇದರ ಎಲ್ಲಾ ಮಡ್ಕೆ ಸೆರೆಂದ ಕೇಳ್ದ ಕುಳ್ಳಪ್ಪ ಮೆಲ್ಲನೆ ಹರ್ದ್‌ಕಂಡ್ ಅಡ್ಗೆ ಕೋಣೆಂದ ಹೊರಗೆ ಬಾತ್. ಕಳ್ಳ ಹೆಜ್ಜೆಲಿ ಮನೆಂದ ಹೊರಗೆ ಬಂದ್ ಉಸ್ರ್ ಕಟ್ಟಕಂಡ್ ಒಂದೇ ಓಟಲಿ ಊರ್ ಕಡೆ ಓಡ್ತ್. ಜನ ಎಲ್ಲಾ ಮೊಲ್ಗಿದ್ದೊ. ಎಲ್ಲರ ಎಬ್ರಿಸಿ ನಡ್ದ ಸಂಗತಿ ಎಲ್ಲಾ ಹೇಳ್ತ್. ಜನಕ್ಕೆ ಸಿಟ್ಟ್ ಬಾತ್. ನಮ್ಮ ಮಕ್ಕಳ ಹಿಡ್ಕಂಡ್ ಹೋಗಿ ರಕ್ಕಸಿ ಅಜ್ಜಿ ತಿಂಬತಿತ್ತ್‌ಂತ ಆಗ ಅವ್ಕೆ ಗೊತ್ತಾತ್. ಅವೆಲ್ಲಾ ಕೂಡಿಕಂಡ್ ದೊಣ್ಣೆ ಕತ್ತಿ ಹಿಡ್ಕಂಡ್ ಅಜ್ಜಿನ ಮನೆ ಕಡೆ ಬಂದೊ. ದಾರಿ ಕಾಂಬಕೆ ದೊಡ್ಡ ದೊಡ್ಡ ಸೂಟೆಗಳ ಹೊತ್ತಿಸಿಕೊಂಡೊ.

ಅತ್ತ ಅಟ್ಟಲಿ ಅಜ್ಜಿ ಮಂಜನ ನೋಡ್ರೆ ಅವ ಹೊಟ್ಟೆಗೆ ಕೈ ಹಿಡ್ಕಂಡ್ ಹೊರ್ಳಾಡ್‌ತಿತ್ತ್. ಹೊಟ್ಟೆ ಬೇನೇಂತ ಹೇಳ್. ರಕ್ಕಸಿ ಅಜ್ಜಿ ಬೇಗ ಬೇಗ ಕೆಳಗೆ ಬಂದ್ ಅಡ್ಗೆ ಕೋಣೆಗೆ ಹೋಗಿ

ಮೊದ್ದ್‌ನ ಕಷಾಯ ಮಾಡಿ ಮಂಜಂಗೆ ಕುಡ್ಯಕೆ ಕೊಟ್ಟತ್. ಅಂವ ಅಂಞ ಹೊತ್ತ್‌ಲಿ ನಿದ್ದೆ ಹೋತ್. ಅಜ್ಜಿ ಕೆಳಗೆ ಬಂದ್ ಮನೆ ಹಿಂದೆ ಹೋಗಿ ಮಡ್ಸರ ಬಿಚ್ಚಿ ನೋಡಿದೆ. ಒಳಗೆ ಕಾಯಿ ಚೊಪ್ಪು, ಸೌದೆ ಕೊಳ್ಳಿಗ ಇದ್ದೊ. ಅಜ್ಜಿಗೆ ಸಿಟ್ಟ್ ಬಾತ್. ಕೆಲ್ಸ ಕೆಟ್ಟತ್‌ಂತ್ ಮನೆ ಒಳಗೆ ಹೋಗಿ ಮಂಜನ ಕರ್ತ್. ಜನ ನಮ್ಮ ಬುಡಿಕಿಲ್ಲೆ ಈಗಲೇ ಇಲ್ಲಿಂದ ಪೋಯೀಂತ ಹೇಳಿ ಮಂಜನ ಕೈ ಹಿಡ್ಕಂಡ್ ಕಾಡ್‌ನ ಕಡೆಗೆ ಓಡ್ತ್. ಜನ ಅಟ್ಟಿಸಿಕಂಡ್ ನಾಕ್ ಕಡೆಂದ ಬಂದೊ. ಅಯ್ಯೆ ಮಂಜಂಗೆ ಸಮಾ ಬೊಡ್ದೊ. ಅವಿಬ್ಬರು ಸತ್ತ್ ಹೋದೋ. ಅವರಿಬ್ಬರ ಹೆಣನ ಎಳ್ಕಂಡ್ ಬಂದ್ ಅವರ ಮನೆ ಒಳಗೆ ಹಾಕಿ ಕಿಚ್ಚಿ ಕೊಟ್ಟೊ. ಅಯ್ಯೆ, ಮಂಜ ಸುಟ್ಟು ಬೂದಿ ಆದೋ.

******

“ಅಜ್ಜಪ್ಪನ ಕತೆಗಳ ಭಂಡಾರಂದ ಐದನೆಯ ಕತೆ”

ಒಣ್ಕಟೆ ಗಂಡ

ಒಂದ್ ಊರ್‌ಲಿ ಗಂಡ ಹೆಣ್ಣ್ ಇಬ್ರೂರು ಇದ್ದೊ. ಗಂಡ ಬೊಳ್ಪುಗೆ ಎದ್ದ್ ಕೆಲ್ಸಕ್ಕೆ ಹೋದರೆ ಹಿಂಬೊತ್ತ್ ಬಾತಿತ್ತ್. ದಿನ ದಿನ ದುಡ್ಡ ದುಡ್ಡುನ ಎಲ್ಲಾ ಹೆಣ್ಣ್‌ನ ಕೈಲಿ ಕೊಡ್ತಿತ್ತ್. ಹೆಣ್ಣ್ ಅಡ್ಗೆ ಮಾಡಿ ಅಂವಂಗೆ ಹಾಕ್ತಿತ್ತ್. ಅಂವ ಬೊಳ್ಪುಗೆ ಕೆಲ್ಸಕ್ಕೆ ಹೋದ ಮೇಲೆ ಅದ್ ಮನೆಲಿ ತರತರದ ಅಡ್ಗೆ ಮಾಡಿ ತಿಂಬೊತಿತ್ತ್. ಗಂಡಂಗೆ ಮಾತ್ರ ಲೆಕ್ಕದ್ ಕೊಡ್ತಿತ್ತ್. ಗಂಡ ದಿನ ಹೋದಾಂಗೆ ಒಣ್ಕಟೆ ಕಟ್ಟಿಕಂಡ್ ಬಾತ್. ಹೆಣ್ಣ್ ಗುಡಾಣದಾಂಗೆ ಬೊಜ್ಜು ಬೆಳ್ಸಿಕಂಡ್ ಗುಂಡು, ಗುಂಡು ಆತ್. ಹೆಣ್ಣ್‌ಗೆ ಒಬ್ಬ ಗೆಣೆಕಾರ ಸಿಕ್ತ್. ಸುರು ಸುರುಗೆ ಗಂಡಂಗೆ ಗೊತ್ತಾತ್ಲೆ. ಅಂವಂಗೆ ಏನೋ ಅನ್ಮಾನ ಹೆಣ್ಣ್‌ನ ಮೇಲೆ ಬಾತ್. ಅಂವ ಎರ್ಡ್–ಮೂರು ದಿನ ಮನೇಲೇ ಇತ್ತ್. ಗೆಣೆಕಾರಂಗೆ ಏನ್ ಮಾಡ್ದೂಂತ ಗೊತ್ತಾತ್ಲೆ.

ಮೂರ್ನೆ ದಿನ ಗಂಡ ಕೆಲ್ಸಕ್ಕೆ ಹೋನೇಂತ ಮನೆಂದ ಅಸ್ಟ್ ದೂರ ಹೋಗಿ, ತಿರ್‍ಗಿ ಬಂದ್ ಹೆಣ್ಣಿಗೆ ಗೊತ್ತಾಂಗದಾಂಗೆ ಅಟ್ಟಲಿ ಅಡಿಂಗಿ ಕುದ್ದತ್. ಹೆಣ್ಣ್ ಗಂಡ ಕೆಲ್ಸಕ್ಕೆ ಹೋಗುಟ್ಟೂಂತ ತಿಳ್ದ್ ಗೆಣೆಕಾರನ ಮನೆಗೆ ಕರ್ತ್. ಗೆಣೆಕಾರ ಬಂದ್ ಹೆಣ್ಣ್ ನೊಟ್ಟಿಗೆ, 'ನಿನ್ನ ಗಂಡ ಮನೆಲಿದ್ದರೆ ನಾ ಹೇಂಗೆ ಬಾದೂಂತ' ಕೇಳ್ತ್. ಹೆಣ್ಣ್, 'ಇಲ್ಲೆ ಇನ್ನ್ ಹೀಂಗೆ ಆಕಿಲ್ಲೇಂತ ಹೇಳ್ತ್. ಇವರ ಮಾತ್ ಕೇಳಿ ಅಟ್ಟಲಿದ್ದ ಒಣ್ಕಟೆ ಗಂಡಂಗೆ ಸಿಟ್ಟ್ ಬಾತ್. ಅಂವಂಗೆ ಹೆಣ್ಣ್‌ಗೆ ಬೊಡಿವಸ್ಟ್ ಸಕ್ತಿ ಇಲ್ಲೆ. ಅದರ್‌ಂದ ಮೇಲೆ ಅಂವ ಆಗಾಗ ಮನೆಲಿ ಇರಿಕೆ ಸುರು ಮಾಡ್ತ್. ಹೆಣ್ಣ್ ಅಂವಂಗೆ ಬೊಯ್ದ್ ಕೆಲ್ಸಕ್ಕೆ ಕಳ್‌ಸ್‌ತಿತ್ತ್. ಒಣ್ಕಟೆ ಗಂಡನೂ ಆಗಾಗ ಅಟ್ಟಲಿ ಹತ್ತಿ ಕುದ್ದ್ ಇವರ ಮಾತ್ ಕೇಳ್ತಿತ್ತ್. ಗೆಣೆಕಾರ ಹೇಳ್ತ್, 'ನಿನ್ನ ಗಂಡನ ಹೀಂಗೆ ಬುಟ್ಟರೆ ಆಕಿಲ್ಲೆ ನಾವು ಏನಾರ ಮಾಡೊಕೂಂತ ಹೇಳ್ತ್. ಅಂವಂಗೆ ಕಣ್ಣ್ ಕಾಣದಾಂಗೆ, ಕೆಬಿ ಕೇಳದಾಂಗೆ ಆದರೆ ನಾವು ಹಗ್ಲ್ ಇಡೀ ಸುಕಲಿ ಇರೊಕ್‌ಂತ ಮಾತಾಡಿಕೊಂಡೊ. ಇದರ ಎಲ್ಲಾ ಅಟ್ಟಲಿ ಕುದ್‌ಕಂಡ್ ಒಣ್ಕಟೆ ಗಂಡ ಕೇಳ್ತ್. ಅಂವ ಒಂದು ಉಪಾಯ ಮಾಡ್ತ್. ಮಾರ್ಣೆ ದಿನ ಹೆಣ್ಣ್‌ನೊಟ್ಟಿಗೆ, 'ಈ ಊರ್ನ ಹೊಳೆ ದಂಡೆಲಿ ಒಬ್ಬ ಸನ್ನೇಸಿ ಬಂದುಟ್ಟು ಗಡ. ಅಂವ ಹಿಮಾಯಲಯ ಪರ್ವತಕ್ಕೆ ಹೋಗಿ, ದೊಡ್ಡ ದೊಡ್ಡ ಸನ್ನೇಸಿಗಳ ಕೈಲಿ ಬಾರಿಬಾರಿ ಮೊದ್ದು, ಮಾಟ ಕಲ್ತುಟ್ಟು ಗಡಾಂತ ಹೇಳ್ತ್. ಆಗ ಹೆಣ್ಣ್ ನಂಗೂನೂ ಒಮ್ಮೆ ಅವನ ನೋಡಿಕೆ ಹೋಕೂಂತ ಹೇಳ್ತ್. ಮೊರ್ದಿನ ಹೆಣ್ಣ್ ಗಂಡನೊಟ್ಟಿಗೆ ಹೇಳ್ತ್. ನೀ ಕೆಲ್ಸಕ್ಕೆ ಹೋಗ್ಬೇಡಾ. ಮನೇಲೇ ಇರ್. ನಾ ಸನ್ನೇಸಿನ ನೋಡಿ ಬನ್ನೇಂತ ಹೋತ್. ಒಣ್ಕಟೆ ಗಂಡ ಬೇಗ ಬೇಗ ಹೊಳೆ ದಂಡೆಗೆ ಹೋಗಿ ಸನ್ನೇಸಿನಂಗೆ ಗಡ್ಡ ಕಟ್ಟಕಂಡ್

ಮಾರು ವೇಸಲಿ ಕೈಲಿ ಜಪಸರ, ಕಮಂಡಲ ಹಿಡ್ದ್ ತಪ್ಪಸ್ಸಿಗೆ ಕುದ್ದ ಹಾಂಗೆ ಕುದ್ದತ್. ಹೆಣ್ಣ್ ಸನ್ನೇಸಿಗೆ ಅಡ್ಡ ಬಿದ್ದ್ ಕೈ ಮುಗ್ದ್ ಕುದ್ದತ್. 'ಮಗಳೇ ಏನ್ ಬೇಕೂಂತ' ಸನ್ಯೇಸಿ ಕೇಳ್ತ್. ಹೆಣ್ಣ್ ಹೇಳ್ತ್, 'ನನ್ನ ಗಂಡ ನಂಗೆ ತುಂಬಾ ಕಾಟ ಕೊಟ್ಟದೆ. ಹೊಡ್ದದೆ, ಬೊಡ್ದದೆ, ಅಂವನ ಕಣ್ಣ್ ಹೊಡ್ದ್ ಹೋಕು, ಕೆಬಿ ಕೇಳದಾಂಗ ಆಕು ಇದಕ್ಕೆ ಏನಾರ ಮೊದ್ದು ಕೊಡೀಂತ ಕೇಳ್ತ್. ಸನ್ನೇಸಿ ಕಣ್ಣ್ ಮುಚ್ಚಿ ಧ್ಯಾನ ಮಾಡ್ದಂಗೆ ಕುದ್ದ್, ಸ್ವಲ್ಪ ಹೊತ್ತ್‌ಲಿ ಕಣ್ಣ್ ಬುಟ್ಟ್, 'ಮಗಳೇ ನಾಳೆ ಬೆಳ್ಗಾರ ಮೈಕೈ ಮಿಂದ್ ಹಣ್ಣ್–ಹಂಪಲ್ ತಕಂಡ್ ಬಾಂತ' ಹೇಳ್ತ್. ಆತ್‌ಂತ ಹೇಳಿ ಹೆಣ್ಣ್ ಮನೆಗೆ ಹೋತ್.

ಮೊರ್ದಿನ ಚಿಮಿ ಚಿಮಿ ಬೊಳ್ಪುಗೆ ಎದ್ದ್ ತಲೆ ಮೈ ಮಿಂದ್ ತಟ್ಟೆ ತುಂಬಾ ಹಣ್ಣ್ ಹಂಪಲ್ ಹಿಡ್ಕಂಡ್ ಹೊಳೆ ದಂಡೆಗೆ ಹೋತ್. ಸನ್ನೇಸಿ ಆಗಳೇ ಧ್ಯಾನಲಿ ಕುದ್ದಿತ್ತ್. ಅಂವಂಗೆ ಅಡ್ಡ ಬಿದ್ದ್‌ದ್ ಹೆಣ್ಣ್ ತಟ್ಟೆನ ಸನ್ನೇಸಿ ಮುಂದೆ ಇಸಿತ್. ಸನ್ನೇಸಿ ಕಣ್ಣ್ ಬುಟ್ಟ್ ಇವಳ ನೋಡಿ, 'ನಾ ಹೇಳ್ದರ ಕೆಬಿ ಕೊಟ್ಟ್ ಕೇಳ್. ಒಂದಿಸ್ಟ್ ತಪ್ಪಿಸಿಕೆ ಬೊತ್ತ್‌ಂತ' ಹೇಳ್ತ್. ಆಗ ಹೆಣ್ಣ್, 'ಹೇಳಿನಿ ಸೋಮೀ. ನೀವು ಹೇಳ್ದಾಂಗೆ ಕೇಳ್ನೇಂತ' ಹೇಳ್ತ್. ಸರೀಂತ ಸನ್ನೇಸಿ ಹೇಳ್ತ್, 'ನೀ ನಲ್ವತ್ತೆಂಟು ದಿನ ನಿನ್ನ ಗಂಡಂಗೆ ಮೊಟ್ಟೆ ಇಸಿಕೆ ಸುರು ಮಾಡ್ದ ಹೇಂಟೆನ ಬೊಡ್ದ್‌ದ್ ಕೋಳಿಗೈಪು ಮೊಕ್ಕದ ರೊಟ್ಟಿ ಮಾಡಿ ಮೂರು ಹೊತ್ತು ತಿಂಬಕೆ ಕೊಡು. ಕನು, ಕರ್ಯಟ, ಪಲ್ಲೆ ಕ್ಯಾಲಿ, ಈ ಭಸ್ಮ ಸೇರ್ಸಿ ಅಂವಂಗೆ ಕೊಡು. ನೋಡು ನಲ್ವತ್ತೆಂಟ್ ದಿನಲಿ ನಿನ್ನ ಗಂಡಂಗೆ ಕಣ್ಣ್ ಕಾಣದಾಂಗೆ, ಕೆಬಿ ಕೇಳದಾಂಗೆ ಆದೇಂತ'. ಹೆಣ್ಣ್ ಕುಸಿಲಿ ಆ ಭಸ್ಮನ ತಕಂಡ್ ಕಣ್ಣ್‌ಗೊತ್ತಿಕಂಡ್, ಸೀರೆ ಸೆರ್‌ಂಗಿಲಿ ಕಟ್ಟಿಕಂಡ್ ಮನೆಗೆ ಬಾತ್. ಕೋಳಿ ಗೂಡುಂದ

ಮೊಟ್ಟೆ ತುಂಬಿದ ಹೇಂಟೆನ ಹುಡ್ಕಿ ಕೊಂದ್‌ದ್ ಕೋಳಿಗೈಪು ಮಾಡ್ತ್. ಪೊಕ್ಳದ ರೊಟ್ಟಿ ಮಾಡ್ತ್. ದಿನಾ ಗಂಡಂಗೆ ಮೂರು ಹೊತ್ತ್ ತಿನ್ಸಿತ್. ಸನ್ನೇಸಿ ಕೊಟ್ಟ ಭಸ್ಮನ ಕನು, ಕರ್ಯಟಕ್ಕೆ ಹಾಕಿಕೆ ಮರ್ತ್ತಿತ್ಲೆ. ಆಗ ಗಂಡ ಕೇಳ್ತ್. 'ನೀ ಏನ್ ನಂಗೆ ದಿನಾ ಸಮ್ಮಾನ ಮಾಡಿಯಾಂತ'. ಹೆಣ್ಣ್ ಹೇಳ್ತ್, 'ನೀ ತುಂಬಾ ಬೊಚ್ಚೆ ಒಣ್ಕಟೆ ಕಟ್ಯಳ. ಕೆಲ್ಸ್ ಮಾಡಿಕೆ ಸಕ್ತಿ ಬೇಕ್. ತಿನ್ನ್, ತಿನ್ನೂಂತ' ತಿನ್ಸಿತ್. ದಿನ ಹೋದ ಹಾಗೆ ಗಂಡ ಗುಂಡು ಗುಂಡಾತ್. ಹೆಣ್ಣ್‌ನೊಟ್ಟಿಗೆ ಅಂವ 'ಏನ್‌ನೇ ನಂಗೆ ಕಣ್ಣ್ ಮಂಜ್ ಮಂಜಾದೇಂತ' ಹೇಳ್ತ್. ಹೆಣ್ಣ್‌ಗೆ ಕುಸಿ ಆತ್. ಸನ್ನೇಸಿ ಮೇಲೆ ನಂಬಿಕೆ ಬಾತ್. ದಿನಂದ ದಿನಕ್ಕೆ ಉಪಚಾರ ಜಾಸ್ತಿ ಮಾಡ್ತ್. ನಲ್ವತ್ತೆಂಟ್ ದಿನ ಆಕನ ಗಂಡ ಗಟ್ಟಿ ಮುಟ್ಟಾತ್. ಕಣ್ಣ್ ಏನೇನೂ ಕಾಂಬೊದಿಲ್ಲೇಂತ ನಾಟಕ ಮಾಡ್ತ್. ಕೆಬಿನೂ ಕೇಳ್ದುಲ್ಲೇಂತ ಹೇಳ್ತ್. ಹೆಣ್ಣ್‌ಗೆ ಕುಸಿ ಆತ್. ಗೆಣೆಕಾರನ ಕರ್ಸಿತ್. ಅವಬ್ಬೊರು ಒಟ್ಟಿಗೆ ಇರಿಕನ ಗಂಡ ಬಂದ್ ಮೂಲೆಲಿದ್ದ ಒಣ್ಕೆ ತೆಗ್ದ್ ಇಬ್ಬೊರಿಗೆ ಸಮಾ ಬೊಡ್ತ್. ಹೆಣ್ಣ್‌ನ ಮನೆಂದ ಹೊರಗೆ ಹಾಕ್ತ್. ಗೆಣೆಕಾರ ಓಡಿಹೋತ್. ಇಂವ ಬೇರೆ ಮೊದುವೆ ಆಗಿ ಸುಕಲಿ ಇತ್ತ್. ಮಕ್ಕಳೇ, 'ನಾ ಹೋಗಿ ನೋಡಿಕಂಡ್ ಬಂದೆ ನೀವುನೂ ಹೋಗಿ ನೋಡಿ ಬನ್ನಿ'. 'ಆತ್ ಅಜ್ಜಪ್ಪಾ'ಂತ ನಾವು ಜಾಗೆ ಖಾಲಿ ಮಾಡ್ದೋ.

****

ಅಜ್ಜಪ್ಪನ ಕತೆಗಳ ಭಂಡಾರಂದ ಆರನೇ ಕತೆ.

ಹಡ್ಡದೂಮನ ಕತೆ

ಅಂದ್ ಹಿಂಬೊತ್ತ್ ನಾವು ಕತೆ ಕೇಳಿಕಾಗಿ ಅಜ್ಜಪ್ಪನ ಹುಡ್ಕಿದೋ. ಅವು ಕಾಂಬತಿತ್ಲೆ. ಅವ್ವನೊಟ್ಟಿಗೆ ಕೇಳಿಕನ ಅವರ ಯಾರೋ ಮೊದ್ದು ಮಾಡಿಕೆ ಕರ್‍ಕೊಂಡ್ ಹೊಗೊಳೋಂತ ಹೇಳ್ದೊ. ನಮ್ಮ ಅಜ್ಜಪ್ಪ ದನಂಗಳಿಗೆ ನೂಲು ಮೊಂತ್ರಿಸಿ ಕಟ್ಟಿದ್ದೊ. ದನಂಗಳ ಕಾಯ್ಲೆಗೆ ಮೊದ್ದ್ ಕೊಡ್ತಿದ್ದೊ. ಕಣ್ಣಸ ತೆಗಿತಿದ್ದೊ, ಭಸ್ಮ ಮೊಂತ್ರಿಸಿ ಕೊಡ್ತಿದ್ದೊ. ಅವ್ಕೆ ನಾಟಿ ಮೊದ್ದ್ ಗೊತ್ತಿತ್ತ್. ಬೇರೆ ಬೇರೆ ಕಡೆಂದ ಜನಂಗ ಬಂದ್ ಅವರ ಕರ್‍ಕಂಡ್ ಹೋಗ್ತಿದ್ದೊ. ಒಮ್ಮೊಮ್ಮೆ ಹೋದರೆ ಬಾಕನ ಎರ್‍ಡ್ ಮೂರು ದಿನ ಕಳ್ಯತಿತ್ತ್. ಅವು ಇಲ್ಲದೆ ನಾವ್ಗೆ ಬಾಳ ಬೇಜಾರ ಆತ್. ಯಾಗ ಅಜ್ಜಪ್ಪ ಬಂದವೇಂತ ಕಾದ್ ಕುದ್ದೊ.ಅಂತೂ ಒಂದಿನ ನಾವೆಲ್ಲಾ ಸಾಲೆ ಬುಟ್ಟ್ ಬಾಕನ ಅಜ್ಜಪ್ಪ ಮನೆಲಿದ್ದೊ. ನಾವೆಲ್ಲ ಕುಸಿಂದ ಬೇಗ ಬೇಗ ಕೈಕಾಲ್ ತೊಳ್ದ್‌ದ್ ಅವ್ವ ಕೊಟ್ಟ ಹಪ್ಪಳ ಸಂಡಿಗೆ ತಿಂದ್ ಕಾಪಿ ಕುಡ್ದ್

ಕತೆಗಾಗಿ ಅಜ್ಜಪ್ಪನ ಹಕ್ಕಲೆ ಬಂದೊ. ‘ಅಜ್ಜಪ್ಪ, ನೀವಿಲ್ಲದೆ ನಾವುಗೆ ಕತೆ ಹೇಳೊವೇ ಇಲ್ಲೆ. ಒಳ್ಳೆ ಕತೆ ಹೇಳೀಂತ ಅವರ ಹಕ್ಕಲೆ ಕುದ್ದೊ. ಬನ್ನಿ ಮಕ್ಕಳೇ ಹೆಡ್ಡ ದೂಮನ ಕತೆ ಹೇಳ್ನೇಂತ ಕತೆ ಸುರು ಮಾಡ್ದೊ. ಒಂದ್ ಊರ್ಲಿ ಒಂದು ಅಯ್ಯೆಗೆ 5 ಜನ ಗಂಡ್ ಮಕ್ಕ ಇದ್ದೊ. ಅದರ್ಲಿ ಕಡೆಂವ ತುಂಬಾ ಹೆಡ್ಡ. ಅಂವನ ಹೆಡ್ಡ ದೂಮಾಂತ ಎಲ್ಲೋವು ಕರ್ಯೋತಿದ್ದೊ. ಆದರೆ ಕೆಲಸಲಿ ಮಾತ್ರ ತುಂಬಾ ಉಸಾರ್. ನಾಕ್ ಜನರ ಕೆಲ್ಸ ಒಬ್ಬನೇ ಮಾಡ್ತಿತ್ತ್. ಅಣ್ಣಂದರಿಗೆ ಅವನ ಕಂಡರೆ ಸಸಾರ. ಒಂದ್ ದಿನ ಅವೆಲ್ಲಾ ಕಾಡಿಗೆ ಸೌದೆ ತಾಕೇಂತ ಹೋದೊ. ಹೆಡ್ಡ ದೂಮನೂ ಅವರೊಟ್ಟಿಗೆ ಹೋತ್. ಆಗ ಅಣ್ಣಂದರ್, ‘ನೀ ನಮ್ಮೊಟ್ಟಿಗೆ ಬಾದು ಬೇಡಾಂತ ಬ್ಯೊದ್ ಹಿಂದ್ ಕಳ್ಸಿದೊ. ಅಂವ ಅಡ್ಗಿ ಕಂಡ್ ಅವ್ಕೆ ಗೊತ್ತಾಗದ ಹಾಂಗೆ ಹಿಂದೆ ಹಿಂದೆ ಹೋತ್. ದಾರಿಲಿ ಒಂದು ಮರಲಿ ಅವ್ಕೆ ತುಂಬಾ ಜೇನ್ ಎರಿಗ ಕಂಡೊ. ಆಗ ಅಣ್ಣಂದರ್, ‘ಅದ್ ತುಂಬಾ ಎತ್ತರಲಿ ಉಟ್ಟು ಹೆಡ್ಡದೂಮ ಇರ್ತಿದ್ದರೆ ಸರಸರನೆ ಹತ್ತಿ ತೆಗ್ದ್ ಕೊಡ್ತಿತ್ತ್‌ಂತ ಮಾತಾಡಿಕೊಂಡೊ. ಮರೆಲಿ ಇದ್ದ ದೂಮ ಇದರ ಕೇಳ್ಸಿಕಂಡ್, ‘ಅಣ್ಣಾ ನಾ ಇಲ್ಲೆ ಒಳೆ. ನಾ ತೆಗ್ದ್ ಕೊಟ್ಟನೇಂತ’ ಹೇಳಿ, ಸರಸರಾಂತ ಮರ ಹತ್ತಿ ಜೇನ್ ಎರಿಗಳ ತೆಗ್ದ್ ಕೊಟ್ಟತ್. ಅಂವ ಇಳ್ಯಕನ ಅಂವಂಗೆ ಎರ್ಡ್ ಬೊಡ್ದ್, ನೀ ನಮ್ಮೊಟ್ಟಿಗೆ ಬಾದು ಬೇಡಾಂತ ಹೇಳ್ತಿಲ್ಲೆ? ಯಾಕೆ ಬಂದಾಂತ ಅವನ ಹಿಂದಕ್ಕೆ ಕಳ್ಸಿದೊ.

ಆಗ ದೊಡ್ಡ ತಮ್ಮ ಕೇಳ್ತ್, ‘ಅಂವಂಗೆ ಜೇನ್ ತಿಂಬಕೆ ಕೊಟ್ಟತ್ತಿಲ್ಲಾಂತ’. ಅದಕ್ಕೆ ಅಜ್ಜಪ್ಪ, ‘ಅಂವಂಗೆ ಜೇನ್ ಕೊಟ್ಟರೆ ಇವುಕೆ ತಿಂಬಕೆ ಕಮ್ಮಿ ಆದೆಲೆ ಅದ್ಕೆ ಅಂವನ ಓಡ್ಸಿದ್‌ಂತ’ ಹೇಳ್ದೊ.

ಆಗ ನಾ, 'ಕೆಲ್ಸಕ್ಕೆ ಅಂವ ಬೇಕ್, ತಿಂಬಕೆ ಇವ್ರೂಂತ'. ಬೇಜಾರ್ಲಲ್ಲಿ ಹೇಳ್ದೆ. ಸಣ್ಣ ತಮ್ಮ 'ಪಾಪ'ಂತ ಹೇಳ್ತ್. ನೀವು ಕತೆ ಕೇಳ್ರೆನೊ ಹಿಂಗೆ ಎಡೆಎಡೆಲಿ ಬಾಯಿ ಹಾಕಿ ಕತೆನ ಹಾಳ್ ಮಾಡ್ರೆನೋಂತ ಅಜ್ಜಪ್ಪ ಬ್ಯೊದೊ. 'ಇಲ್ಲೆ ಅಜ್ಜಪ್ಪಾ, ಇನ್ ಮಾತಾಡ್ದುಲ್ಲೆ ನೀವು ಹೇಳೀಂತ' ಹೇಳ್ದೊ.

ಅಜ್ಜಪ್ಪ ಕತೆನ ಮುಂದರ್ಸಿದೊ. ಅಣ್ಣಂದರ್ ಕಾಡ್‌ಲಿ ಇದ್ದ ದೊಡ್ಡ ದೊಡ್ಡ ಎಲೆಗಳ ತಂದ್ ಅದರ್ಲಿ ಕಿಳ್ಳಿ ಮಾಡಿ ಜೇನ್‌ನ ಎರಿನ ಹಿಂಡಿ ಜೇನ್ ತೆಗ್ದ್ ಎಲ್ಲೋವ್ರೂ ಕುಡ್ದ್ ಮುಂದೆ ಮುಂದೆ ಕಾಡ್‌ಲಿ ಹೋದೋ. ಹೆಡ್ಡ ದೂಮ ಹನೀಸ್ ಹಿಂದಕ್ಕೆ ಹೋದಂವ ಅಣ್ಣಂದರಿಗೆ ಗೊತ್ತಾಗದಾಂಗೆ ಅವರ ಹಿಂದೆ ಹಿಂದೆ ಹೋತ್. ಹಾಂಗೆ ಹೋಕನ ಒಂದು ದೊಡ್ಡ ಹಲ್ಸಿನ ಮರಲಿ ಹಲ್ಸಿನಂಣ್ ಹಣ್ಣಾಗಿ ಗಮಗಮಾಂತ ಪೊರ್ಮ್ಳ ಬಾತಿತ್ತ್. ಅಣ್ಣಂದರ ಬಾಯಿಲಿ ನೀರ್ ಬಾತ್. ಮರ ಯಾರ್ ಹತ್ತುದು? ಅದ್ ದೊಡ್ಡ ಮರ ಅವುಕೆ ಮರ ಹತ್ತಿಕೆ ಅಸ್ಟ್ ಗೊತ್ತಿಲ್ಲೆ. ಆಗ ಅವು ಈಗ ಹೆಡ್ಡದೂಮ ಇರ್ತಿದ್ದರೆ ನಾವ್ಗೆ ಹಣ್ಣ್ ಕ್ಯೊದ್ ಕೊಡ್ತಿತ್ತ್‌ಂತ ಮಾತಾಡಿಕೊಂಡೊ. ಅದರ ಕೇಳ್ಸಿಕಂಡ ಹೆಡ್ಡದೂಮ, 'ಅಣ್ಣಾ ನಾ ಇಲ್ಲಿ ಒಳೇಂತ' ಹೇಳಿ, ಸರಸರಾಂತ ಮರ ಹತ್ತಿ ಹಲ್ಸಿನ ಹಣ್ಣ್‌ನ ಮರಂದ ಉದ್ರಿಸಿದೆ ಅಣ್ಣಂದರ್ ಅಂವ ಇಳ್ಯಕನ ಅಂವಂಗೆ ಸಮಾ ಬೊಡ್ದ್‌ದ್ ಹಿಂದಕ್ಕೆ ಮನೆಗೆ ಕಳ್ಸಿದೊ. ಅವು ನಾಕ್ ಜನಂಗ ಹಣ್ಣ್‌ನ ಕೊಯ್ದ್, ಹೊಟ್ಟೆ ತುಂಬ ತಿಂದ್ ಮುಂದೆ ಹೋದೊ. ನಾವು ಮಕ್ಕ ಇದರ ಕೇಳಿ, 'ಪಾಪ ಹೆಡ್ಡದೂಮಾಂತ' ಹೇಳಿಕೊಂಡೋ. ಆಗ ಅಜ್ಜಪ್ಪ ನಮ್ಮನೇ ಕೆಕ್ರಿಸಿಕಂಡ್ ನೋಡ್ದೋ. ನಾವು ಬಾಯ್ಮುಚ್ಚೆ, ಬಾಯಿಗೆ ಬೆರಳ್ ಇಸಿ ಒಬ್ಬರ ಮೋರೆ ಒಬ್ಬ

ನೋಡಿ ಮಾತಾಡ್ ಬೊಡೀಂತ ಕಣ್ಣ್ ಸನ್ನೆ ಮಾಡಿ ಸುಮ್ಮಂಗೆ ಕುದ್ದೊ. ಅಜ್ಜಪ್ಪನ ಕತೆನ ಮುಂದರಿಸಿದೊ. ಅಣಂದರ ಮುಂದೆ ಕಾಡಿಗೆ ಹೋಗಿ ಸೌದೆ ಕಡ್ಯಕೆ ಸುರು ಮಾಡ್ದೊ. ಆಗ ಅವ್ಕೆ ಹೆಡ್ಡದೂಮನ ನೆಂಪಾಗಿ ಅಂವ ಇರ್ತಿದ್ದರೆ ಒಂದು ಗಳ್ಗೆಲಿ ಸೌದೆ ಕಡ್ದ್ ಹೊರೆ ಮಾಡ್ತಿತ್ತ್‌ಂತ ಮಾತಾಡಿಕೊಂಡೊ.ಹೆಡ್ಡ ದೂಮ ಮನೆಗೆ ಹೋಗದೆ ಅವರ ಹಿಂದೆನೆ ಅಡಿಂಗಿಕಂಡ್ ಬಾತಿತ್ತ್. ಇದರ ಕೇಳಿ ಅಂವ ಓಡಿ ಬಂದ್, ಅಣ್ಣಾ,ನಾ ಇಲ್ಲಿ ಒಳೇಂತ ಹೇಳಿ ಬೇಗ ಬೇಗ ಸೌಯ್ದೆ ಕಡ್ದ್ ಅವ್ಕೆ ಸಾಯ ಮಾಡ್ತ್. ಸೌಯ್ದೆ ಕಡ್ದ್ ಎಲ್ಲ ಆಕನ ಅವಂಗೆ ಬೊಡ್ದ್, ನೀ ಇಲ್ಲೇ ಬಿದ್ದಿರ್‌ಂತ ಹೇಳಿ ಅವು ಸೌಯ್ದೆನೆಲ್ಲಾ ಹೊತ್ತ್‌ಕಂಡ್ ಮನೆಗೆ ಹೋದೋ. ಆಗ ಕತ್ತಲೆ ಆತ್. ಹೆಡ್ಡದೂಮ ಉಪಾಯ ಇಲ್ಲದೆ ಕಾಡ್‌ಲೇ ಉಳ್ತ್. ಏನ್ ಮಾಡ್ದೂಂತ, ಒಂದು ಮರ ಹತ್ತಿ ಕುದ್‌ಕಂಡತ್. ಇರ್ಳ್ ಏನಾರ ಕಾಡ್ ಮುರ್ಗಗ ಬಂದರೇಂತ ಅಂವಂಗೆ ಹೆದ್ರಿಕೆ.

ನಡ್ ಇರ್ಳ್ ಆಕನ ಅಲ್ಲಿಗೆ ಕೆಲವು ದೆವ್ವಂಗ ಬಂದೊ. ಆ ಮರದ ಕೆಳಗೆ ದೊಡ್ಡ ಕಿಚ್ಚಿನ ಹಾಕಿ ಅದರ ಸುತ್ತ ಕುಣ್ಕಂಡ್ ಬೊಬ್ಬೆ ಹಾಕಿದೊ. ಇದರ ಎಲ್ಲ ಮರದ ಮೇಲ್‌ಂದ ನೋಡ್ದ ಹೆಡ್ಡ ದೂಮಂಗೆ ಹೆದ್ರಿಕೆ ಆತ್. ಅಂವ ಉಸ್ರ್ ಕಟ್ಟಿಕಂಡ್ ಕುದ್ದತ್. ದೆವ್ವಂಗ ಕುಣಿವೊಸ್ಟ್ ಕುಣ್ದ್ ಆ ಮರದ ಕೆಳಗೆ ಮೊಣ್ಣ್‌ನ ಬೊಗ್ದ್ ತೆಗ್ಯಕೆ ಸುರುಮಾಡ್ದೊ. ಆಗ ಅಲ್ಲಿ ದೊಡ್ಡ ಗುಂಡಿ ಆತ್. ಅದರ ಒಳಗೆ ಒಂದು ಪೆಟ್ಟಗೆ ಇತ್ತ್. ಅದರ ಹೊರಗೆ ತೆಗ್ದೊ. ಅದರ್ಲಿ ತುಂಬಾ ಚಿನ್ನ, ಬೆಳ್ಳಿ, ಮುತ್ತು, ಮಾಣಿಕ್ಯ ಎಲ್ಲಾ ಇತ್ತ್. ಅದರ ತೆಗ್ದ್ ನೋಡಿ ಕುಸಿಂದ ಕುಣ್‌ದೊ. ಪುನಃ ಅದರ್ಲಿ ಹಾಕಿ ಪೆಟ್ಟಿಗೆನ ಬಾಯಿನ ಮುಚ್ಚಿ, ಗುಂಡಿ ಒಳಗೆ ಇಸಿ ಮೊಣ್ಣ್ ಮುಚ್ಚಿದೊ.

ಅಷ್ಟಾಕನ ಬೊಳ್‌ಪು ಆತ್. ಆಗ ಅವೆಲ್ಲಾ ಅಲ್ಲಿಂದ ಮಾಯ ಆದೊ. ಅದರ ಮರದ ಮೇಲ್‌ಂದ ನೋಡ್ದ ಹೆಡ್ಡ ದೂಮಂಗೆ ಸೋಜಿಗ ಆತ್. ಕುಸಿನೂ ಆತ್. ಬೆಳ್ಳಂಗೆ ಬೊಳ್ಪಾಕನ ಮರಂದ ಅಂವ ಇಳ್ತ್. ಮರದ ಕೆಳಗೆ ಇದ್ದ ಗುಂಡಿನ ಬೊಗ್ದ್ ಪೆಟ್ಟಿಗೆನ ಹೊರಗೆ ತೆಗ್ತ್. ಅದರ ಹೊತ್ತ್ ಕಂಡ್ ಮನೆಗ ಬಾತ್.

ಅಂವನ ಅವ್ವ ಮಜ ಬಾತಿಲ್ಲೇಂತ ತುಂಬಾ ಬೇಜಾರ್‌ಲಿ ಇತ್ತ್. ಅಣ್ಣಂದರ್ ಅವ್ವನೊಟ್ಟಿಗೆ, ಕಾಡ್‌ಲಿ ಅಂವನ ಹುಲಿ ಹಿಡ್ತ್‌ಂತ ಸುಳ್ಳು ಹೇಳಿದ್ದೊ. ಮಂಜನ ನೆನ್ಸೆಕಂಡ್ ಅಯ್ಯೆ ಮೊರ್ಟ್‌ಕಂಡ್ ಇರಿಕನ ಬಾಗಿಲ್ ಬೊಡ್ಡ ಸದ್ದಾತ್. ಬಾಗಿಲ್ ತೆಗ್ದ್ ನೋಡ್ರೆ ಹೆಡ್ಡ ದೂಮ ಭಾರದ ಪೆಟ್ಟಿಗೆನ ಹೊತ್ತ್‌ಕಂಡ್ ಬಾಗ್ಲಿಲಿ ನಿತ್ತುಟ್ಟು. ಅವ್ವ ಅವನ ತಲೆಂದ ಹೊರೆ ಇಳ್ಸಿ ಅಂವಂಗೆ ಕುಡ್ಯಕೆ ಕೊಟ್ಟತ್. ಪೆಟ್ಟಿಗೆ ಮುಚ್ಚಳ ತೆಗ್ದ್ ನೋಡಿಕನ ಅದರೊಳಗೆ ಚಿನ್ನ, ಬೆಳ್ಳಿ ಮುತ್ತು, ಮಾಣಿಕ್ಯ ಇತ್ತ್. ಅವ್ವಂಗೆ ಸಂತೋಸ ಆತ್. ಅಣ್ಣಂದರ್ ಇದರ ನೋಡಿ ಇದೆಲ್ಲಾ ನಿಂಗೆ ಹೇಂಗೆ ಸಿಕ್ಕಿತೂಂತ ಕೇಳ್ದೊ. ಅಂವ ನಡ್ದ ವಿಷಯ ಎಲ್ಲಾ ಹೇಳ್ತ್. ಅಣ್ಣಂದ್‌ರ್ ನವೂನೂ ಇಂದ್ ಪೋಯೀಂತ ಹೊರ್ಟೊ. ಕಾಡಿಗೆ ಹೋಗಿ ತಮ್ಮ ಹೇಳ್ದ ಮರದ ಮೇಲೆ ಕುದ್‌ಕೊಂಡೊ. ನಡ್ ಇರ್ಳ್ ಆಕನ ದೆವ್ವಂಗ ಬಂದೊ. ಕಿಚ್ಚಿ ಹಾಕಿ ಅದರ ಸುತ್ತ ಕುಣ್ದೊ. ಮೊಣ್ಣನ ಬೊಗ್ದ್ ನೋಡ್ದೊ. ಅಲ್ಲಿ ಪೆಟ್ಟಿಗೆ ಇತ್ಲೆ. ದೆವ್ವಂಗಳಿಗೆ ಸಿಟ್ಟ್ ಬಾತ್. ಅವು ಮರ ಮೇಲೆ ಕುದ್‌ಕಂಡ್ ಇದ್ದ ಅಣ್ಣಂದರ ನೋಡ್ದೊ. ಅವರ ಎಳ್ದ್ ಹಾಕಿಬೊಡ್ದ್ ಕೊಂದೊ.ಕತೆನ ಕೇಳಿ ನಾವೆಲ್ಲಾ ಹೆಡ್ಡ ದೂಮನ ಬಂಗ ಬರ್ಸಿದಕ್ಕೆ ಅಣ್ಣಂದರಿಗೆ ಹಾಗೇ ಆಕೂಂತ ಹೇಳಿಕಂಡ್ ಅಲ್ಲಿಂದ ನೀರಡಿಗೆ ಮೀಯಕ್ಕೆ ಓಡ್ದೊ.

ಅಜ್ಜಪ್ಪನ ಕತೆಗಳ ಭಂಡಾರಂದ ಏಳನೇ ಕತೆ

ರಕ್ಕಸ ಅಜ್ಜನ ಕತೆ

ಒಂದು ಊರಿತ್ತ್. ಆ ಊರ್‌ನ ಸುತ್ತ ಮುತ್ತ ದೊಡ್ಡ ದೊಡ್ಡ ಬಂಡೆಗ ಇದ್ದೊ. ಆ ಬಂಡೆಗಳ ಎಡೆಲಿ ಒಂದು ದೊಡ್ಡ ಗುಹೆ ಇತ್ತ್. ಅದರ್ಲಿ ಒಬ್ಬ ರಕ್ಕಸ ಅಜ್ಜ ವಾಸ ಮಾಡ್ತಿತ್ತ್. ಅಂವ ಬೆಟ್ಟದಷ್ಟ್ ಎತ್ತರ ಇತ್ತ್. ಅಂವನ ತಲೆ ಮಡ್ಕೆನಷ್ಟ್ ದೊಡ್ಡದಿತ್ತ್. ಕೆಬಿಗ ಆನೆನ ಕೆಬಿನಾಂಗೆ ಇದ್ದೊ. ಕಣ್ಣ್‌ಗ ಕಿಚ್ಚಿನ ಉಂಡೆನಾಂಗೆ ಕೆಂಪಾಗಿತ್ತ್. ಹುಬ್ಬುಗ ಕಂಬ್ಳಿ ಹುಳಗಳಾಂಗೆ ಇದ್ದೊ. ದಪ್ಪ ದಪ್ಪ ತುಟಿಗ, ಕೋರೆ ಹಲ್ಲ್‌ಗ , ಆನೆನ ಕಾಲ್‌ನಷ್ಟ್ ದಪ್ಪ ದಪ್ಪದ ಕಾಲ್‌ಗ , ನೋಡಿಕೆ ತುಂಬಾ ಭಯಂಕರ ಆಗಿ ಕಾಂಬತಿತ್ತ್. ಇದರನೆಲ್ಲಾ ಕೇಳಿಕನ ನಾವುಗೆ ಮಕ್ಕಳಿಗೆ ಆಗ ಹೆದ್ರಿಕೆ ಆಗ್ತಿತ್ತ್. ನಾವು ಆದಷ್ಟ್ ಅಜ್ಜಪ್ಪಂಗೆ ಅಂಡಿಕಂಡ್ ಕುದ್ರ್‌ತಿದ್ದೊ. ಆಗ ಅಜ್ಜಪ್ಪ, 'ಹೆದ್ರ್‌ಬೋಡಿ ಮಕ್ಕಳೇ ಅಂವ ಇಲ್ಲಿಗೆ ಬಾಕಿಲ್ಲೇಂತ

ಹೇಳ್ತಿದ್ದೊ. ಕತೆ ಮುಂದಕ್ಕೆ ಹೋತ್. ಆ ರಕ್ಕಸ ಅಜ್ಜಂಗೆ ಮಾಯ ಮೊಂತ್ರ ಗೊತ್ತಿತ್ತ್. ಅವನ ಗುಹೆಲಿ ಒಂದು ಕಾಳಿನ ಎತ್ತರದ ಮೂರ್ತಿ ಇತ್ತ್. ಅದ್ಕೆ ಯಾಗೊಳು ಅಂವ ಪೂಜೆ ಮಾಡ್ತಿತ್ತ್.

ಒಂದು ದಿನ ರಕ್ಕಸ ಅಜ್ಜಂಗೆ ಕನ್ಸ್‌ಲಿ ಕಾಳಿದೇವಿ ಕಣ್ಣ್‌ಗೆ ಕಂಡ್ ನಿಂಗೇನ್ ಬೇಕೂಂತ ಕೇಳ್ತ್. ನಾ ಸಾಯಕೆ ಬೊತ್ತು. ನಂಗೆ ಮರಣ ಇಲ್ಲದಾಂಗೆ ಮಾಡ್‌ಂತ ಕೇಳ್ತ್. ಆಗ ಕಾಳಿದೇವಿ ಹೇಳ್ತ್, ' ನೀ ನೂರು ಜನ ಹೆಣ್ಣ್ ಗೂಡೆಗಳ ತಂದ್ ನಂಗೆ ಅಮಾಸೆ ದಿನ ಬಲಿಕೊಡು, ಆಗ ನಿನ್ನ ಇಷ್ಟ ಸಿದ್ದಿಸಿದೇಂತ. ಅಷ್ಟಾಕನ ಅಂವಂಗೆ ಎಚ್ಚರ ಆತ್. ಅಂವ ಮಾಯಾ ರೂಪದರ್ಶಿತ್. ಸನ್ನೇಸಿನಂಗೆ ಉದ್ದದ ಗಡ್ಡ, ತಲೆ ಮೇಲೆ ಜುಟ್ಟು, ಕಾವಿ ಬಟ್ಟೆ ಕೈಲಿ ಜಪಮಾಲೆ, ಒಂದು ಜೋಳಿಗೆ ಎಲ್ಲಾ ಇತ್ತ್. ಅಂವ ಊರ್ ಕಡೆ ಹೊರ್ಟತ್. ಊರ ಹೊರಗೆ ಇದ್ದ ಅರಳಿ ಕಟ್ಟೆಲಿ ಕುದ್ದತ್. ಅದರ ಎದ್‌ರ್ ಒಂದು ಕೆರೆ ಇತ್ತ್. ಹೆಣ್ಣ್ ಮಕ್ಕ ಕೆರೆಗೆ ಬಟ್ಟೆ ಒಗ್ಯಕೆ, ನೀರ್ ತಕಂಡೋಕೆ ಬಾತಿದ್ದೊ. ಅವರ್ನೇ ನೋಡ್ತ್. ಅವರ್ಲಿ ಪೊರ್ಲ್ ಇದ್ದ ಒಂದು ಹೆಣ್ಣ್ ಗೂಡೆನ ಮೇಲೆ, ಜೋಳಿಗೆಂದ ಒಂದು ಕಲ್ಲ್ ತೆಗ್ದ್‌ದ್ ಮೊಂತ್ರಿಸಿ ಬಿಸಾಡ್ತ್. ಆ ಕಲ್ಲ್ ಗೂಡೆಗೆ ತಾಂಗಿತ್. ಆಗ ಅದ್ ಒಂದು ಗಿಣಿ ಮೊರಿ ಆಗಿ ಬದ್‌ಲಾಯಿಸಿತ್. ಆ ಗಿಣಿನ ಹಿಡ್ಕಂಡ್ ಜೋಳಿಗೆಗೆ ಹಾಕಿ ಬಂಡೆಗಳ ಎಡೆಲಿ ಇದ್ದ ಅಂವನ ಗುಹೆಗೆ ಬಾತ್. ಅಲ್ಲಿ ಒಂದು ಪಂಜರಲಿ ತೂಗಿ ಹಾಕಿತ್.

ಹೀಂಗೆ ತಿಂಗಳಿಗೊಮ್ಮೆ ಅಮಾಸೆ ದಿನ ಊರಿಗೆ ರಕ್ಕಸ ಅಜ್ಜ ಸನ್ನೇಸಿ ರೂಪಲಿ ಬಂದ್‌ದ್ ಗೂಡೆಗಳ ಹಿಡ್ಕಂಡ್ ಹೋಗ್ತಿತ್ತ್. ಜನಂಗೆಲ್ಲಾ ಗಾಬೆರಿ ಆದೊ. ನಮ್ಮ ಹೆಣ್ಣ್ ಮಕ್ಕ

ಎಲ್ಲಿ ಮಾಯ ಆದೋಂತ ಗೊತ್ತಾಗದೆ ಬೊಬ್ಬೆ ಹೊಡ್ದೊ. ಅವೆಲ್ಲಾ ಊರ್‌ನ ದೊರೆ ಹಕ್ಕಲೆ ಹೋದೋ. ದೊರೆಗೆ ದೂರು ಕೊಟ್ಟೊ. ದೊರೆ ಡಂಗುರ ಸಾರ್ಸಿತ್ತ್. ಯಾರ್ ಗೂಡೆಗಳ ಪತ್ತೆ ಹಚ್ಚಿ ತಂದವೆನೊ ಅವ್ಕೆ ಅರ್ಧ ರಾಜ್ಯ ಮತ್ತ್ ನನ್ನ ಮಗಳ್ನ್ ಧಾರೆ ಎರ್ದ್ ಕೊಟ್ಟನೇಂತ. ಬೇರೆ ಬೇರೆ ಊರ್‌ಂದ ಹೊಂತಗಾರ ಹೈದಂಗ ಬಂದೊ. ಹುಡ್ಕಿದೊ. ಯಾರಿಗೂ ಸಿಕ್ಕಿತಿಲ್ಲೆ. ಆ ಊರ್‌ಲಿ ಯಾರೂ ಗತಿ ಇಲ್ಲದ ಒಬ್ಬ ತಬ್ಬೆಲಿ ಹೊಂತಗಾರ ಹೈದ ಇತ್ತ್. ಅಂವ ಎಲ್ಲರ ಮನೆ ಚಾಕ್ರಿ ಮಾಡಿಕಂಡ್ ಹೊಟ್ಟೆ ತುಂಬ್‌ಸ್‌ತಿತ್ತ್. ಬಾಳ ಎದೆಗಾರಿಕೆನೂ, ಬಾಳ ಪೊರ್ಲುನೂ ಇತ್ತ್. ಒಂದ್ ದಿನ ಅಂವ ಆ ಕೆರೆ ಹಕ್ಕಲೆ ಬಂದ್‌ದ್, ನೀರ್ ತಕಂಡ್ ಹೊತ್‌ಕಂಡ್ ಬಾಕನ ಎದ್ರಿಲಿ ಒಬ್ಬ ಸನ್ನೇಸಿ ಬಾವುದರ ನೋಡ್ತ್. ಆ ಸನ್ನೇಸಿನ ಮೋರೆ ನೋಡಿಕನ ಇಂವಂಗೆ, ಇಂವ ಯಾರಾಗಿರ್ದೂಂತ ಯೋಚನೆ ಬಾತ್. ತಬ್ಬೆಲಿ ಹೈದ ನೀರ್‌ನ ಅಲ್ಲೇ ಒಂದ್ ಮರದ ಕೆಳಗೆ ಇಸಿದ್, ಆ ಸನ್ನೇಸಿನ ಹಿಂದೆ ಹೋತ್. ಆ ಸನ್ನೇಸಿ ಅರಳಿ ಮರದ ಕೆಳಗೆ ಕುದ್ದತ್. ಹಂಞ ಹೊತ್ತ್‌ಲಿ ಗೂಡೆಗ ಅಲ್ಲಿಗೆ ನೀರಿಗೆ ಬಂದೊ. ಅದರ್ಲಿ ಒಂದು ಗೂಡೆ ಬಾಳ ಪೊರ್ಲು ಇತ್ತ್. ಸನ್ನೇಸಿ ಕಲ್ಲ್‌ನ ಮೊಂತ್ರಿಸಿ ಆ ಗೂಡೆಗೆ ಹೊಡ್ತ್. ಗೂಡೆ ಗಿಣಿ ಆತ್. ಸನ್ನೇಸಿ ಅದರ ಹಿಡ್ದ್ ಜೋಳಿಗೆಲಿ ತುಂಬಿಸಿದ್ ಗುಡ್ಡೆ ಹತ್ತಿತ್. ಹೈದ ಇದರ ಎಲ್ಲಾ ನೋಡ್ತ್. ಅಂವ ಸನ್ನೇಸಿನ ಹಿಂದೆನೇ ಹೋತ್. ಸನ್ನೇಸಿ ಬಂಡೆಗಳ ಸೆರೆಲಿ ಮಾಯ ಆತ್. ಹೈದ ಎಷ್ಟ್ ಹುಡ್ಕಿರೂ ಸಿಕ್ಕಿತಿಲ್ಲೆ. ಸನ್ನೇಸಿನ ಮಾಯ ಮೊಂತ್ರಂದ ಆ ಗುಹೆ ಯಾರ ಕಣ್ಣಿಗೂ ಬೀಳ್‌ತಿತ್ಲೆ. ಹೈದಂಗೆ ಇದರೆಲ್ಲ ನೋಡಿ ಸೋಜಿಗ ಆತ್. ಊರ್‌ನ ಗೂಡೆಗ ಮಾಯ ಆಗ್ತಿದ್ದದ್ದಕ್ಕೂ, ಈ

ಸನ್ನೇಸಿಗೂ ಏನೋ ಸಂಬಂಧ ಉಟ್ಟೂಂತ ಅಂವಂಗೆ ಗೊತ್ತಾತ್. ಈ ವಿಷಯನ ಅಂವ ಯಾರಿಗೂ ಹೇಳ್ತಿಲ್ಲೆ. ಅಂದ್‌ಂದ ಅಂವ ಊರ್‌ಲಿ ಯಾರ ಕಣ್ಣಿಗೂ ಬೀತ್ಲೆ. ಅಂವ ಸೀತಾ ಕಲ್ಲ್ ಬಂಡೆಗ ಇದ್ದ ಗುಡ್ಡಕ್ಕೆ ಬಾತ್. ದಿನಾ ಅಲ್ಲಿ ಎಲ್ಲಾ ಹುಡ್ಕಿಕಂಡ್ ನೋಡ್ತ್. ಅಂವಂಗೆ ಏನ್ ಕಾಂಬತಿತ್ಲೆ. ಏನ್ ಮಾಡ್ದೂಂತ ಏಚನೆ ಮಾಡ್ತ್. ಹಾಂಗೆ ಗುಡ್ಡದ ಕೆಳಗೆ ಒಂದು ಮರದ ಬುಡಲಿ ಕುದ್ದ್‌ಕಂಡ್ ಏಚನೆ ಮಾಡ್ತಾ ಇರಿಕನ ಅಲ್ಲಿಗೆ ಒಂದ್ ಅಜ್ಜಿ ಬಾತ್, 'ಯಾರ್ ಮಗಾ ನೀ, ಇಲ್ಲಿ ಯಕೆ ಕುದ್ದಳಾಂತ' ಕೇಳ್ತ್. 'ನಾ ಯಾರೂ ಇಲ್ಲದ ತಬ್ಬೆಲಿ. ನಮ್ಮ ಊರ್ಲಿ ತಿಂಗಳಿಗೊಬ್ಬಬ್ಬ ಗೂಡೆಗ ಮಾಯ ಆದವೇಂತ' ಹೇಳ್ತ್. ಆ ಅಜ್ಜಿಗೆ ಹಂಞ ಮಾಟ, ಮೊಂತ್ರ ಗೊತ್ತಿತ್ತ್. ಆಗ ಅದ್ ಅಂಜನ ಇಸಿತ್. ಆಗ ಅಜ್ಜಿಗೆ ಎಲ್ಲಾ ಗೊತ್ತಾತ್. ಅದ್ ಅಂವಂಗೆ ಹೇಳ್ತ್, 'ನೋಡು ಮಂಜ ಆ ಗೂಡೆಗ ಒಂದು ರಕ್ಕಸ ಅಜ್ಜನ ಬಂಧನಲಿ ಒಳೊ. ಅಂವ ಭಾರೀ ಬಲ ಇದ್ದಂವ. ಅಂವನ ಗೆಲ್ಲಿಕೆ ನಿಂಗೆ ಆಕಿಲ್ಲೇಂತ' ಹೇಳ್ತ್. ಆಗ ಹೈದ ಹೇಳ್ತ್, 'ಪಾಪದ ಗೂಡೆಗಳ ಬಂಧನಂದ ಬುಡ್ಡೋಕು. ನೀ ನಂಗೆ ಸಾಯ ಮಾಡೂಂತ' ಅಜ್ಜಿನ ಕೇಳ್ತ್. ಅಜ್ಜಿ ಪುನಃ ಅಂಜನ ನೋಡಿ ಕಣ್ಣ್ ಮುಚ್ಚಿ, ಮೊಂತ್ರ ಹೇ:ಳಿ, ಕಣ್ಣ್ ಬುಟ್ಟ್‌ದ್, 'ಆ ರಕ್ಕಸ ಅಜ್ಜ ತಿಂಗಳಿಗೊಮ್ಮೆ ಅಮಾಸೆ ದಿನ ಸನ್ನೇಸಿ ರೂಪಲಿ ಊರಿಗೆ ಬಂದ್, ಗೂಡೆಗಳ ಮೊಂತ್ರದ ಗಿಣಿ ಮಾಡಿ ಜೋಳಿಗೆ ತುಂಬಿಸಿ, ಅಂವನ ಗುಹೆಗೆ ತೆಗ್ದ್‌ಕಂಡ್ ಹೋಗುತಿತ್ತ್. ಆ ರಕ್ಕಸ ಅಜ್ಜನ ಜೀವ, ಏಳ್ ಸಮುದ್ರದಾಚೆಗೆ ಇರುವ ಬೆಟ್ಟದ ಬುಡದ ಗುಹೆಲಿ, ಒಂದು ಪಂಚವರ್ಣದ ಗಿಣಿ ಉಟ್ಟು, ಅದರ್ಲಿ ಉಟ್ಟು. ಅದರ ಹಿಡ್ದ್ ಕೊಂದರೆ ಅಂವ ಸತ್ತದೆ. ಆಗ ಆ ಗೂಡೆಗಳ

ಬುಡ್ಲೊಕೂಂತ ಹೇಳ್ತ್.

ಏನ್ ಮಾಡ್ದೂಂತ ಇಬ್ಬೊರು ಮಾತಾಡಿಕೊಂಡೊ. ಅಜ್ಜಿ ಅಂವಂಗೆ ಮೂರು ಕಲ್ಲ್‌ನ ಮೊಂತ್ರಿಸಿ ಕೊಟ್ಟದೆ. 'ನಿಂಗೆ ಕಷ್ಟ ಬಾಕನ ನನ್ನ ನೆನ್ಸಕಂಡ್ ಒಂದೊಂದೇ ಕಲ್ಲ್‌ನ ನೆಲಕ್ಕೆ ಬಿಸಾಕ್‌ಂತ' ಹೇಳ್ತ್. ಅಂವಂಗೆ ತನ್ನ ಮೊಂತ್ರದ ಶಕ್ತಿಂದ ಒಂದ್ ಕೀಲ್ ಕುದ್ರೆ ಕೊಟ್ಟ್, ಒಂದು ಕತ್ತಿನ ಕೊಟ್ಟದೆ. ಇದರ ಮೇಲೆ ಕುದ್‌ಕಂಡ್ ನಿಂಗೆ ಎಲ್ಲಿಗೆ ಹೋಕೋ ಆ ಜಾಗನ ನೆನ್ಸಿಕಂಡ್ ಈ ಕೀಲ್‌ನ ತಿರ್‍ಗಿಸ್. ಆಗ ಕುದ್ರೆ ನಿನ್ನ ಅಲ್ಲಿಗೆ ಬುಟ್ಟದೇಂತ' ಹೇಳ್ತ್. ಹೈದ ಅದರ ಮೇಲೆ ಕುದ್ದ್ 'ಏಳ್ ಸಮುದ್ರದ ಆಚೆ ಕರ್‍ಕೊಂಡು ಹೋಗೂಂತ' ಕೀಲ್ ತಿರ್‍ಗಿಸಿತ್. ಕುದ್ರೆ ಆಕಾಸಲಿ ಹಾರ್‍ತ್. ಏಳ್ ಸಮುದ್ರ ದಾಟಿತ್. ಬೆಟ್ಟದ ಕೆಳಗೆ ಇಳ್ತ್. ಅಂವ ಬೆಟ್ಟ ಹತ್ತಿ ಹುಡ್ಕಿಕನ ಅಲ್ಲಿ ಅಂವಂಗೆ ಗುಹೆ ಕಂಡದೆ. ಅದರ ಒಳಗೆ ಹೊಕ್ಕಿ ನೋಡಿಕನ ಅಲ್ಲಿ ಒಂದು ಗಿಣಿ ಪಂಜರ ಮರಲಿ ನೇತಾಡ್ತಿತ್ತ್. ಆ ಮರಕ್ಕೆ ಏಳ್ ಹೆಡೆನ ಸರ್ಪ ಸುತ್ತಿಕಂಡಿತ್ತ್. ಆ ಹೈದ ಅಂವನ ಕೈಲಿದ್ದ ಕತ್ತಿಂದ ಆ ಸರ್ಪನ ಕಡ್ದ್ ಕೊಂದ್, ಗಿಣಿನ ಪಂಜರನ ಕೈಲಿ ಹಿಡ್ಕಂಡ್, ಕೀಲಿ ಕುದ್ರೆ ಮೇಲೆ ಕುದ್ದ್, ಅಜ್ಜಿ ಇದ್ದಲ್ಲಿಗೆ ಕರ್ಕೊಂಡ್ ಹೋಗೂಂತ ಹೇಳ್ತ್. ಕಣ್ಣ್ ಮುಚ್ಚಿ ಬುಡುವಷ್ಟರಲ್ಲಿ ಅಂವನ ಅಜ್ಜಿನ ಎದ್ರ್ ಕುದ್ರೆ ಇಳ್ಸಿತ್. ಅಜ್ಜಿ ಅಂವನ ನೋಡಿ ಸಂತೋಸಂದ 'ನೀ ಈಗ ಈ ಗಿಣಿನ ರೆಂಕೆನ ಕಿತ್ತ್ ಹಾಕ್‌ಂತ ಹೇಳ್ತ್. ಅಂವ ಒಂದ್ ರೆಂಕೆನ ಕಿತ್ತ ಹಾಕಿದೆ. ಆಗ ಭೂಮಿ ನಡ್ಗುವ ಹಾಂಗೆ ಆರ್ಭಟೆ ಕೊಟ್ಟ್ ಕಂಡ್ ರಕ್ಕಸ ಅಜ್ಜ ಹೊರಗೆ ಬಾತ್. ಅಜ್ಜಿ ಹೇಳ್ತ್ ಒಂದು ಕಲ್ಲ್‌ನ ಕೆಳಗೆ ಹಾಕ್‌ಂತ. ಅಜ್ಜಿನ ನೆನ್ಸಿಕಂಡ್ ಒಂದ್ ಕಲ್ಲ್‌ನ ನೆಲಕ್ಕೆ ಇಟ್ಟತ್. ಆಗ ರಕ್ಕಸನ ಎದ್ರ್

ದೊಡ್ಡ ಕಂದಕರ ಹಾಂಗೆ ಭೂಮಿ ಬಾಯ್ ಬುಟ್ಟತ್. ರಕ್ಕಸ ಬೊಬ್ಬೆ ಹೊಡ್ಕಂಡ್ ಆ ಕಂದಕನ ದಾಟಿ ಬಾತ್. ಆಗ ಅಜ್ಜಿ ಹೇಳ್ತ್, 'ಇನ್ನೊಂದು ರೆಂಕೆ ಮುರೀಂತ.' ಹೈದ ಮತ್ತೊಂದು ರೆಂಕೆ ಮುರ್ತ್. ಆಗ ರಕ್ಕಸ ಅಜ್ಜ ಮುಂದೆಂದಳೂ ದೊಡ್ಡ ದನಿ ತೆಗ್ದ್ ಬೊಬ್ಬೆ ಹಾಕಂಡ್ ಬಾತ್. ಅಂವನ ಇನ್ನೊಂದು ಕೈನೂ ಮುರ್ತ್. ಅಜ್ಜಿ ಹೇಳ್ತ್, 'ಇನ್ನೊಂದು ಕಲ್ಲ್‌ನ ನೆಲಕ್ಕೆ ಹಾಕ್‌ಂತ. ಎರಡನೇ ಕಲ್ಲ್‌ನ ಅಜ್ಜಿನ ನೆನ್ಸಿಕಂಡ್ ನೆಲಕ್ಕೆ ಹಾಕಿತ್. ಆಗ ರಕ್ಕಸ ಅಜ್ಜನ ಮುಂದೆ ದೊಡ್ಡ ಕಾಡ್ಗಿಚ್ಚ್ ಹರ್ಡಿಕಂಡತ್. ಅದರ್ನೂ ದಾಟಿಕಂಡ್ ರಕ್ಕಸ ಅಜ್ಜ ಬಾತ್. ಆಗ ಅಜ್ಜಿ ಹೇಳ್ತ್ ಗಿಣಿನ ಎರ್ಡ್ ಕಾಲುನೂ ಮುರ್ದ್ ಹಾಕ್‌ಂತ. ಹೈದ ಗಿಣಿನ ಕಾಲ್ಗಳ ಮುರ್ತ್. ಆಗ ರಕ್ಕಸಜ್ಜನ ಎರ್ಡೂ ಕಾಲ್‌ಗ ಮುರ್ದೊ. ಅಂವ ಭೂಮಿಗೆ ಬೀತ್. ಅಲ್ಲಿಂದಳೇ ಹೊರ್ಳಿಕಂಡ್ ರಕ್ಕಸ ಅಜ್ಜ ಇಂವನ ಹಕ್ಕಲೆ ಬಾಕನ ಅಜ್ಜಿ ಹೇಳ್ದಂಗೆ ಅಕೇರಿನ ಕಲ್ಲ್‌ನನೂ ನೆಲಕ್ಕೆ ಇಟ್ಟತ್. ಆಗ ದೊಡ್ಡ ಸಮುದ್ರ ರಕ್ಕಸ ಅಜ್ಜನ ಎದ್ರಿಗೆ ಆತ್. ರಕ್ಕಸ ಅಜ್ಜ ಹೊರ್ಳಿಕಂಡ್ ಸಮುದ್ರಲಿ ಬಂದದೆ. ಆಗ ಅಜ್ಜಿ ಹೇಳ್ದೆ 'ಈಗ ಗಿಣಿನ ಕುತ್ತಿಗೆನ ಮುರೀಂತ'. ಹೈದ ಗಿಣಿನ ಕುತ್ತಿಗೆನ ಮುರ್ದದೆ. ರಕ್ಕಸ ಅಜ್ಜ ಆಗ ಸತ್ತ್ ಹೋಗಿ ನೀರ್‌ಲಿ ಕೊಚ್ಚಿಕಂಡ್ ಹೋದೆ. ಅಜ್ಜಿಗೆ ಮತ್ತೆ ಹೈದಂಗೆ ಭಾರಿ ಸಂತೋಸ ಆತ್. ರಕ್ಕಸ ಅಜ್ಜ ಇರಿಕನ ಅಂವನ ಮಾಯಾಜಾಲಂದ ಆ ಗುಹೆ ಯಾರ ಕಣ್ಣಿಗೂ ಬೀಳ್ತಿತ್ತ್ಲೆ. ಅಂವ ಸತ್ತ ಕೂಡಲೇ ಎಲ್ಲೋವ್ಕೂ ಆಗುಹೆ ಕಣ್ಣ್‌ಗೆ ಕಂಡತ್. ಗುಹೆ ಒಳಗೆಂದ ಗೂಡೆಗ ಎಲ್ಲಾ ಓಡಕಂಡ್ ಹೊರಗೆ ಬಂದೊ. ರಕ್ಕಸಜ್ಜ ಸತ್ತ ಕಾರಣ ಅವರ ಗಿಣಿ ರೂಪ ಮಾಯ ಆಗಿ ಅವು ಮುಂದೆನಾಂಗೆ ಗೂಡೆಗ ಆದೊ. ಆ ಹೈದ ಅಜ್ಜಿನನೂ

ಆ ಗೂಡೆಗಳನೂ ಕರ್ಕಂಡ್ ಎಲ್ಲೋವು ಒಟ್ಟಿಗೆ ಊರಿಗೆ ಬಂದೋ. ಊರೊವೆಲ್ಲ ಸಂತೋಸಂದ ಅವರವರ ಮಕ್ಕಳ ಬಾಚಿ ತಬ್ಬಿಕೊಂಡೊ. ಈ ಸುದ್ದಿ ಊರ್‌ನ ದೊರೆಗೆ ಮುಟ್ಟಿತ್. ಅಂವ ಹೈದನ ಕರ್ಕಂಡ್ ಬಾಕೆ ಪಲ್ಲಂಕಿ ಕಳ್ಸಿತ್. ಸೈನಿಕರ್ ಬಂದ್ ಇಂವನ ಪಲ್ಲಂಕಿಲಿ ಕುದ್ರಿಸಿಕಂಡ್ ಊರ್‌ನ ದೊರೆನಲ್ಲಿಗೆ ತಂದೋ. ಊರ್‌ನ ದೊರೆ ಒಪ್ಪಿದಂಗೆ ಇಂವಂಗೆ ಅರ್ಧ ರಾಜ್ಯ ಕೊಟ್ಟ್, ಮಗಳ ಕೊಟ್ಟ್ ಮೊದ್ವೆ ಮಾಡ್ಸಿತ್. ತಬ್ಬೆಲಿ ಹೈದ ಊರ್‌ನ ರಾಜ ಆತ್. ಅಂವ ರಾಜಕುಮಾರಿನೊಟ್ಟಿಗೆ ಸುಕಲಿ ರಾಜ್ಯ ಭಾರ ಮಾಡಿಕಂಡ್ ಇತ್ತ್. ಮಕ್ಕಳೇ, ನಾ ಹೋಗಿ ಬಂದೆ. ನೀವುನೂ ಹೋಗಿ ನೋಡಿ ಬನ್ನೀಂತ ಅಜ್ಜಪ್ಪ ಹೇಳ್ದೊ. 'ಆತಜ್ಜಪ್ಪಾಂತ ನಾವು ಅಲ್ಲಿಂದ ಎದ್ದ. ಓಡ್ದೊ.

******

ಅಜ್ಜಪ್ಪನ ಕತೆಗಳ ಭಂಡಾರಂದ ಎಂಟನೆ ಕತೆ

ನೆಳ ಮುತ್ತನ ಕತೆ

‘ ಅಜ್ಜಪ್ಪಾ, ಅಜ್ಜಪ್ಪಾ ಇಂದ್ ನೀವು ಯಾವ ಕತೆ ಹೇಳಿರೆ?’ ನಾವು ಮೂರು ಜನ ಪುಳ್ಳಿಕ ಅಜ್ಜಪ್ಪನ ಸುತ್ತ ಕುದ್ದ್‌ಕಂಡ್ ಕೇಳ್ದೊ. ಇಂದ್ ನೀವುಗೆ ‘ನೆಳ ಮುತ್ತ’ನ ಕತೆ ಹೇಳ್ನೆ, ಎಡೆಡೆಲಿ ಮಾತಾಡಿಕ್ಕೆ ಬೊತ್ತ್‌ಂತ ಹೇಳಿ ಅಜ್ಜಪ್ಪ ಕತೆ ಸುರು ಮಾಡ್ದೊ.

ಒಬ್ಬ ರಾಜಂಗೆ ಮೂರು ಜನ ಹೆಣ್ಣ್ ಮಕ್ಕ ಇದ್ದೊ. ಅವು ಒಬ್ಬರ್‌ಂದ ಒಬ್ಬ ಪೊರ್ಲು ಇದ್ದೊ. ಅದರ್ಲಿ ಸಣ್ಣ ಗೂಡೆ ಬೆದ್ರೊಳಗೆ ಇದ್ದ ಚದ್ರಂಗಿನ ಹಾಂಗೆ ಬಾಳ ಪೊರ್ಲು ಇತ್ತ್. ಅಕ್ಕಂದರಿಗೆ ತಂಗೆ ತಮ್ಮಂದ ಪೊರ್ಲು ಉಟ್ಟುಂತ ಹೊಟ್ಟೆಕಿಚ್ಚ್. ಅವು ಅದರ ಮೇಲೆ ಏನಾದರೊಂದು ಚಾಡಿ ಹೇಳಿ ರಾಜನ ಕೈಲಿ ಬೊಯ್ಗಳ ಸಿಕ್ಕುವಾಂಗೆ ಮಾಡ್ತಿದ್ದೊ. ರಾಜ ಅಕ್ಕಂದರ

ಮಾತ್ನ ನಂಬತಿತ್ತ್. ತಂಗೆ ಬೊರಿ ಪಾಪದ ಗೂಡೆ. ಒಮ್ಮೆ ಅಕ್ಕಂದರ್ ತಂಗೆನೊಟ್ಟಿಗೆ ಕೇಳ್ದೊ, 'ನೀ ಮೊದ್ವೆ ಆದ ಮೇಲೆ ಗಂಡನ ಹೆಚ್ಚ್ ಪ್ರೀತಿ ಮಾಡ್ಯನೊ, ಅಪ್ಪನ ಹೆಚ್ಚ್ ಪ್ರೀತಿ ಮಾಡ್ಯೋನೋಂತ. ಅದಕ್ಕೆ ತಂಗೆ ಹೇಳ್ದೆ. 'ಅಪ್ಪ ಮೊದುವೆ ಆಕನ ಮುಟ್ಟ ಸಾಕುವೆ. ಗಂಡ ಸಾಯಕನ ಮುಟ್ಟ ಸಾಕಿದೆ. ಅದ್ಕೆ ನಾ ಗಂಡನ ಹೆಚ್ಚ್ ಪ್ರೀತಿ ಮಾಡ್ನೇಂತ ಹೇಳ್ತ್. ಅಕ್ಕಂಗ, 'ನಾವು ಅಪ್ಪನನೇ ಹೆಚ್ಚ್ ಪ್ರೀತಿ ಮಾಡುವೇಂತ' ಹೇಳ್ದೊ. ಅಕ್ಕಂದರ್ ರಾಜನಲ್ಲಿಗೆ ಹೋಗಿ ತಂಗೆನ ಮೇಲೆ ಒಂದಕ್ಕೆ ಎರ್ಡ್ ಕೂಡ್ಸಿ ಚಾಡಿ ಹೇಳ್ದೊ. 'ಅಪ್ಪಾ ತಂಗೆಗೆ ನಿಮ್ಮ ಮೇಲೆಂದ ಗಂಡನ ಮೇಲೆ ಹೆಚ್ಚ್ ಪ್ರೀತಿಗಡಾಂತ' ಹೇಳ್ದೊ. ಇದರ ಕೇಳಿ ರಾಜಂಗೆ ಸಿಟ್ಟ್ ಬಾತ್. ಅಂವ ಹೌದಾ ಹಾಂಗಾರೆ ಅದ್ಕೆ ಬುದ್ದಿ ಕಲ್ಸಿನೇಂತ, ಮಂತ್ರಿನ ಕರ್ದ್ ಹೇಳ್ತ್. 'ನಾಳೆ ಬೊಳ್ಪುಗೆ ಯಾರ್ ಭಿಕ್ಷೆಗೆ ಅರಮನೆ ಬಾಗ್ಲಿಗೆ ಬಂದವೆನೊ ಅವಂಗೆ ನನ್ನ ಸಣ್ಣ ಮಗಳ ಮೊದ್ವೆ ಮಾಡಿಕೊಡೂಂತ.' 'ಯಾಕೆ ಮಾರಾಜಾಂತ' ಮಂತ್ರಿ ಕೇಳ್ತ್. ಅದೆಲ್ಲಾ ನಿಂಗೆ ಬೇಡ. ನಾ ಹೇಳ್ದಂಗೆ ನೀ ಮಾಡ್. ನಂಗೆ ಅದರ ಮೋರೆ ನೋಡಿಕೂ ಇಷ್ಟ ಇಲ್ಲೆ. ನೀನೇ ಧಾರ ಎರ್ದ್ ಕೊಡೂಂತ ರಾಜ ಮಂತ್ರಿಗೆ ಹೇಳ್ತ್. ದೊಡ್ಡವರ ಸಂಗತಿ ನಂಗೆ ಯಾಕೇಂತ, 'ಆತ್ ಮಾರಾಜಾಂತ' ಮಂತ್ರಿ ಹೇಳ್ತ್. ಮಂತ್ರಿ ಆಳ್‌ಗಳ ಕರ್ದ್, 'ನಾಳೆ ಯಾರ್ ಬೊಳ್ಪುಗೆ ಭಿಕ್ಷೆ ಬೇಡಿಕೆ ಬಂದವೆನೊ ಅವರ ಕರ್ಕಂಡ್ ನನ್ನ ಹಕ್ಕಲೆ ಬನ್ನೀಂತ.' ಹೇಳ್ದೆ.

ಆ ಊರಿಗೆ ಒಬ್ಬ ಭಿಕ್ಷುಕ ಬಂದದೆ. ಅಂವ ಊರ್‌ನ ಹೊರಗಿನ ಕಲ್ಲ್ ಮಂಟಪಲಿ ಇತ್ತ್. ಅವನ ಮೈಮೇಲೆ ಒಂದು ಹರ್ಕಲ್ ಕೋಟು ಇತ್ತ್. ಅದ್ ಒಗ್ಯದೆ ವಾಸನೆ ಬಾತಿತ್ತ್. ಅದರ

ಅಂವ ಮೈಯಿಂದ ತೆಗಿತಿತ್ಲೆ. ಆ ಕೋಟ್‌ಗೆ ನೆಳಂಗೆಲ್ಲಾ ಬಂದ್‌ದ್ ಮುತ್ತ್‌ತಿದ್ದೊ. ಅದ್ಕೆ ಅವನ ಜನ ನೆಳ ಮುತ್ತಾಂತ ಕರ್‍ಯತಿದ್ದೊ. ಅವನ ಹಕ್ಕಲೆ ಒಂದು ಜೋಳಿಗೆ ಇತ್ತ್. ಜನ ಕೊಟ್ಟ ಭಿಕ್ಷೆನ ಜೋಳಿಗೆಗೆ ಹಾಕಿ ತಂದ್‌ದ್ ಕಲ್ಲ್ ಮಂಟಪಲಿ ಕುದ್ದ್‌ದ್ ಉಂಬತಿತ್ತ್. ಅಂವ ಮಾರ್‍ಣೆ ದಿನ ಅರಮನೆ ಬಾಗ್ಲಿಗೆ ಹೋಗಿ ಭಿಕ್ಷೆ ಬೇಡ್ತ್. ಆಗ ಮಂತ್ರಿನ ಆಳ್‌ಗ ಅವನ ಹಿಡ್ಕಂಡ್ ಮಂತ್ರಿನಲ್ಲಿಗೆ ಕರ್‍ಕಂಡ್ ಬಂದೊ. ಮಂತ್ರಿ ಅಂವಂಗೆ ರಾಜಕುಮಾರಿನ ಧಾರೆ ಎರ್‍ದ್ ಕೊಟ್ಟ್. 'ಇಂದ ಇಂದ್‌ಂದ ಇದ್ ನಿನ್ನ ಹೆಣ್ಣ್. ಕರ್‍ಕೊಂಡ್ ಹೋಗೂಂತ' ಹೇಳ್ತ್. ನೆಳ ಮುತ್ತಂಗೆ ಏನ್ ಮಾಡ್ದೂಂತ ಗೊತ್ತಾದ್ಲೆ. ಮಂತ್ರಿಗೆ ಹೆದ್ರಿ ಹೆಣ್ಣ್‌ನ ಕರ್‍ಕಂಡ್ ಕಲ್ಲ ಮಂಟಪಕ್ಕೆ ಬಾತ್. ರಾಜಕುಮರಿನೊಟ್ಟಿಗ ಹೇಳ್ತ್, 'ನಾ ನಿಂಗೆ ಸರಿಯಾದ ಗಂಡ ಅಲ್ಲ. ನೀ ಎಲ್ಲಿಗೆ ಬೇಕಾದರೂ ಹೋಗು. ನನ್ನಿಂದ ನಿಂಗೆ ಏನ್ ತೊಂದ್ರೆ ಆಕಿಲ್ಲೇಂತ.' ಆದರೆ ರಾಜಕುಮಾರಿ ಒಪ್ಪಿತಿಲ್ಲೆ. 'ನೀ ನನ್ನ ಗಂಡ. ನೀ ಇದ್ದಲ್ಲೇ ನಾ ಇದ್ದನೆ. ನೀ ತಂದ್ ಕೊಟ್ಟದರ ನಾ ತಿಂದನೆ. ನಿನ್ನ ಬುಟ್ಟ್ ಹೋದುಲ್ಲೇಂತ' ಹೇಳ್ತ್. ಅದರ ಮಾತ್ ಕೇಳಿ ನೆಳ ಮುತ್ತಂಗೆ ಇದ್ ಬಾಳ ಒಳ್ಳೆಗೂಡೇಂತ ಅದರ ಗುಣನ ಮೆಚ್ಚಿತ್. ಆಗ ಅಂವ ಹೇಳ್ತ್, 'ಸರಿ, ನೀ ನನ್ನೊಟ್ಟಿಗೆ ಇರಿಕನ ಈ ಚಿನ್ನದ ನಗಗ, ಸೀರೆ ಎಲ್ಲಾ ತೆಗ್ದ್ ಗಂಟ್ ಕಟ್ಟಿ ಹಿಡ್ಕ. ಇಲ್ಲರೆ ಜನ ನಂಗೆ ಬೊಡ್ಯೊವೊ. ನಿನ್ನ ಹಾರ್‍ಸಿಕಂಡ್ ಬಂದಳೇಂತ.' ನಿಂಗೆ ಒಂದ್ ಹಳೆ ಸೀರೆ ತಂದ್ ಕೊಟ್ಟನೆ. ಅದರ ಉಟ್ಟ್‌ಕಾಂತ' ಹೇಳ್ತ್. ರಾಜಕುಮಾರಿ ಒಪ್ಪಿತ್. ನೆಳ ಮುತ್ತ ಊರ್‍ಲಿ ಹೋಗಿ ಬೇಡಿದ್ ಒಂದು ಹಳೆ ಸೀರೆ, ರವ್ಕೆ, ಲಂಗ ತಂದ್ ಹೆಣ್ಣ್‌ಗೆ ಕೊಟ್ಟದೆ. ಅದ್ ಅದರ ಮೈಮೇಲೆ ಇದ್ದ

ಚಿನ್ನಾಭರಣಗಳ ತೆಗ್ದ್‌ದ್, ಸೀರೆ, ಕುಪ್ಪಸ, ಎಲ್ಲಾ ತೆಗ್ದ್‌ದ್ ಗಂಟ್ ಕಟ್ಟಿ ಗಂಡನ ಜೋಳಿಗೆಗೆ ಹಾಕಿ, ಅದರ ತನ್ನ ಹೆಗ್ಲ್‌ಗೆ ಕೋಸಿಕಂಡ್ ಅವನ ಹಿಂದೆ ಹೊರ್ಟತ್ ನೆಳಮುತ್ತಂಗೆ ಹೆಣ್ಣ್‌ನ ನೋಡಿ ಪಾಪಾಂತ ಆದೆ. ಅಂವ ಹೇಳ್ದೆ, ‘ಆ ಗಂಟ್ ಇಲ್ಲಿ ತಾ. ನೀ ರಾಜಕುಮಾರಿ. ನಿಂಗೆ ಹೊರಿಕೆ ಆಕಿಲ್ಲೆ. ನಾ ಹಿಡ್ಕಣೆ, ನೀ ಹೆದ್ರ್‌ಬೇಡ. ದೇವ್ರು ಇಸಿದಾಂಗೆ ಆದೆ. ನೀನಾಗಿ ನನ್ನ ಹಕ್ಕಲೆ ನೀ ಬಾಕನ ಮುಟ್ಟ ನಿನ್ನ ನಾ ಮುಟ್ಟುದುಲ್ಲೇಂತ ಹೇಳಿ, ಅದರ ಹಕ್ಕಲೆ ಇದ್ದ ಜೋಳಿಗೆನ ತಕಂಡದೆ. ಅವು ಊರೂರು ತಿರ್ಗುವೆ. ಅಂವ ಊರೊಳಗೆ ಹೋಗಿ ಬೇಡಿ ತಂದದರ ಇಬ್ಬೊರು ತಿಂದ್ ದಿನ ಕಳ್ದವೆ.

ಒಂದ್ ದಿನ ಹೆಣ್ಣ್ ಗಂಡನೊಟ್ಟಿಗೆ ಹೇಳ್ದೆ, ‘ನೀ ಯಾಗೊಳು ಆ ಕೋಟ್‌ನ ಯಾಕೆ ಹಾಕಂಡಿಯಾ? ಅದ್ ನಾರ್‌ದೆ. ಅದರ ಕೊಡು ನಾ ಒಗ್ದ್ ಕೊಟ್ಟನೇಂತ.’ ಅದ್ಕೆ ನೆಳಮುತ್ತ ಹೇಳ್ದೆ, ‘ಬೇಡ ನಂಗೆ ಅದ್ ಮೈಲಿತ್ತ್‌ಲ್ಲರೆ ನಿದ್ದೆ ಬಾದುಲ್ಲೆ. ಅದ್ ಹಾಂಗೇ ಇರ್ಲೀಂತ.’ ಹೆಣ್ಣ್ ಮಾತಾಡುದುಲ್ಲೆ. ಒಂದು ದಿನ ಕತ್ತಲಾಕನ ಗಂಡ ಮೀಯಕೆ ಹೊಳೆ ಬದಿಗೆ ಹೋದೆ. ಆಗ ಹೆಣ್ಣ್ ಯೋಚನೆ ಮಾಡ್ದೆ. ಅಂವ ಮೀಯಕನ ಆ ಕೋಟ್‌ನ ತೆಗ್ದ್‌ದ್ ಹೊಳೆಲಿ ಬುಡೊಮೊ. ಆಗ ಅಂವಂಗೆ ಏನ್ ಮಾಡಿಕೂ ಆದುಲ್ಲೇಂತ ನೆನ್ಸಿದೆ. ನೆಳ ಮುತ್ತ ಮೀವಲ್ಲಿಗ ಹೋದೆ. ನೋಡ್ರೆ ಅಲ್ಲಿ ಅಂವ ಇತ್ತಿಲ್ಲೆ. ಕೋಟ್ ಮಾತ್ರಾ ಪಾರೆ ಮೇಲೆ ಇತ್ತ್. ಬೇರೆ ಯಾರೋ ಮೀಯೊತಿದ್ದೊ. ಹೆಣ್ಣ್‌ಗೆ ಸೋಜಿಗ ಆತ್. ಅದ್ ಮರೆಲಿ ಅಡಿಂಗಿ ಕುದ್ದತ್. ಮೀದಕಂಡ್ ಇದ್ದಂವ ಸುತ್ತು, ಮುತ್ತು ನೋಡಿ ಕೋಟು ಇದ್ದಲ್ಲಿಗೆ ಬಾತ್. ಅಂವ ನೋಡಿದೆ ದೊರೆ ಮಂಜನ ಹಾಂಗೆ ಇತ್ತ್. ಅಂವ ಆ ಕೋಟ್‌ನ ತೆಗ್ದ್ ಮೈ ಮೇಲೆ ಹಾಕಂಡತ್.

ಆಗ ಅಂವನ ರೂಪನೇ ಬದ್ಲಾಯಿಸಿತ್. ಅಂವ ಮುಂದೆನ ನೆಳಮುತ್ತ ಆತ್. ಇದರ ನೋಡಿ ರಾಜಕುಮಾರಿ, ಇದರ್ಲಿ ಏನೋ ಹಿಕ್‌ಮತ್ ಇರೊಕು. ಯಾವುದಕ್ಕೂ ನಾ ಅವಸರ ಮಾಡಿಕೆ ಬೊತ್ತ್‌ಂತ ಏನೂ ಗೊತ್ತಿಲ್ಲದಾಂಗೆ ಕಲ್ಲ್ ಮಂಟಪಕ್ಕೆ ಬಂದ್ ಕುದ್ದದೆ. ಎರ್ಡ್-ಮೂರು ದಿನ ಅಂವ ಮೀವಲ್ಲಿಗೆ ಹೋಗಿ ನೋಡ್ತ್. ಎಲ್ಲಾ ಮುಂದೆನ ಹಾಂಗೆ. ಮೀಂದದ್ ದೊರೆ ಮಂಜ ಬಂದ್ ಹರ್ಕಲ್ ನಾತದ ಕೋಟ್‌ನ ಹಾಕಿದಾಂಗೆ ಅಂವ ನೆಳ ಮುತ್ತ ಆಗ್ತಿತ್ತ್. ಆಗ ಹೆಣ್ಣ್‌ಗೆ ಗೊತ್ತಾತ್. ಇಂವ ಯಾರೋ ಶಾಪಕ್ಕೆ ಸಿಕ್ಕಿದ ರಾಜಕುಮಾರ ಆಗಿರೋಕೂಂತ. ಏನ್ ಮಾಡ್ದೂ ಅಂತ ದಿನಾ ಏಚನೆ ಮಾಡ್ದೆ. ಒಂದು ದಿನ ಆದದ್ ಆಗಲೀಂತ ರಾಜಕುಮಾರಿ ಎದ್ದು ಹೋಗಿ ಆ ಕೋಟ್‌ನ ತೆಗ್ದ್ ನಡು ಹೊಳೆಗೆ ಬೀಸಿ ಬಿಸಾಡ್ದೆ. ಅದರ ಗಂಡ ಮೀಂದ್ ಬಂದ್ ನೋಡ್ದೆ, ಕೋಟ್ ಇಲ್ಲೆ. ಅಂವ ಸುತ್ತ್ ಮುತ್ತ್ ಹುಡ್ಕಿದೆ. ಅಷ್ಟಾಕನ ರಾಜಕುಮಾರಿ ನೆಗಾಡಿಕಂಡ್ ಅವನ ಹಕ್ಕಲೆ ಬಂದ್ ಅವನ ಕೈ ಹಿಡ್ದ್, 'ನಾ ಅದರ ಹೊಳೆಗೆ ಬಿಸಾಡ್ಯಳೇಂತ' ಹೇಳ್ದೆ. 'ಇಷ್ಟ್ ಪೊರ್ಲುನ ರೂಪ ಇದ್ದಕಂಡ್, ನೀ ಯಾಕೆ ಆ ಕೋಟ್‌ನ ಹಾಕಿಕಂಡ್ ಭಿಕ್ಷೆ ಬೇಡಿಯಾಂತ' ಹೆಣ್ಣ್ ಕೇಳ್ದೆ. ಆಗ ಅಂವ ಎರ್ಡೂ ಕೈಯಿಂದ ಹೆಣ್ಣ್‌ನ ಮೋರೆ ಹಿಡ್ಕಂಡ್, 'ಇಂದಿಗೆ ನನ್ನ ಶಾಪ ಕಳ್ತ್‌ಂತ ಹೇಳಿ, ಅಂವನ ಕತೆನ ಹೆಣ್ಣ್‌ಗೆ ಹೇಳ್ದೆ. ಅಂವನೂ ಒಬ್ಬ ರಾಜಕುಮಾರ. ಒಂದ್ ದಿನ ಬೇಟೆ ಆಡಿಕೆ ಹೋಕನ ಕಾಡಿಲಿ ಒಬ್ಬ ರಿಸಿಗೆ ಚೇಷ್ಠೆ ಮಾಡ್ದಕ್ಕೆ ಅಂವ ಶಾಪ ಕೊಟ್ಟದೆ. ಆಗ ರಾಜಕುಮಾರನ ರೂಪ ಬದ್ಲಾದೆ. ಆಗ ಅಂವ ರುಸಿನ ಕಾಲಿಗೆ ಬಿದ್ದ್‌ದ್ ಕ್ಷಮೆ ಕೇಳ್ದೆ. ಅದಕ್ಕೆ ರುಸಿ ಮರುಶಾಪ ಕೊಟ್ಟ್, 'ಇಂದ

ಈ ಕೋಟ್‌ನ ನೀ ಯಾಗೊಳೂ ಹಾಕಂಡೇ ಇರೋಕು. ಮೈಯಿಂದ ತೆಗ್ಯಕೆ ಆಗದ್. ಇರ್‍ಕ್ಯ ಮೀಯಕನ ಮಾತ್ರ ತೆಗ್ಯೊಕು. ಮೀಯಕನ ನಿನ್ನ ರೂಪ ರಾಜಕುಮಾರ ನಂಗೇ ಇದ್ದದೆ. ಈ ಕೋಟ್‌ನ ಹಾಕಿ ಕ್ಷಣಂದ ನಿನ್ನ ರೂಪ ಬದ್ಲಾದೆ. ಇದ್ ಮಾಯಾ ಕೋಟ್. ಇದರ ಒಗ್ಯಕೆ ಬೊತ್ತ್. ಒಗ್ದರೆ ನೀ ಸಾಯಕನ ಮುಟ್ಟಾ ಹಿಂಗೆನೇ ಇರುವ. ನಿನ್ನ ಮುಂದೆನ ರೂಪ ಬಾಕಿಲ್ಲೆ. ಯಾವುದಾದರೊಂದು ಹೆಣ್ಣ್ ನಿನ್ನ ಪ್ರೀತಿಂದ ಮುಟ್ಟಿಕನ ನಿನ್ನ ಶಾಪಕಳ್ದದೇಂತ' ರಿಸಿ ಹೇಳ್ದೆ. ರಾಜಕುಮಾರ ಹೆಣ್ಣ್‌ಗೆ ಹೇಳ್ದೆ. ಈಗ ನೀ ನನ್ನ ಪ್ರೀತಿಂದ ಮುಟ್ಯಳ. ನನ್ನ ಶಾಪ ಕಳ್ದದೇಂತ' ರಾಜಕುಮಾರ ಹೆಣ್ಣ್‌ಗೆ ಹೇಳ್ದೆ. ಈಗ ನೀ ನನ್ನ ಪ್ರೀತಿಂದ ಮುಟ್ಯಳ. ನನ್ನ ಶಾಪ ಕಳ್ತ್. ಬಾ ನಮ್ಮ ರಾಜ್ಯಕ್ಕೆ ಪೋಯಿ. ನಿನ್ನಂಥಾ ಒಳ್ಳೆ ಗುಣದ ಹೆಣ್ಣ್ ಸಿಕ್ಕಿದ್ ನನ್ನ ಪುಣ್ಯಾಂತ ಹೇಳಿ, ಅವಳ ಕರ್‍ಕಂಡ್ ಅಂವನ ರಾಜ್ಯಕ್ಕೆ ಹೋದೆ. ಅಂವನ ಅಪ್ಪ ರಾಜಂಗೆ ಕುಸಿ ಆದೆ. ಮಂಜಂಗೆ ಪಟ್ಟ ಕಟ್ಟಿದೆ. ರಾಜಕುಮಾರಿ ಪಟ್ಟದರಸಿ ಆದೆ. ಅವು ಸುಖಲಿ ಇದ್ದವೆ. ನಾ ಹೋಗಿ ನೋಡಿಕಂಡ್ ಬಂದೆ. ನೀವುನೂ ಹೋಗಿ ನೋಡಿ ಬನ್ನಿ ಅಂತ ಅಜ್ಜಪ್ಪ ಹೇಳ್ದೊ.

*****

ಅಜ್ಜಪ್ಪನ ಕತೆಗಳ ಭಂಡಾರಂದ ಒಂಭತ್ತನೇ ಕತೆ

ಚಿನ್ನದ ವ್ಯಾಪಾರಿನ ಮಕ್ಕಳ ಕತೆ

ಅಂದ್ ಬೊಳ್ಪುಂದಳೇ ಅಜ್ಜಪ್ಪ ಮನೇಲೇ ಇದ್ದೊ. ನಾವುಗೆ ಮಕ್ಕಳಿಗೆ ಕುಸಿ ಆತ್. ಇಂದ್ ಅಜ್ಜಪ್ಪನೊಟ್ಟಿಗೆ ಹೊಸ ಕತೆನ ಹೇಳಿಕೆ ಹೇಳೊಕೂಂತ ಮಾತಾಡಿಕೊಂಡೊ. ಹಿಂಬೊತ್ತ್ ಆಕನ ಅಜ್ಜಪ್ಪ ನಮ್ಮ ಕರ್ದ್ದ್, 'ಬನ್ನಿ ಮಕ್ಕಳೇ ಕತೆ ಹೇಳ್ನೇಂತ' ಹೇಳ್ದೊ. ನಾವು ಕುಸಿಂದ ಅವರ ಹಕ್ಕಲೆ ಹೋಗಿ ಕುದ್ದೊ. ಅಜ್ಜಪ್ಪಾ. ಇಂದ್ ಹೊಸ ಕತೆನ ಹೇಳಿನಿ. ರಾಜಕುಮಾರರ ಕತೆ ಬೇಡಾಂತ ಹೇಳ್ದೊ. ಆತ್ ಇಂದ್ ನೀವ್ಗೆ ಚಿನ್ನದ ವ್ಯಾಪಾರಿನ ಮಕ್ಕಳ ಕತೆ ಹೇಳ್ನೇಂತ ಹೇಳಿ ಕತೆ ಸುರು ಮಾಡ್ದೊ. ಒಂದು ಊರ್ಲಿ ಒಬ್ಬ ವ್ಯಾಪಾರಿ ಇತ್ತ್. ಅಂವ ತುಂಬಾ ಶ್ರೀಮಂತ. ಚಿನ್ನ, ಬೆಳ್ಳಿ, ವ್ಯಾಪಾರ ಮಾಡ್ತಿತ್ತ್.

ಅಂವಂಗೆ ಒಂದು ಪೊರ್ಲುನ ಹೆಣ್ಣ್ ಮತ್ತು ಎರ್ಡ್ ಗಂಡ್ ಮಕ್ಕ ಇದ್ದೊ. ಅವು ಬಾಳ ಸುಕ ಸಂತೋಸಲಿ ಇದ್ದೊ. ಒಂದು ದಿನ ಅಂವನ ಹೆಣ್ಣ್‌ಗೆ ಸೌಕ್ಯ ಇಲ್ಲದೆ. ಕಾಯ್ಲೆಲಿ ಮೊಲ್ಗಿತ್. ಎಷ್ಟ್ ಮೊದ್ದ್ ಮಾಡ್ರೂ ಗುಣ ಆತ್ಲೆ. ಅಕೆರಿಗೆ ಅದ್ ಸತ್ ಹೋತ್. ಸಾವ್ಕಾರ ತಲೆ ಮೇಲೆ ಕೈ ಹೊತ್ತ್ ಕುದ್ದತ್. ಮಕ್ಕಳ ಸಾಂಕುದು ಹೇಗೇಂತ ಅಂವಂಗೆ ಚಿಂತೆ ಸುರು ಆತ್. ಅಂಗ್ಡಿ ನೋಡಿಕಂಡ್ ಮಕ್ಕಳ ಸಾಂಕುದು ತುಂಬಾ ಕಷ್ಟಾಂತ ಗೊತ್ತಾತ್. ಅವನ ಬಂಧು, ಬಳಗ ಎಲ್ಲಾ ಹೇಳ್ದೊ ನೀ ಇನ್ನೊಂದು ಮೊದ್ವೆ ಆಗ್ಂತ. ಮನೆಗೆ ಹೆಣ್ಣ್ ದಿಕ್ಕ್ ಇತ್ಲರೆ ನಿಂಗೆ ಅಂಗ್ಡಿ ನೋಡಿಕೆ ಆಕಿಲ್ಲೇಂತ' ಎರಡ್ನೆ ಹೆಣ್ಣ್ ಮಕ್ಕಳ ಸಾಂಕಿಕಿಲ್ಲೇಂತ ಅಂವಂಗೆ ಭಯ ಆತ್. ಅಕೆರಿಗೆ ಎಲ್ಲೋವು ಕೂಡಿ ಒಂದು ಪಾಪದ ಗೂಡೆನ ಹುಡ್ಕಿ ಅಂವಂಗೆ ಮೊದ್ವೆ ಮಾಡ್ದೊ. ಅಂವನ ಎರಡ್ನೆ ಹೆಣ್ಣ್‌ನೂ ಮಕ್ಕಳ ಪೊರ್ಲುಲಿ ಸಾಂಕಿತ್. ಆಗ ಅಂವಂಗೆ ಸಮಾಧಾನ ಆತ್. ಒಂದು ವರ್ಸ ಆಕನ ಎರಡ್ನೆ ಹೆಣ್ಣ್‌ಗುನೂ ಒಂದ್ ಗಂಡ್ ಕೂಸು ಆತ್. ಅದ್ ಮೂರು ಮಕ್ಕಳ್ನೂ ಒಂದೇ ಸಮಲಿ ನೋಡ್ತಿತ್. ಹೀಂಗೆ ಕಾಲ ಕಳ್ತ್. ಮಕ್ಕ ದೊಡ್ಡೋವು ಆದೊ. ಚಿನ್ನದ ವ್ಯಾಪಾರಿ ಮಕ್ಕಳಿಗೆ ಮೂರು ಜನಕ್ಕೂ ಬೇಕಾದಸ್ಟ್ ಆಸ್ತಿ ಬೊದ್ಕು ಮಾಡ್ತ್. ದೊಡ್ಡ ಮನೆ ಕಟ್ಟಿತ್. ದೊಡ್ಡ ಎರ್ಡ್ ಗಂಡ್ ಮಕ್ಕಳಿಗೆ ಎರ್ಡ್ ಅಂಗ್ಡಿ ಮಾಡಿ ಕೊಟ್ಟ್ ನೋಡಿಕಂಬಕೆ ಹೇಳ್ತ್, ಅವೆಲ್ಲಾ ಒಂದೇ ಮನೆಲಿ ಇದ್ದೊ. ಒಂದು ದಿನ ಗಂಡ, ಹೆಣ್ಣ್ ಇಬ್ಬೊರು ಮಕ್ಕಳ ಕರ್ದ್, 'ನಾವು ತೀರ್ಥ ಯಾತ್ರೆ ಮಾಡಿ ಬಂದವೆ. ನೀವು ಅಂಗ್ಡಿ ಜೋಪಾನ ನೋಡಿಕಣೀಂತ' ಹೇಳ್ದೊ. ಮಕ್ಕ ಒಪ್ಪಿದೊ. ಅವಿಬ್ಬೊರು ತೀರ್ಥಯಾತ್ರೆಗೆ ಹೋದೊ. ಒಂದು ವಾರ ಕಳ್ತ್. ಅಪ್ಪ-ಅವ್ವ

ಯಾಗ ಬಂದವೇಂತ ಮಕ್ಕ ದಾರಿ ನೋಡ್ದೊ. ಅವರೊಟ್ಟಿಗೆ ತೀರ್ಥಯಾತ್ರೆಗೆ ಹೋದ ಬೇರೆ ಜನಂಗೆಲ್ಲಾ ಬಂದೊ. ಅವು ಹೇಳ್ದೊ ನಿಮ್ಮ ಅಪ್ಪ ಅವ್ವ ಗಂಗೆಲಿ ಮೀಯಕನ ನೀರ್‌ಲಿ ಕೊಚ್ಚಿಕಂಡ್ ಹೋದೋಂತ. ಮಕ್ಕ ಗೋಳೋಂತ ಮೊರ್ದೊ. ಮಕ್ಕ ತಬ್ಬೆಲಿಗ ಆದೊ. ಆಗ ಸುರು ಆತ್. ದೊಡ್ಡ ಇಬ್ಬೊರು ಅಣ್ಣಂದರಿಗೆ ತಮ್ಮನ ಮೇಲೆ ಹೊಟ್ಟೆ ಕಿಚ್ಚ್, ತಮ್ಮ ಅಪ್ಪನ ಎರಡ್ನೇ ಹೆಣ್ಣ್‌ನ ಮಗಾಂತ ಮಚ್ಚರ ಸುರಾತ್. ಅವು ಅಂವನ ಹೊಡ್ದ್ ಮನೆಂದ ದೂರ ಮಾಡ್ದೊ. ಕೊಟಗೆಲಿ ಮಲ್ಗಿಕೆ ಹೇಳ್ದೊ. ಪಾಪ, ಅಂವಂಗೆ ಕೆಲ್ಸ ಮಾಡಿ ಗೊತ್ತಿಲ್ಲೆ. ಅಣ್ಣಂದರ್ ಅಂವಂಗೆ ಹೊಟ್ಟೆಗೆ ಕೊಡದೆ ಉಪಾಸ ಹಾಕಿದೊ. ನೀ ದುಡ್ದ್ ತಿನ್ನ್‌ಂತ ಹೇಳ್ದೊ. ತಮ್ಮ ಉಪಾಸಂದ ಸಾಯಕಾತ್. ನಾ ಇನ್ನ್ ಬೊದ್ಕುದು ಯಾಕೇಂತ ಅಂವ ಕಾಡಿಗೆ ಹೋದೆ. ಒಂದು ಮರಕ್ಕೆ ನೇಣ್ ಹಾಕಿ ಸಾಯೊನೋಂತ, ಉಟ್ಟ ಎಲಸ್ತ್ರ ಬಿಚ್ಚಿದ್ ಮರದ ಗೆಲ್ಲಿಗೆ ಒಂದ್ ಕೊಡಿನ ಕಟ್ಟಿದೆ. ಮತ್ತೊಂದು ಕೊಡಿಲಿ ಉರ್ಳ್ ಮಾಡಿ ಕುತ್ತಿಗೆಗೆ ಹಾಕಂಡದೆ. ಆಗ ಅಂವಂಗೆ ಮೊರ್ದಿಕೆ ಬಂದದೆ. ಅಂವ ಮೊರ್ದ್ಕಂಡ್, 'ಅಪ್ಪಾ, ಅವ್ವಾ ನನ್ನನ್ನೂ ನೀವು ನಿಮ್ಮೊಟ್ಟಿಗ ಕರ್ಕಂಡ್ ಹೋಗಿಕಾಗಿತ್ತ್. ಈಗ ನಾ ತಬ್ಬೆಲಿ ಆದೆ. ಹೊಟ್ಟೆಗೆ ಇಲ್ಲದೆ ಸಾಯಕಾದೆ. ನಾನೂ ನಿಮ್ಮೊಟ್ಟಿಗೆ ಬನ್ನೇಂತ' ಹೇಳಿ ಮರದ ಗೆಲ್ಲ್‌ಂದ ಕೆಳಗೆ ಹಾರಿಕೆ ನೋಡಿಕನ, ಅಂವನ ಕಣ್ಣಿಗೆ ಮಿಂಚ್ ಹೊಡ್ದಾಂಗೆ ಆತ್. ಅಂವ ಕಣ್ಣ್ ಮುಚ್ಚಿ, ಕಣ್ಣ್ ತೆಗ್ಯಕನ ಎದ್ರ್‌ಗೆ ಒಂದು ದೇವತೆ ಪ್ರತ್ಯಕ್ಷ ಆತ್. ಇದರ ಕೇಳಿಕನ ನಾವು ಮಕ್ಕ, 'ಅದ್ ಯಾರ್ ಅಜ್ಜಪ್ಪಾಂತ' ಕೇಳ್ದೊ. ಅಜ್ಜಪ್ಪ ಹೇಳ್ದೊ, 'ಅದ್ ಆ ಕಾಡ್‌ನ ದೇವತೆ. ಅದ್ಕೆ ಎರ್ಡ್ ರೆಕ್ಕೆ ಇತ್ತ್ ಬೆಳ್ಳಿನ ಉಡಿಗೆ,

ಚಿನ್ನದ ಕಿರೀಟ ಇತ್ತ್. ತಲೆ ಕೂದೊಲು ಹಿಂದೆ ಪಾದಕ್ಕೆ ಮುಟ್ಟಿತ್ತ್.' ಅಜ್ಜಪ್ಪ ಕತೆ ಮುಂದೊರಿಸಿದೊ.

ಕಾಡ್ನ ದೇವತೆ ಹೇಳ್ದ್, 'ಮಂಜ ನೀ ಯಾಕೆ ಸಾಯಕೆ ಹೊರ್ಟ್ಯಂತ ಕೇಳ್ತ್. ಅದ್ಕೆ ಚಿನ್ನದ ವ್ಯಾಪಾರಿನ ಸಂಣ ಮಂಜ, 'ನನ್ನ ಅಣ್ಣಂದರ್ ಹೊಡ್ದ್‌ದ್ ಮನೆಂದ ಹೊರಗೆ ಹಾಕ್ಯೊಳೊ. ತಿಂಬಕೆ ಗತಿ ಇಲ್ಲೆ. ಎರ್ಡ್ ದಿನಂದ ಉಪಾಸ ಒಳೇಂತ' ಹೇಳ್ತ್. ಅದಕ್ಕೆ ಕಾಡ್‌ನ ದೇವತೆ ಹೇಳ್ತ್, 'ನೀ ಸಾಯ್ಬಡ, ಇಂದಾ ಈ ತಟ್ಟೆನ ತಕ ನಿಂಗೆ ಏನ್ ತಿಂಬಕೆ ಬೇಕೋ ಈ ತಟ್ಟೆನ ಎರ್ಡ್ ಕೈಲಿ ಹಿಡ್ದ್ ತಿಂಬಕೆ ಕೇಳ್. ಅದ್ ಕೊಟ್ಟದೆ. ಆದರೆ ಇದರ ಕಂಕಣೆ ಇಸಿಕೆ ಬೊತ್ತ್. ಇಸಿರೆ ಇದರ ಶಕ್ತಿ ಹೋದೆ. ಯಾಗೊಳೂ ಮಂಕಣೆ ಇಸೊಕೂಂತ ಹೇಳಿ ಒಂದು ತಟ್ಟೆ ಕೊಟ್ಟದೆ. ಹೈದಂಗೆ ಕುಸಿ ಆದೆ. ಅಂವ ಉರ್ರ್ಯುನ ಬಿಚ್ಚಿ ಬಟ್ಟೆನ ಉಟ್ಟ್‌ಕಂಡದೆ. ದೇವತೆ ಕೈಯಿಂದ ಆ ಬಟ್ಲನ ತೆಗ್ದ್‌ಕಂಡದೆ. ಆಗ ದೇವತೆ ಮಾಯ ಆದೆ. ಅಂವಂಗೆ ಹೊಟ್ಟೆ ಇಸಿ ಬೊತ್ತ್. 'ನಂಗೆ ಹುಗ್ಗಿ ಗೈಪು ಕೊಡೂಂತ' ತಟ್ಟೆನ ಎರ್ಡ್ ಕೈಲಿ ಹಿಡ್ದ್ ಕೇಳ್ತ್. ನೋಡಿಕನ ತಟ್ಟೆ ತುಂಬಾ ಅನ್ನ ಗೈಪು ಇತ್ತ್. ಕುಸಿಂದ ಉಂಡತ್. ಆ ತಟ್ಟೆ ತಕಂಡ್ ಮನೆಗೆ ಬಾತ್. ಕೊಟಿಗೆಲಿ ಯಾರಿಗೆ ಕಾಣದಾಂಗೆ ಅಡಿಂಗಿಸಿ ಇಸಿತ್. ದಿನಾ ಅಂವ ಅದರೊಟ್ಟಿಗೆ ಹುಗ್ಗಿ ಗೈಪು ಕೇಳ್ತಿತ್ತ್. ತಿಂದದರನೇ ತಿಂದ್ ಅಂವಂಗೆ ಬೇಜಾರ ಆತ್. ಒಂದಿನ ಅಂವ ಪ್ಯಾಸ, ಪರಮಾನ್ನ ಕೇಳ್ದ. ಅಂವ ಕೇಳ್ದ್ ಎಲ್ಲಾ ಬಟ್ಲ್‌ಲಿ ಸಿಕ್ತಿತ್ತ್. ಅಂವ ಅವಂಗೆ ಬೇಕಾದರ ಬಟ್ಲ್‌ಲಿ ಕೇಳಿಕಂಡ್ ತಿಂಬತಿತ್ತ್. ದಿನಂದ ದಿನಕ್ಕೆ ಅಂವ ಮೈ ಕೈ ತುಂಬಿಕೊಂಡ್ ಪೊರ್ಲು ಪೊರ್ಲು ಆತ್. ಅಣ್ಣಂದರ್ ಇದರ ನೋಡ್ದೊ. ಅವ್ಕೆ ಇಂವ ಹೇಂಗೆ

ಹೊಟ್ಟೆ ತುಂಬಿಸಿಕಂಡದೇಂತ ಗೊತ್ತಾತ್ತೆ. ಅವು ಅಡಿಂಗಿ ಕುದ್ದ್ ಇಂವನ ನೋಡ್ಡೊ. ತಮ್ಮಂಗೆ ಒಂದು ತಟ್ಟೆಂದ ಹೊಟ್ಟೆ ತುಂಬಾ ಊಟ ಸಿಕ್ಕಿದೇಂತ ಗೊತ್ತಾತ್. ಅವು ಒಂದ್ ದಿನ ಆ ತಟ್ಟೆನ ಕದ್ದ್ ಅವರ ಮನೆಗೆ ತಕಂಡ್ ಹೋದೊ. ಅದರ ಕಂಕಣೆ ಮೊಗ್ಗಿ ಇಸಿದೊ. ಆಗ ನಾವು ಮಕ್ಕ ಅಜ್ಜಪ್ಪನ ಕೇಳ್ದೊ, 'ಅಜ್ಜಪ್ಪಾ ಕಂಕಣೆ ಮೊಗ್ಗಿ ಇಸಿರೆ ಅದರ ಶಕ್ತಿ ಹೋದುಲ್ಲೆನೋಂತ'. ಅಜ್ಜಪ್ಪ ಹೇಳ್ದೊ 'ಹೋದೆ. ಆದರೆ ಅಣ್ಣಂದರಿಗೆ ಇದ್ ಹೇಂಗ್ ಗೊತ್ತ್?' ಎಂತ ಹೇಳ್ದೊ. ನಾವು ಅಣ್ಣಂದರಿಗೆ ಹಾಂಗೆ ಆಕೂಂತ ಹೇಳಿಕೊಂಡೊ.

ಅಜ್ಜಪ್ಪ ಕತೆನ ಮುಂದರಿಸಿದೊ. ತಟ್ಟೆನ ಕಾಣದೆ ತಮ್ಮ ಕಂಗಾಲಾತ್. ಎಲ್ಲಾ ಕಡೆ ಹುಡ್ಕಿರೂ ಅಂವಂಗೆ ಸಿಕ್ಕಿತಿಲ್ಲೆ. ಆಗ ಅಂವಂಗೆ ಗೊತ್ತಾತ್. ಇದ್ ಅಣ್ಣಂದರ್‌ದೇ ಕೆಲ್ಸಾಂತ. ಅವೇ ಕದ್ದಿರೊಕೂಂತ. ಅಂವ ಅಣ್ಣಂದರ ಹಕ್ಕಲೆ ಹೋಗಿ ನನ್ನ ತಟ್ಟೆನ ನೀವು ತೆಗ್ದಿದ್ದರೆ ಕೊಡೀಂತ ಕೇಳ್ತ್. ನಾವ್ಗೆ ಯಾವ ತಟ್ಟೆನೂ ಗೊತ್ತಿಲ್ಲೇಂತ ಅವು ಹೇಳ್ದೊ. ತಮ್ಮ ಪುನಃ ಉಪಾಸ ಬೀಳ್ತ್. ಈ ಅಣ್ಣಂದರ ದೆಸೆಂದ ನಂಗೆ ಬೊದ್ಕಿಕೆ ಆಕಿಲ್ಲೇಂತ ಅಂವ ಪುನಃ ಕಾಡಿಗೆ ಹೋತ್. ಅದೇ ಮರಕ್ಕೆ ನೇಣ್ ಹಾಕಿಕೆ ಹೋತ್. ಆಗ ಕಾಡ್‌ನ ದೇವತೆ ಪುನಃ ಪ್ರತ್ಯಕ್ಷ ಆಗಿ 'ನೀ ಯಾಕೆ ಸಾಯಕೆ ಹೊರ್ಟಳಾಂತ' ಕೇಳ್ದೆ. ಆಗ ತಮ್ಮ ಹೇಳ್ದ್, 'ನೀ ಯಾಕೆ ಬಂದೆ, ನೀ ಕೊಟ್ಟ ಬಟ್ಲನ ನಂಗೆ ಉಳ್ಸಿಕಂಬಕ್ಕೆ ಆತಿಲ್ಲೆ. ಅದರ ಅಣ್ಣಂದರ್ ಕದ್ದೊ. ಇನ್ ನಾ ಬೊದ್ಕುದುಲ್ಲೇಂತ.' ಅದಕ್ಕೆ ಕಾಡಿನ ದೇವತೆ ನೆಗಡಿಕಂಡ್, 'ಹುಚ್ಚಾ ನೀ ಯಾಕೆ ಸಾಯೊಕು. ಅಣ್ಣಂದರಿಗೆ ಬುದ್ದಿ ಕಲ್ಸ್. ಇಂದಾ ಈ ಬೊಳ್ಳಿ ಮತ್ತೆ ಕೋಲ್ನ ತಕ. ಕಟ್ಟ್ ಬೊಳ್ಳಿ, ಹೊಡಿ ಕೋಲ್‌ಂತ ಹೇಳ್. ಬೊಳ್ಳಿ ನಿನ್ನ ಅಣ್ಣಂದರ

ಕಟ್ಟಿ ಹಾಕಿದೆ. ಕೋಲು ಸಮಾ ಬೊಡ್ದದೆ. ಆಗ ನಿನ್ನ ಅಣ್ಣಂದರ ಹಕ್ಕಲೆ ನಿನ್ನ ಹಕ್ಕ್‌ನ ಆಸ್ತಿನ ಕೇಳ್. ಕೊಡದಿದ್ದರೆ ಅವರ ಕೋಲ್ ಬಡ್ದದ್ ಕೊಂದ್ ಹಾಕಿದೆ. ಆಗ ಅವು ಉಪಾಯ ಇಲ್ಲದೆ ನಿಂಗೆ ಆಸ್ತಿ ಕೊಟ್ಟವೇಂತ' ಹೇಳ್ತ್. ಸಂಣವ ಪುನಃ ಉರ್ಳುಂದ ತಲೆನ ತೆಗ್ದ್ ಬಟ್ಟೆನ ಸುತ್ತಿಕಂಡ್, ದೇವತೆ ಕೈಯಿಂದ ಬೊಳ್ಳಿ, ಕೋಲ್‌ನ ತಕ್ಕಂಡ್ ಮನೆಗೆ ಬಾತ್.

ಇತ್ತ ಅಣ್ಣಂದರ್ ಕುಸಿಂದ, 'ಇನ್ ನಾವ್ಗೆ ಅಡ್ಗೆ ಮಾಡ್ವ ಕೆಲ್ಸ್ ಇಲ್ಲೆ. ಎಲ್ಲಾ ಈ ಬಟ್ಲ್ ಕೊಟ್ಟದೇಂತ' ಬಟ್ಲ್‌ನ ಎದ್ರಿಗೆ ಇಸಿಕಂಡ್, ದೊರೆ ಮಕ್ಕ ತಿಂಬ ಊಟ ಕೊಡೂಂತ ಬಟ್ಲ್‌ನ ಕೇಳ್ದೊ. ಊಹ್ಞು, ಊಟನು ಇಲ್ಲೆ, ಏನ್ ಇಲ್ಲೆ. ಬಟ್ಲ್ ಖಾಲಿ, ಎಲಾ, ಅಂವ ಕೇಳಿಕನ ಕೊಡ್ತಿತ್ತ್, ಈಗ ಏನಾತ್ ಇದ್ಕೇಂತ ಬಟ್ಲ್‌ನ ತಿರ್ಗಿಸಿ, ತಿರ್ಗಿಸಿ ನೋಡ್ದೊ. ಅಷ್ಟಾಕನ ತಮ್ಮ ಬಾತ್. ಬೊಳ್ಳಿನ ಒಂದು ಕೈಲಿ ಹಿಡ್ಕಂಡ್, ಕೋಲ್‌ನ ಇನ್ನೊಂದು ಕೈಲಿ ಹಿಡ್ಕಂಡ್ ಕಟ್ಟ್ ಬೊಳ್ಳಿ, ಬೊಡಿ ಕೋಲ್‌ಂತ ಹೇಳ್ತ್. ಬೊಳ್ಳಿ ಅವರ ಇಬ್ಬೊರ ಕಟ್ಟಿ ಹಾಕ್ತ್. ಕೋಲ್ ಸಮಾ ಬೊಡ್ತ್. ಅಣ್ಣಂದರ್ ಮುರ್ರ್ಯೊ, ಮುರ್ರ್ಯೋಂತ ಬೊಬ್ಬೆ ಹಾಕಂಡ್ ಕುಣ್ದೊ. ಕತೆನ ಕೇಳಿ ನಾವುಗೆ ಮಕ್ಕಳಿಗೆ ಕುಸಿ ಆತ್. ಅಣ್ಣಂದರಿಗೆ ಹಾಂಗೇ ಆಕು. ಹಾಂಗೇ ಆಕೂಂತ ಹೇಳಿಕೊಂಡೊ. ಅಜ್ಜಪ್ಪ ಸುಮ್ಮನಿರೀಂತ ಬೊಯ್ದೊ. ಅಜ್ಜಪ್ಪ ಕತೆನ ಮುಂದರಿಸಿದೊ. ಅಣ್ಣಂದರ್ ತಮ್ಮನೊಟ್ಟಿಗೆ ನಮ್ಮ ಬುಡ್ಲೂಂತ ಕೈ ಮುಗ್ದೊ. ನಾವು ನಿನ್ನ ತಟ್ಟೆನ ಕದ್ದ್ ತಪ್ಪು ಮಾಡ್ದೋಂತ ತಪ್ಪುನ ಒಪ್ಪಿಕೊಂಡೊ. ಆಗ ತಮ್ಮ ಹೇಳಿದೆ, 'ನಂಗೆ ನನ್ನ ಪಾಲ್ ಕೊಡಿ. ಅಪ್ಪ ಕಟ್ಟಿದ ಮನೆಲಿ ಇರಿಕೆ ಬುಡಿ. ಇಲ್ಲರೆ ಪೆಟ್ಟ್ ತಿಂದ್, ತಿಂದ್ ಸಾಯಿನೀಂತ'

ಅಣ್ಣಂದರ್ ಒಪ್ಪಿದೊ. 'ಮಾತಿಗೆ ತೊಪ್ಪಿಕೆ ಬೊತ್ತ್. ತೊಪ್ಪಿರೆ ನಿಮ್ಮ ನಾ ಸುಮ್ಮನೆ ಬುಡಿಕಿಲ್ಲೇಂತ' ತಮ್ಮ ಹೇಳ್ತ್. 'ಆತ್ ಮಾರಾಯ, ನಿನ್ನ ದಮ್ಮಯ್ಯ, ತಪ್ಪಾತ್ ಒಮ್ಮೆ ಬುಡ್ನೂಂತ ಮೊರ್ರ್ಹೊ. ತಮ್ಮ ಬೊಳ್ಳಿ ಮತ್ತು ಕೋಲಿಗೆ 'ಸಾಕ್ ನಿಲ್ಸೀಂತ' ಹೇಳಿದೆ. ಬೊಳ್ಳಿ ಕಟ್ಟ್ ಬಿಚ್ಚಿತ್, ಕೋಲ್ ಹೊಡ್ಯೋದರ ನಿಲ್ಸಿತ್. ಅಣ್ಣಂದರ್ ಇಂವಂಗೆ ಪಾಲ್ ಕೊಟ್ಟೊ. ಅಪ್ಪ ಕಟ್ಟಿದ ಮನೆಲಿ ಇರಿಕೆ ಬುಟ್ಟೊ. ಆ ಮೇಲೆ ತಮ್ಮ ಸುಕಲಿ ಇತ್ತ್. ಆಗ ನಾವು ಅಜ್ಜಪ್ಪನ ಕೇಳ್ದೊ. ಅಣ್ಣಂದರ್ ತಿರ್‍ಗಿ ಇಂವನ ಹೊರಗೆ ಹಾಕಿರೇಂತ. ಅಜ್ಜಪ್ಪ ಹೇಳ್ದೊ, ಪೆಟ್ಟಿಗೆ ಬೊಗ್ಗದೊವು ಯಾರೂ ಇಲ್ಲೆ. ಅವ್ಕೆ ಪೆಟ್ಟ್ ತಿಂದ್ ಸಾಕಾಗುಟ್ಟು. ಇನ್ನು ಅವು ಹಾಂಗೆ ಮಾಡಿಕಲ್ಲೆ' ನಾನ್ ಹೋಗಿ ನೋಡಿ ಕಂಡ್ ಬಂದೊಳೆ. ನೀವೂ ಹೋಗಿ ನೋಡಿ ಬನ್ನೀಂತ ಅಜ್ಜಪ್ಪ ಕತೆನ ಮುಗ್ಸಿದೊ.

****

"ಅಜ್ಜಪ್ಪನ ಕತೆಗಳ ಭಂಡಾರಂದ ಹತ್ತನೇ ಕತೆ"

ನಾಕ್ ಜನ ರಾಜಕುಮಾರರ ಕತೆ

ಅಂದ್ ಜೋರ್ ಮಳೆ ಬಾತಿತ್ತ್. ಅವ್ವ ಅಟ್ಟಲಿ ಮಡ್ಕೆಲಿ ಹುಣ್ಸೆ ಬೀಜ ಹಾಕಿಟ್ಟಿದ್ದೊ. ನಾವು ಮಕ್ಕ ಅದರ ಹುಡ್ಕಿ ತೆಗ್ದ್ ಅವ್ವನೊಟ್ಟಿಗೆ ಹೊರ್ದ್ ಕೊಡಿಕೆ ಹೇಳ್ದೊ. ನಮ್ಮ ಕಾಟ ತಡ್ಯೆಕಾಗದೆ ಅವ್ವ ಅದರ ಹೊರ್ದ್ ಕೊಟ್ಟೊ. ನಾವು ಅದರ ಜೋಬುಲಿ ತುಂಬಿಸಿಕಂಡ್ ಅಜ್ಜಪ್ಪನ ಹುಡ್ಕಿಕಂಡ್ ಕತೆ ಕೇಳಿಕೆ ಹೊರ್ಟೊ. ಅಜ್ಜಪ್ಪ ನಡ್‌ಕೋಣೆ ಮೂಲೆಲಿ ಕಂಬ್ಳಿ ಒಳಗೆ ನುಗ್ಗಿ ಕಂಡ್, 'ಅಜ್ಜಪ್ಪಾ, ಕತೆ ಹೇಳೀಂತ' ಪೀಡಿಸಿದೊ. 'ಹಗ್ಲ್ ಕತೆ ಹೇಳಿಕೆ ಆಗದ್‌ಂತ ಅಜ್ಜಪ್ಪ ಯಾಗೊಳೂ ಹೇಳ್ವ ಹಾಂಗೆ, ಸೋದರ ಮಾವಂಗೆ ದಾರಿ ಸಿಕ್ಕಿಕಿಲ್ಲೇಂತ' ಹೇಳ್ದೊ. ನಾವು ಸೋದರ

ಮಾಂವಂಗೆ ದಾರಿ ಸಿಕದಿದ್ರೂ ನಾವ್ಗೇನೂ ಆಕಿಲ್ಲೆ. ನೀವು ಕತೆ ಹೇಳೀಂತ ದಮ್ಮಯ್ಯ ಹಾಕಿದೊ. ನಮ್ಮ ಕಾಟ ತಡ್ಯಕಾಗದೆ ಅಜ್ಜಪ್ಪ ಕತೆ ಸುರು ಮಾಡ್ದೊ.

ಒಂದು ಊರಿಲಿ ಒಬ್ಬ ರಾಜ ಇತ್ತ್. ಅಂವಂಗೆ ನಾಕ ಜನ ಗಂಡ್ ಮಕ್ಕ ಇದ್ದೊ. ಅವು ಪ್ರಾಯಕ್ಕೆ ಬಾಕಾಕನ ರಾಜ ಯೋಚನೆ ಮಾಡ್ದೆ. ಇದರ್ಲಿ ಯಾರ್ ಬುದ್ಧಿವಂತನೋ ಅಂವಂಗೆ ನನ್ನ ರಾಜ್ಯದ ಪಟ್ಟಕಟ್ಟೊಕೂಂತ. ಅದಕ್ಕೆ ಅಂವ ಒಂದ್ ದಿನ ನಾಕ್ ರಾಜಕುಮಾರರ ಕರ್ದ್ ಹೇಳ್ದೆ, 'ಮಕ್ಕಳೇ ನೀವು ಈಗ ದೊಡ್ಡೋವರಾಗೊಳಿರಿ. ನಿಮ್ಮಲ್ಲಿ ಯಾರು ಅತೀ ಬುದ್ಧಿವಂತನೋ ಅಂವಂಗೆ ನನ್ನ ರಾಜ್ಯದ ಪಟ್ಟ ಕಟ್ಟಿನೆ. ಉಳ್ದೊವು ಅಂವಂಗೆ ಸಾಯ ಮಾಡಿಕಂಡ್ ಇರಿನಿ. ನಿಮ್ಮ ಬುದ್ಧಿ ಪರೀಕ್ಷೆ ಮಾಡಿಕೆ ಒಂದು ವರ್ಸದ ಗಡುವು ಕೊಟ್ಟನೇಂತ' ಹೇಳ್ದೆ. ಮಕ್ಕ ಕುಸಿಂದ ಕೇಳ್ದೊ. 'ಅಪ್ಪಾ, ನೀವು ಏನ್ ಹೇಳಿರೇನೊ ನಾವು ಹಾಂಗೇ ಮಾಡಿವೆ, ಹೇಳೀಂತ'. ರಾಜ ಹೇಳ್ದೆ. 'ಮಕ್ಕಳೇ, ನೀವು ನಾಕ್ ದಿಕ್ಕ್‌ಲಿ ನಾಕ್ ಕಂಬ ನೆಟ್ಟ್ ಬನ್ನಿಂತ' ರಾಜ ಅವ್ಕೆ ಒಂದೊಂದ್ ಕುದ್ರೆ ಕೊಟ್ಟ್, ಕರ್ಚಿಗೆ ಬೇಕಾದಸ್ಟ್ ಹಣ ಕೊಟ್ಟ್ ಕಳ್ಸಿದೆ. ಮಕ್ಕ ನೆನ್ಸಿದೋ, 'ಓ, ಇದೇನ್ ದೊಡ್ಡ ವಿಷಯ. ನಾವುಗೆ ಇದಕ್ಕೆ ಒಂದು ವರ್ಸ ಯಾಕೆ? ಒಂದು ತಿಂಗಳ್‌ಲಿ ಈ ಕೆಲ್ಸನ ಮಾಡಿ ಮುಗ್ಸಕ್‌ಂತ'. ಆದರೆ ಸಂಣಂವ ಯೋಚಿಸಿದೆ ನಾಕ್ ದಿಕ್‌ಲಿ ನಾಕ್ ಕಂಬ ನೆಡ್ದು ಎಂದರೆ ಏನ್? ಅಪ್ಪ ಹೇಳ್ದರ್ಲಿ ಏನೋ ಮರ್ಮ ಉಟ್ಟು. ಅದ್ ಏನ್‌ಂತ ಯೋಚಿಸಿದೆ.

ಮಕ್ಕ ಅರಮನೆಂದ ಹೊರ್ಟೊ. ನಾಕ್ ದಿನಕ್ಕೆ ಬೇಕಾದ ಬುತ್ತಿ ಕಟ್ಟಿಕಂಡ್ ನೀರ್‌ನ ಹಸ್ಬೆ ಚೀಲಲಿ ತುಂಬಿಸಿ ಕಂಡ್ ಕುದ್ರೆ

ಹತ್ತಿದೊ. 'ಹಸ್ಬೆ ಚೀಲಾಂತ ಹೇಳ್ರೆ ಏನ್ಂತ' ನಾವು ಅಜ್ಜಪ್ಪನ ಕೇಳ್ದೊ. 'ಆಗಿನ ಕಾಲಲಿ ಚರ್ಮದ ಚೀಲಲಿ ನೀರ್‌ನ ತುಂಬುಸ್ತಿದ್ದೋಂತ' ಹೇಳ್ದೊ. 'ಚರ್ಮದ ಚೀಲಲಿ ನೀರ್‌ನ ತುಂಬಿಸಿನ ಅದ್ ನಾತ ಬಾದ್ಲೆನೋಂತ' ಕೇಳ್ದೊ. ಆಗ ಅಜ್ಜಪ್ಪ ಹೇಳ್ದೊ, 'ಅದರ ಪೊರ್ಲು ಬಿಸ್ಲಿಲಿ ಒಣ್ಗಿಸಿ, ಅದರ ಮೈಗೆ ಕಾಡ್ ಸೊಪ್ಪ್‌ನ ರಸ ಪೂಜಿರೆ ನಾತ ಬಾತಿಲ್ಲೇಂತ' ಹೇಳ್ದೊ. ಎಡೆಎಡೆಲಿ ಮಾತಾಡ್ಬೋಡೀಂತ ಅಜ್ಜಪ್ಪ ಹೇಳ್ದೊ. ಕತೆನ ಮುಂದರಿಸಿದೊ. ದಾರಿಲಿ ಹೋಕನ ಅವ್ಕೆ ಒಬ್ಬ ಋಷಿ ಸಿಕ್ಕಿದೆ. ದೊಡ್ಡ ಮಕ್ಕ ಆ ಋಷಿನ ಕ್ಯಾರೇ ಮಾಡದೆ ಮುಂದೆ ಹೋದೋ. ಅಕೆರಿಯಂವ ಕುದ್ರೆಂದ ಇಳ್ದ್ ಋಷಿಗೆ ಕೈ ಮುಗ್ದ್ದ್, ಅಡ್ಡ ಬಿದ್ದದೆ. ಋಷಿ ಅವನ ನೋಡಿ ಅಂವನ ತಲೆ ಮೇಲೆ ಕೈ ಇಸಿದ್ ಆಶೀರ್ವದಿಸಿದೆ. ಸಂಣ ರಾಜಕುಮಾರ ಋಷಿಗೆ ಕೈ ಮುಗ್ದ್ ಹೇಳ್ದೆ, 'ಸೋಮೀ, ನಂಗೆ ಒಂದು ಸಂದೇಹ ಉಟ್ಟು, ನೀವು ಪರಿಹಾರ ಮಾಡೊಕೂಂತ. ಋಷಿ ಹೇಳ್ಂತ ಹೇಳ್ದೆ. 'ಸೋಮೀ, ನನ್ನ ಅಪ್ಪ ಹೇಳ್ಯೊಳೊ, ನಾವು ನಾಕ್ ದಿಕ್ಕ್‌ಲಿ ನಾಕ್ ಕಂಬ ನೆಟ್ಟ್ ಬರೊಕೂಂತ. ಇದರ ಮರ್ಮ ಏನ್ಂತ' ಕೇಳ್ದೆ. ಋಷಿ ನೆಗಾಡಿಕಂಡ್ ಹೇಳ್ದೆ ನಾಕ್ ದಿಕ್ಕ್‌ಲಿ ನಾಕ್ ಕಂಭ ನೆಡ್ದೂಂತ ಹೇಳ್ರೆ, ನಾಕ್ ಜನ ಕಂಭದ ಹಾಂಗೆ ಗಟ್ಟಿ ಇದ್ದ ಸ್ನೇಹಿತರ ಸಂಪಾದಿಸೋಕೂಂತ. ಇದರ ಕೇಳಿ ರಾಜಕುಮಾರಂಗೆ ತುಂಬಾ ಸಂತೋಸ ಆದೆ. ಅಂವ ಋಷಿಗೆ ಅಡ್ಡ ಬಿದ್ದ್, ನನ್ನ ಕೆಲ್ಸಲಿ ನಂಗೆ ಜಯ ಸಿಕ್ಕಲೀಂತ ಆಶೀರ್ವಾದ ಮಾಡೀಂತ' ಕೇಳ್ದೆ. ಋಷಿ ಸಂತೋಸಂದ ಆಶೀರ್ವಾದ ಮಾಡಿ ಕಳ್ಸಿದೆ.

ಅಣ್ಣಂದರ್ ಮುಂದೆ ಹೋದವೆ. 'ನಾವು ಬೇಗ ಬೇಗ

ಹೋಗಿ, ನಾಕ್ ದಿಕ್ಕ್‌ಲಿ ನಾಕ್ ಕಂಭ ನೆಟ್ಟ್‌ದ್ ಬರೊಮೊ. ಸಂಣಂವನ ಕಾದರೆ ಆಕಿಲ್ಲೇಂತ' ಅವು ಮುಂದೆ ಹೋದವೆ. ದೊಡ್ಡಂವ ನಾಕ್ ದಿಕ್ಕ್‌ಲಿ ನಾಕ್ ಮರದ ಕಂಭ ನೆಟ್ಟ್‌ದ್ ಊರಿಗೆ ಬಂದದೆ. ಎರಡನೇಂವ ನಾಕ್ ದಿಕ್ಕ್‌ಲಿ ನಾಕ್ ಕಬ್ಬಿಣದ ಕಂಭನ ನೆಟ್ಟ್‌ದ್ ಊರ್‌ಗೆ ಬಂದದೆ. ಮೂರ್‍ನೇಂವ ನಾಕ್ ದಿಕ್ಕ್‌ಲಿ ನಾಕ್ ಬೆಳ್ಳಿನ ಕಂಭ ನೆಟ್ಟ್‌ದ್ ಊರಿಗೆ ಬಂದದೆ. ಅವೆಲ್ಲಾ ಒಂದು ತಿಂಗಲ್ಲಿ ಊರ್ ಸೇರಿವೆ.

ಅಕೆರಿನ ರಾಜಕುಮಾರ ಸುರುಗೆ ಮೂಡುದಿಕ್ಕಿಗೆ ಪಯಣ ಬೆಳ್ಸಿದೆ. ದಾರಿಲಿ ಹೋಕನ ನೋಡಿದೆ, ದಾರಿ ಬದಿಲಿ ಒಬ್ಬನ ಯಾರೋ ಬೊಡ್ಡ್‌ದ್ ಹಾಕೊಳೊ. ಇಂವ ಕುದ್ರೆಂದ ಇಳ್ದ್‌ದ್ ಅಂವನ ಹಕ್ಕಲೆ ಹೋದೆ. ಬೊಗ್ಗಿದ್ ಅಂವನ ಮೂಂಕಿಗೆ ಕೈ ಬೆರಳ್ ಇಸಿ ನೋಡಿದೆ. ಅಂವ ಸತ್ತತಿಲ್ಲೆ. ಉಸಿರಾಡ್ದೆ. ಸೊಯ ತಪ್ಪಿಟು. ರಾಜಕುಮಾರ ಅಂವನ ಹಕ್ಕಲೆ ಇದ್ದ ನೀರ್‌ಂದ ಅಂವನ ಮೋರೆಗೆ ಚಿಪ್ಪಿಸಿ, ಎದ್ರಿಸಿದೆ. ಅಂವ ಮೆಲ್ಲಗೆ ಕಣ್ಣ್ ಬುಟ್ಟ್ ಇಂವನ ನೋಡ್ದೆ. ಅಂವಂಗೆ ಕುಡ್ಯಕೆ ನೀರ್ ಕೊಟ್ಟದೆ. ಅಂವನ ಎದ್ರಿಸಿ ಬುತ್ತಿ ಬಿಚ್ಚಿ ತಿಂಬಕೆ ಕೊಟ್ಟದೆ. ಆಗ ಅಂವಂಗೆ ಹಂಞ ಧಾತ್ ಬಂದದೆ. ರಾಜಕುಮಾರ ಅಂವನ ಊರು ಕೇರಿ ವಿಚಾರಿಸಿದೆ. ಅಂವ ಆ ದೇಶದ ರಾಜನ ಮಂಙ. ಕಳ್ಳರ್ ಅಂವನ ಕದ್ದ್ ಕಂಡ್ ಬಂದ್ ಅಂವನ ಮೈ ಮೇಲಿದ್ದ ಚಿನ್ನಾಭರಣಗಳ ತಕ್ಕಂಡ್ ಅಂವಂಗೆ ಬೊಡ್ದ್ ದಾರಿಲಿ ಹಾಕಿ ಹೋದೋಂತ ಅಂವ ಹೇಳ್ದೆ. ಇಂವ ಅವನ ಕುದ್ರೆ ಮೇಲೆ ಕುದ್ರಿಸಿಕಂಡ್ ಅಂವನ ರಾಜ್ಯಕ್ಕೆ ಬಂದ್, ಅಂವನ ಅಪ್ಪನ ಹಕ್ಕಲೆ ಬುಟ್ಟದೆ. ಅಪ್ಪ ರಾಜಂಗೆ ತುಂಬಾ ಕುಸಿ ಆದೆ. ಅಂವ ಇವಂಗೆ ಒಂದು ಚೀಲ ತುಂಬಾ ಚಿನ್ನದ

ನಾಣ್ಯಗಳ ಕೊಟ್ಟದೆ. ಆಗ ರಾಜಕುಮಾರ ಹೇಳ್ದೆ, 'ಈಗ ಇದ್ ನಿಮ್ಮ ಹಕ್ಕಲೆ ಇರ್ಲಿ. ನಂಗೆ ಬೇರೆ ಕೆಲ್ಸ ಉಟ್ಟು. ನಾ ಒಂಭತ್ತ್ ತಿಂಗಳ ಕಳ್ದ್‌ದ್ ಬನ್ನೆ. ಆಗ ತಕಂಡ್ ಹೋನೇಂತ'. ರಾಜ ಒಪ್ಪಿದೆ. ಸಂಣ ರಾಜಕುಮಾರ ಕುದ್ರೆ ಹತ್ತಿ ಪಡು ದಿಕ್ಕ್‌ಲಿ ಮುಂದೆ ಹೋದೆ. ಹೋಗಿ ಹೋಗಿ ಒಂದು ಮರದ ಕೆಳಗೆ ಆಯಾಸ ಆಗಿ, ಕುದ್ರೆನ ಮರಕ್ಕೆ ಕಟ್ಟಿ ಹಾಕಿ, ಮರದ ನೆರ್‌ಲಿ ಮೊಲ್ಗಿದೆ. ಅಂವಂಗೆ ಎಚ್ಚರ ಆಕನ ಆ ಮರದ ಮೇಲೆ ಎರ್ಡ್ ಹಕ್ಕಿಗ ಕುದ್ದ್ ಕಂಡ್ ಮಾತಾಡ್‌ದು ಕೇಳ್ದೆ. ಹೆಣ್ಣ್ ಹಕ್ಕಿ ಗಂಡ್ ಹಕ್ಕಿನೊಟ್ಟಿಗೆ ಕೇಳ್ದೆ, 'ಇಂದ್ ಏನ್ ವಿಶೇಷಾಂತ' ಗಂಡ್ ಹಕ್ಕಿ ಹೇಳ್ದೆ, 'ಈ ರಾಜ್ಯದ ರಾಜಂಗೆ ಬೆನ್ನಿಲಿ ಭಾರಿ ದೊಡ್ಡ ಕುರು ಎದ್ದ್, ಸಾಯಕೆ ಆಗುಟ್ಟು. ಅಂವನ ಕಾಯ್ಲೆಗೆ ಯಾರಿಂದಲೂ ಮೊದ್ದ್ ಮಾಡಿಕೆ ಆತಿಲ್ಲೆ. ಈಗ ಅಂವ ಡಂಗುರ ಸಾರ್ಸಿಟ್ಟು. 'ನನ್ನ ಕಾಯ್ಲೆ ಗುಣ ಮಾಡ್ದವುಕೆ ಅರ್ಧರಾಜ್ಯ ಕೊಟ್ಟನೇಂತ'. ಆಗ ಹೆಣ್ಣ್ ಹಕ್ಕಿ ಕೇಳ್ದೆ. 'ಅವನ ಕಾಯ್ಲೆಗೆ ಮೊದ್ದ್ ಇಲ್ಲೆನೋಂತ.' ಗಂಡ್ ಹಕ್ಕಿ ಹೇಳ್ದೆ, 'ಮೊದ್ದ್ ಇಲ್ಲದೆ ಏನ್? ನಾವು ಈಗ ಕುದ್ದ್ ಕಂಡಿರುವ ಈ ಮರದ ಎಲೆಗಳ ಅಕ್ಕಿತೊಳ್ದ ನೀರ್‌ಲಿ ಅರ್ಧ್‌ದ್ ರಾಜನ ಬೆನ್ನ್‌ನ ಕುರಕ್ಕೆ ಪೂಜಿರೆ ಅದರ್ಲಿ ಅಂವ ಗುಣ ಆದೇಂತ' ಹೇಳ್ದೆ. ಅಕೆರಿನ ರಾಜಕುಮಾರಂಗೆ ಹಕ್ಕಿನಗಳ ಭಾಷೆ ಗೊತ್ತಿತ್ತ್. ಇದರ ಕೇಳಿ ಅಂವ ಎದ್ದ್, ಆ ಮರದ ಎಲೆಗಳ ಪೊರ್ಪಿದ್ ಅವನ ಹಕ್ಕಲೆ ಇದ್ದ ಚೀಲಲಿ ತುಂಬಿಸಿ ಕುದ್ರೆ ಹತ್ತಿ ಆ ರಾಜ್ಯಕ್ಕೆ ಹೋದೆ. ಅರಮನೆಗೆ ಹೋಗಿ ನಾ ಮೊದ್ದ್ ಮಾಡ್ನೇಂತ ಹೇಳ್ದೆ. ರಾಜನ ಆಳ್‌ಗ ಅಂವನ ರಾಜನ ಹಕ್ಲಲೆ ಕರಡ್ ಹೋದವೆ. ಅಂವ ಚೀಲಂದ ಸೊಪ್ಪುನ ತೆಗ್ದ್ ಆಳ್‌ಗಳ ಹಕ್ಕಲೆ ಮೊದ್ದ್ ಅರಿವ

ಕಲ್ಲ್‌ನೂ, ಅಕ್ಕಿ ತೊಳ್ದ ನೀರ್ನನೂ ತರ್ಸಿ, ಮೊದ್ದ್‌ನ ಅರ್ದ್‌ದ್ ರಾಜನ ಬೆನ್ನಿಗೆ ಪೂಜಿದೆ. ಹೀಂಗೆ ಎರ್ಡ್-ಮೂರ್ ದಿನ ಮೂಜಿ ಕನ ರಾಜನ ಬೆನ್ನ್‌ನ ಕುರು ಒಡ್ದ್‌ದ್ ರೇಸಿ ಎಲ್ಲಾ ಹೊರಗೆ ಬಂದದೆ. ರೇಸಿನೊಟ್ಟಿಗೆ ಗೂಂಜಿನೂ ಹೊರಗೆ ಬಂದದೆ. ಅದರ ಎಲ್ಲಾ ತೊಳ್ದ್‌ದ್ ತೆಗ್ದ್‌ದ್ ಮತ್ತೂ ಎರ್ಡ್-ಮೂರು ದಿನ ಮೊದ್ದ್‌ನ ಪೂಜಿದೆ. ಒಂದು ವಾರ ಆಕನ ರಾಜ ಎದ್ದ್ ಕುದ್ದದೆ. ಬೆನ್ನ್‌ನ ಕುರು ಗುಣ ಆಗಿ ರಾಜ ಉಸಾರಾದೆ. ರಾಜ ಸಂತೋಸಂದ ಅಂವಂಗೆ ಅರ್ಧರಾಜ್ಯ ಕೊಟ್ಟದೆ. ಆಗ ಸಂಣ ರಾಜಕುಮಾರ ಹೇಳ್ದೆ, 'ನಂಗೆ ಇನ್ನೂ ತುಂಬಾ ಕೆಲ್ಸ ಉಟ್ಟು. ನಾ ಆರ್ ತಿಂಗ ಬುಟ್ಟ್ ಬನ್ನೆ, ಆಗ ರಾಜ್ಯನ ಕೊಡೂಂತ' ಹೇಳ್ದೆ. ರಾಜ ಒಪ್ಪಿದೆ.

ಅಲ್ಲಿಂದ ರಾಜಕುಮಾರ ತೆಂಕ್ ದಿಕ್ಕ್‌ಗೆ ಪಯಣ ಮಾಡ್ದೆ. ಮುಂದೆ ಹೋಕನ ಒಂದು ಕಡೆ ಜನ ಎಲ್ಲಾ ಗುಂಪು ಸೇರ್‌ತ್ಯೋಳೊ. ರಾಜಕುಮಾರ ಕುದ್ರೆಂದ ಇಳ್ದ್‌ದ್, ಆ ಜನರ ಗುಂಪು ಇದ್ದಲ್ಲಿಗೆ ಹೋದೆ. ನೋಡಿಕನ ಅಲ್ಲಿ ಒಂದು ದೊಡ್ಡ ಕೆರೆ ತೆಗ್ದೊಳೊ. ಕೆರೆ ಸುತ್ತು ಜನ ಸೇರ್‌ತ್ಯೋಳೊ. ಕೆರೆಲಿ ನೀರ್ ಸಿಕ್ಕಿತಿಲ್ಲೇಂತ. ಆ ದೇಶದ ರಾಜನ ಸಣ್ಣ ಸೊಸೆ ಬಸ್ರಿ ಹೆಂಗಸ್‌ನ ಆ ಕೆರೆಗೆ ಬಲಿಕೊಡಿಕೇಂತ ಕರ್ದ್‌ಕೊಂಡ್ ಬಂದೊಳೊ. ಆ ರಾಣಿ ಸೊಸೆ ಮುರ್‌ತ್ಯೋಂತ ಮೊರ್ಪ್‌ಕಂಡ್ ಉಟ್ಟು. ಅದರ ಸುತ್ತೊಲು ಇದ್ದ ಬೇರೆ ಹೆಣ್ಣ್‌ಗಳೂ ಮೊರ್ಪ್‌ಕಂಡ್ ಒಳೊ. ಜನ ಎಲ್ಲಾ ಇದರ ನೋಡಿಕಂಡ್ ನಿಂತ್ ಕಂಡೊಳೊ. ಸಂಣ ರಾಜಕುಮಾರ, ಆ ದೇಶದ ರಾಜನ ಹಕ್ಕಲೆ ಹೋಗಿ, 'ನಾ ಒಮ್ಮೆ ಕೆರೆನ ನೋಡಿನೇಂತ ಹೇಳಿ ಕೆರೆಗೆ ಇಳ್ದದೆ. ಆಗ ನಾ ಅಜ್ಜಪ್ಪನ ಕೇಳ್ದೆ, 'ಕೆರೆಗೆ ಹೇಂಗೆ ಇಳ್ದದೆ. ಅದ್ ಗುಂಡಿ ಇಲ್ಲೆನೋ?' 'ಕೆರೆ ತೋಡಿಕನ ಸಣ್ಣ ಸಣ್ಣ ಮೆಟ್ಲ್‌ಗಳ ಮುಡೆಲಿ

ಇಸುವೆ ಅದರ್ಲಿ ಇಳ್ಯಕೆ ಆದೇಂತ' ಅಜ್ಜಪ್ಪ ಹೇಳ್ದೋ.

ಅಜ್ಜಪ್ಪ ಕತೆನ ಮುಂದರ್ಸ್ನವೆ. ರಾಜಕುಮಾರ ಕೆರೆಗೆ ಇಳ್ದ್‌ದ್ ಸುತ್ತಲೂ ನೋಡ್ದೆ. ಅಲ್ಲಿ ಎರ್ಡ್ ಗೋಂಕ್ರ್ ಕಪ್ಪೆಗ ಕುದ್ ಕಂಡ್ ಇದ್ದೊ. ರಾಜಕುಮಾರ ಅಂವನ ಒರೆಂದ ಕತ್ತಿ ತೆಗ್ದ್ ಆ ಗೋಂಕ್ರ್ ಕಪ್ಪೆಗಳ ಕತ್ತಿ ಮುಂಡಲಿ ನೂಂಕಿದೆ. ಆಗ ಕಪ್ಪೆಗ ಹಾರ್ದೊ. ನೋಡಿಕನ ಕಪ್ಪೆ ಕುದ್‌ಕಂಡ್ ಇದ್ದ ಜಾಗೆಂದ ಸೊರೋಂತ ನೀರ್ ರಟ್ಟಿದೆ. ನೀರ್‌ನ ಸೆಲೆ ಬಾವ ಜಾಗೆಲಿ ಈ ಗೋಂಕ್ರ್ ಕಪ್ಪೆಗ ಅಂಡಿಕಂಡ್ ಕುದ್ದ ಕಾರಣ ನೀರ್ ಬಾತಿತ್ತೆ. ಜನಂಗೆಲ್ಲಾ ಇದರ ನೋಡಿ 'ಹೋ'ಂತ ಬೊಬ್ಬೆ ಹೊಡ್ದೊ. ರಾಜಂಗೆ ಖುಷಿ ಆದೆ. ಇಂವನ ಪಟ್ಟದ ಆನೆ ಮೇಲೆ ಕುದ್ರಿಸಿಕಂಡ್ ಅರಮನೆಗೆ ಕರ್ಕಂಡ್ ಹೋದೊ. ಇಂವಂಗೆ ಒಂದು ಚಿನ್ನದ ತಟ್ಟೆ ತುಂಬಾ ಚಿನ್ನದ ನಾಣ್ಯಗಳ ತುಂಬಿಸಿಕೊಟ್ಟ್ ಸಮ್ಮಾನ ಮಾಡ್ವೆ. ಆಗ ಇಂವ ಹೇಳ್ದೆ, 'ಇದೆಲ್ಲಾ ಇಲ್ಲೆ ಇರ್ಲಿ. ನಾ ಮೂರ್ ತಿಂಗ ಕಳ್ದ್ ಬನ್ನೆ. ನಂಗೆ ಇನ್ನೂ ತುಂಬಾ ಕೆಲ್ಸ ಉಟೂಂತ.' ರಾಜ ಒಪ್ಪಿದೆ.

ಅಲ್ಲಿಂದ ಸಂಣ ರಾಜಕುಮಾರ ಬಡ್ಗ್ ದಿಕ್ಕಿಗೆ ಪಯಣ ಮುಂದರ್ಸಿದೆ. ಬಡಗ್ ದಿಕ್ಕ್‌ನ ರಾಜ್ಯಕ್ಕೆ ಬಾಕನ, ಅಲ್ಲಿ ರಾಜನ ಆಳ್‌ಗ ಡಂಗುರ ಹೊಡ್ಕೊಂಡ್ ಬೀದಿಲಿ ಹೋದವೆ. 'ನಮ್ಮ ರಾಜಕುಮಾರಿಗೆ ಹುಚ್ಚು ಹಿಡ್ದುಟ್ಟು. ಅದರ ಯಾರ್ ಬುಡ್ಸುವೆನೋ ಅವುಕೆ ಅರ್ಧರಾಜ್ಯನೂ, ರಾಜಕುಮಾರಿನನೂ ಮೊದುವೆ ಮಾಡಿ ಕೊಟ್ಟವೇಂತ'. ಆಕೆರಿನ ರಾಜಕುಮಾರ ಇದರ ಕೇಳಿ ಅರಮನೆಗೆ ಹೋದೆ. ರಾಜನ ಭೇಟಿ ಮಾಡಿ ರಾಜನಲ್ಲಿ ಹೇಳ್ದೆ, 'ನಂಗೆ ಒಮ್ಮೆ ನಿಮ್ಮ ಮಗಳ ನೋಡೋಕೂಂತ. ರಾಜ ಅಂವನ ಕರ್ಕಂಡ್ ಮಗಳಿದ್ದಲ್ಲಿಗೆ ಹೋದೆ. ರಾಜಕುಮಾರಿ ತಲೆ ಎಲ್ಲಾ ಕೆದ್ರಿಕಂಡ್,

ಆಗಾಗ ನೆಗಾಡಿಕಂಡ್, ಒಮ್ಮೊಮ್ಮೆ ಮರ್ಗ್ಟಕಂಡ್ ರಂಪಾಟ ಮಾಡ್ತಿತ್ತ್. ಅಕೆರಿನ ರಾಜಕುಮಾರ ಹೇಳ್ದೆ, 'ನೀವೆಲ್ಲಾ ಹೊರಗೆ ಹೋಗಿ, ನಾ ಅವಳ ಪರೀಕ್ಷೆ ಮಾಡೊಕೂಂತ.' ಸರೀಂತ ರಾಜ ಎಲ್ಲರ ಹೊರಗೆ ಕಳ್ಸಿದೆ. ರಾಜಕುಮಾರ ಕೋಣೆಗೆ ಬಾಗಿಲ್ ಹಾಕಿ ಅವಳ ಹಕ್ಕಲೆ ಹೋದೆ. ಅದ್ ಇಂವನನೇ ನೋಡ್ದೆ. ರಾಜಕುಮಾರ ಅವಳ ಕಣ್ಣ್‌ಲಿ ಕಣ್ಣ್ ಇಸಿ ನೋಡ್ದೆ. ಆಗ ಅದರ ಕಣ್ಣ್ ಪಳಪಳಾಂತ ಹೊಳ್ತ್. ರಾಜಕುಮಾರಂಗೆ ಗೊತ್ತಾತ್. ಇದಕ್ಕೆ ಹುಚ್ಚ್ ಇಲ್ಲೆ. ಹುಚ್ಚಿನಾಂಗೆ ನಾಟಕ ಮಾಡ್ದೇಂತ. ಅಂವ ಹೇಳ್ದೆ. 'ನಂಗೆ ಗೊತ್ತಾತ್. ನಿಂಗೆ ಹುಚ್ಚ್ ಇಲ್ಲೆ. ನೀ ಹುಚ್ಚ್ ಹಾಂಗೆ ನಾಟಕ ಮಾಡಿಯ. ಯಾಕೆ ಹಿಂಗೆ ಮಾಡಿಯ? ನಾ ನಿಂಗೆ ಸಾಯ ಮಾಡಿನೆ. ನಿನ್ನ ಗುಟ್ಟುನ ಯಾರೊಟ್ಟಿಗೂ ಹೇಳಿಕಿಲ್ಲೇಂತ' ಹೇಳ್ತ್. ರಾಜಕುಮಾರಿಗೆ ಇಂವನ ನೋಡಿಕನ ಇಂವ ಒಳ್ಳೆಯವನಾಂಗೆ ಕಂಡತ್ತ್. ಅದ್ ಹೇಳ್ದ್, 'ನನ್ನ ಮಂತ್ರಿಕುಮಾರಂಗೆ ಮೊದ್ವೆ ಮಾಡಿಕೊಟ್ಟವೇಂತ ಗೊತ್ತಾತ್. ನಂಗೆ ಅಂವನ ಮೊದ್ವೆ ಆಕೆ ಮನ್ಸಿಲ್ಲೆ. ನಾ ಬೇಡಾಂತ ಹೇಳ್ರೆ ಅಪ್ಪ ಒಪ್ಪುದಿಲ್ಲೆ. ಯಾಕೇಂತೇಳ್ರೆ ಮಂತ್ರಿಗಳ ಮೇಲೆ ಅಪ್ಪಂಗೆ ಬಾಳ ವಿಶ್ವಾಸ. ಅದಕ್ಕೆ ನಾ ಹುಚ್ಚ್ ಹಾಂಗೆ ನಟನೆ ಮಾಡ್ದೇಂತ ಹೇಳ್ತ್. 'ಸರಿ, ಹಂಗಾರೆ ಈಗ ನೀ ನಾ ಹೇಳ್ದಂಗೆ ಕೇಳ್. ನೀ ಹುಚ್ಚೀಂತ ಇನ್ನ್ ನಿನ್ನ ಮಂತ್ರಿಕುಮಾರ ಮೊದ್ವೆ ಆಕಿಲ್ಲೆ. ನಿಂಗೆ ಗುಣ ಮಾಡಿರೆ ನೀ ನನ್ನ ಮೊದ್ವೆ ಆಕು. ನನ್ನ ಮೊದ್ವೆ ಆಕೆ ನಿಂಗೆ ಮನ್ಸ್ ಉಟ್ಟೋ ಹೇಳ್. ನಿಂಗೆ ಮನ್ಸ್ ಇದ್ದರೆ ಹೋಗಿ ಮೀಂದ್, ಅಲಂಕಾರ ಮಾಡಿಕಂಡ್ ಬಾ. ನಾ ರಾಜನ ಹಕ್ಕಲೆ ಮಾತಾಡ್ನೇಂತ' ರಾಜಕುಮಾರ ಹೇಳ್ದೆ. ಈ ರಾಜಕುಮಾರನ ಪೊರ್ಲು ನೋಡಿ, ಆಗಲೇ ಇವನ ಮನ್ಸ್‌ಲಿ ಅದ್ ಒಪ್ಪಿತ್ತ್. ಅದ್ ಹೋಗಿ ಮಿಂದ್

ಸಿಂಗಾರ ಮಾಡಿ ಬಾತ್. ರಾಜಕುಮಾರ ಬಾಗಿಲ್ ತೆಗ್ತ್. ರಾಜ ಬಂದ್ ನೋಡಿಕನ ರಾಜಕುಮಾರ, ರಾಜಕುಮಾರಿ ನೆಗಾಡಿಕಂಡ್ ಬಂದ್, ರಾಜನ ಕಾಲಿಗೆ ಅಡ್ಡ ಬಿದ್ದೊ. ರಾಜಂಗೆ ಸಂತೋಷ ಆತ್. 'ನಾ ಒಪ್ಪಿದ ಪ್ರಕಾರ ನನ್ನ ಅರ್ಧ ರಾಜ್ಯನೂ, ನನ್ನ ಮಗಳ ಮೊದ್ವೆ ಮಾಡಿನೂ ಕೊಟ್ಟನೇಂತ' ರಾಜ ಹೇಳ್ದ. ಆಗ ಸಂಣ ರಾಜಕುಮಾರ ಹೇಳ್ದೆ, 'ಈಗ ನಂಗೆ ನನ್ನ ರಾಜ್ಯಕ್ಕೆ ಹೋಕು. ಅಪ್ಪನಲ್ಲಿ ಕೇಳಿ ನೀವುಗೆ ಕಾಗದ ಕಳ್ಸಿನೆ. ಆಗ ನೀವು ಮಗಳ ಕರ್ಕಂಡ್ ಅಲ್ಲಿಗೇ ಬನ್ನಿ. ಮೊದ್ವೆ ಅಲ್ಲೇ ಆನೇಂತ'. ರಾಜ ಒಪ್ಪಿದೆ.

ಅಕೆರಿನ ರಾಜಕುಮಾರ ಒಂದು ವರ್ಷ ಆಕನ ಅವನ ರಾಜ್ಯಕ್ಕೆ ಬಂದದೆ. ಆಗ ಅಪ್ಪ ಕೇಳ್ದೆ, 'ಮಂಜ ನಿನ್ನ ದೊಡ್ಡ ಅಣ್ಣ ನಾಕ್ ದಿಕ್ಕ್‌ಲಿ ನಾಕ್ ಮರದ ಕಂಬಗಳ ನೆಟ್ಟ್‌ದ್ ಬಂದುಟ್ಟು. ಎರಡ್ನೇ ಅಣ್ಣ ನಾಕ್ ದಿಕ್ಕ್‌ಲಿ ನಾಕ್ ಕಬ್ಬಿಣದ ಕಂಬಗಳ ನೆಟ್ಟ್‌ದ್ ಬಂದುಟ್ಟು. ಮೂರ್ನೇ ಅಣ್ಣ ನಾಕ್ ದಿಕ್ಕ್‌ಲಿ ನಾಕ್ ಬೆಳ್ಳಿ ಕಂಬಗಳ ನಿಟ್ಟ್‌ದ್ ಬಂದುಟ್ಟು. ನೀ ಏನ್ ಚಿನ್ನದ ಕಂಬಗಳ ನೆಟ್ಟ್‌ದ್ ಬಂದಳೊನೋಂತ.' ಆಗ ಅಕೆರಿಯಂವ ಹೇಳ್ದೆ, 'ಇಲ್ಲೆ ಅಪ್ಪಾ, ನಾ ಯಾವ ಕಂಬಗಳನೂ ನೆಟ್ಟ್‌ದ್ ಬಾತಿಲ್ಲೆ. ಆದರೆ ಕಂಭದ ಹಾಗೆ ಗಟ್ಟಿ ಇರುವ ನಾಕ್ ದಿಕ್ಕ್‌ನ ನಾಕ್ ದೊರೆಗಳ ಸ್ನೇಹ ಸಂಪಾದನೆ ಮಾಡಿ ಬಂದಳೇಂತ ಹೇಳಿ, ಆ ಒಂದು ವರ್ಸಲಿ ನಡ್ದ ಕತೆನೆಲ್ಲಾ ಹೇಳ್ತ್. ರಾಜಂಗೆ ತುಂಬಾ ಕುಸಿ ಆತ್. ಮಂಜ ಹೇಳ್ದಾಂಗೆ ಮೂಡು, ಪಡು, ತೆಂಕು, ಬಡಗ್ ದಿಕ್ಕ್‌ನ ರಾಜಂದರಿಗೆ ಉಡುಗೊರೆಗಳ ತಕ್ಕಂಡ್ ಬಾಕೆ ಕಾಗ್ದ ಕಳ್ಸಿತ್. ಅವೆಲ್ಲಾ ಬಂದ್ ಸೇರ್ದೊ. ಇಡೀ ಪಟ್ಟಣ ಸಿಂಗಾರ ಆತ್. ಬಡಗ್ ದಿಕ್ಕ್‌ನ ರಾಜನ ಮಗಳೊಂದಿಗೆ ಭಾರಿ ಗೌಜಿಂದ ಅಕೆರಿನ ರಾಜಕುಮಾರಂಗೆ ಮೊದ್ವೆ

ಮಾಡಿದೊ. ಉಳ್ದ ರಾಜರಿಗೂ ಹೆಣ್ಣ್ ಮಕ್ಕ ಇದ್ದೊ. ಅವರ ಅಣ್ಣಂದರಿಗೆ ರಾಜ ಮೊದ್ವೆ ಮಾಡ್ಸಿತ್. ರಾಜನ ಪಟ್ಟ ಬುದ್ದಿವಂತ ಅಕೆರಿನ ರಾಜಕುಮಾರಂಗೆ ಕಟ್ಟಿದೊ. ಎಲ್ಲೋವು ಸುಖ್, ಸಂತೋಷಲಿ ಇದ್ದೊ. ನಾ ಹೋಗಿ ನೋಡಿಕಂಡ್ ಬಂದಳೆ. ನೀವುನೂ ಹೋಗಿ ನೋಡಿ ಬನ್ನೀಂತ ಹೇಳಿ ಅಜ್ಜಪ್ಪ ಕತೆ ಮುಗ್ಸಿದೊ.

******

"ಅಜ್ಜಪ್ಪನ ಕತಾ ಬಂಡಾರಂದ ಹನ್ನೊಂದನೇ ಕತೆ"

ಕೊಂಙೆ ಗೂಡೆಗ

ಅಂದ್ ನಾವು ಸಾಲೆ ಬುಟ್ಟ್ ಬಾಕಾಕನ ಅಜ್ಜಪ್ಪ ಬಾಳ ಕುಸಿಲಿ ಇದ್ದೊ. ನಮ್ಮ ನೋಡ್ದವೇ, ಬನ್ನಿ ಮಕ್ಕಳೇ ಇಂದ್ ನೀವ್ಗೆ ನಾ ಒಂದು ಕುಸಿನ ಕತೆನ ಹೇಳ್ನೆ. ಹೊಸ ಕತೆಂತ ಹೇಳ್ದೊ. ನಾವ್ಗೆ ಬಾಳ ಕುಸಿ ಆತ್. ಓಡಿ ಹೋಗಿ ನೀರೆಡಿಲಿ ಕೈ ಕಾಲ್ ಮೋರೆ ತೊಳ್ದ್, ಅಡ್ಗೆ ಕೋಣೆಗೆ ಬಂದ್ ಕಾಫಿ ಕುಡ್ದ್, ಅವ್ವ ಮಾಡ್ದ ಕಲ್ತಪ್ಪ ತಿಂದ್ ಬೇಗನೆ ಅಜ್ಜಪ್ಪನ ಹಕ್ಕಲೆ ಓಡ್ದೊ. ನಮ್ಮ ನೋಡ್ದವೇ ಅಜ್ಜಪ್ಪ ಕತೆನ ಸುರುಮಾಡ್ದೊ. ನಾವು ಮೂರು ಜನ ಅವರ ಸುತ್ತೊಳು ಕುದ್ದೊ.

ಒಂದ್ ಊರ್‌ಲಿ ಗಂಡ ಹೆಣ್ಣ್ ಇಬ್ಬೊರು ಇದ್ದೊ.

ಅವ್ಕೆ ಮೂರ್ ಜನ ಹೆಣ್ಣ್ ಮಕ್ಕ. ಗೂಡೆಗ ಬಾಳ ಪೊರ್ಲು ಇದ್ದೊ. ಆದರೆ ಮಾತಾಡಿಕಾಕನ ಕೊಂಞೆ ಮಾತಾಡ್ತಿದ್ದೊ. 'ಹಾಳ್' ಎಂತ ಹೇಳಿಕೆ 'ಹಾಲ್' ಎಂತ ಹೇಳ್ತಿದ್ದೊ. 'ಕಾರ' ಎಂದ್ ಹೇಳಿಕೆ 'ಕಾಯ' ಎಂತ ಹೇಳ್ತಿದ್ದೊ. 'ಕಾಡ್' ಎಂತ ಹೇಳಿಕೆ 'ಕಾದ್' ಎಂತ ಹೇಳ್ತಿದ್ದೊ. ಸಣ್ಣವಿರಿಕಾಕನ ಮಕ್ಕಾಂತ ಅಪ್ಪ-ಅವ್ವ ಸುಮ್ಮನಿದ್ದೊ. ಆದರೆ ಈ ಮಕ್ಕ ದೊಡ್ಡದಾದ ಮೇಲೆನೂ ಕೊಂಞೆನೇ ಮಾತಾಡ್ತಿದ್ದೊ. ಅಪ್ಪ-ಅವ್ವಂಗೆ ಬಾಳ ಬೇಜಾರ ಆತ್. ಗೂಡೆಗ ದೊಡ್ಡವಾದೊ ಮೊದ್ವೆ ಮಾಡಿಕೆ ತಯಾರಾದೊ. ಆ ಗಂಡ ಹೆಣ್ಣ್‌ಗೆ ತಿಂಬಕೆ ಉಂಬಕೆ ಏನ್ ಕಮ್ಮಿ ಇತ್ಲೆ. ಹಂಞ ಗದ್ದೆ ಬೇಸಾಯ ಮಾಡ್ತಿದ್ದೊ. ಹಂಞ ತೋಟನೂ ಇತ್ತ್. ಆಸ್ತಿನ ಆಸೆಗೆ ಗೂಡೆಗಳ ಯಾರೂ ಮೊದ್ವೆ ಆಗುವೋಂತ ಅಪ್ಪ-ಅವ್ವ ನೆನ್ಸಿದೊ. ಆದರೆ ಅವರ ಮಾತ್‌ನ ಕೇಳಿಕಾಕನ ಗೊತ್ತಿದ್ದ ಯಾವ ಹೈದಂಗಳೂ ಅವರ ಮೊದ್ವೆ ಆಕೆ ಮುಂದೆ ಬಾತ್ಲೆ. ಅಪ್ಪ-ಅವ್ವಂಗೆ ಬೇಜಾರಲಿ ನಿದ್ದನೇ ಬಾತಿತ್ಲೆ.

ಹೀಂಗಿರಿಕಾನ ಒಂದು ದಿನ ಹೆಣ್ಣ್ ಗಂಡನೊಟ್ಟಿಗೆ ಹೇಳ್ದೆ,

'ನಾಳೆ ಸಂತೆ ಅಲ್ಲನೋ? ಮನೆ ಸಾಮಾನ್ ಎಲ್ಲಾ ಮುಗ್ದುಟ್ಟು. ಸಂತೆಗೆ ಹೋಗಿ ಸಾಮಾನ್ ತನ್ನಿ. ಹಾಂಗೇನೇ ಅಲ್ಲಿ ಯಾರಾದರೂ ಗಂಡ್ ನೋಡಿಕೆ ಹೇಳಿ.'

'ಅಜ್ಜಪ್ಪಾ ಅಲ್ಲಿ ಅವ್ಕೆ ಗಂಡ್‌ಗ ಸಿಕ್ಕುವೆನೋ?' ಎಂತ ತಮ್ಮ ಕೇಳ್ತ್. ಆಗ ಅಜ್ಜಪ್ಪ.

'ನಿಲ್ಲ್, ನಿಂಗೆ ಅಂಬೆರ್ಪು ಏನ್? ಎಂಟ್ ತಿಂಗಳ್‌ಲಿ ಹುಟ್ಟಿದವರಾಂಗೆ ಮಾಡ್ಬಡ' ಎಂತ ಗದ್ರಿಸಿದೊ.

'ಎಂಟ್ ತಿಂಗಳ್‌ಲಿ ಹುಟ್ಟಿದವ್ಕೆ ಅಂಬೆರ್ಪೋ?' ಎಂತ

ನಾ ಅಜ್ಜಪ್ಪನ ಕೇಳ್ದೆ. ಆಗ ಅಜ್ಜಪ್ಪ.

'ಅಲ್ಲನೊ ಮತ್ತೆ? ಒಂಭತ್ತ್ ತಿಂಗ ಆಕೆ ಕಾಯದೆ ಅವ್ವಂಗೆ ಕಷ್ಟ ಕೊಟ್ಟ್, ಅಂಬೆರ್ಪುಲಿ ಎಂಟ್ ತಿಂಗಳ್‌ಲೇ ಹುಟ್ಟಿದೊಕ್ಕೆ ಅಂಬೆರ್ಪು ಹೆಚ್', ಎಂತ ಅಜ್ಜಪ್ಪ ಹೇಳ್ದೊ. ನಾವು ಸುಮ್ಮನಾದೊ. ಅಜ್ಜಪ್ಪ ಕತೆ ಮುಂದರ್ಸಿದೊ.

ಗಂಡ ಹೆಣ್ಣ್‌ಗೆ ಸಮಾಧಾನ ಮಾಡ್ದೆ. 'ನೋಡೋಮೊ ಹೇಂಗೆ ಆದೇಂತ. ಅವರವರ ಹಣೆ ಬರಲಿ ಬರ್‍ದಾಂಗೆ ಆದೆ. ನಾಳೆ ನಾ ಸಂತೆಗೆ ಹೋನೆ' ಎಂತ ಹೇಳ್ತ್.

ಮೊರ್‍ದಿನ ಗಂಡ ಸಾಮಾನ್ ತಾಕೆ ಚೀಲ ತಕಂಡ್ ಸಂತೆಗೆ ಹೋತ್. ಮನೆಗೆ ಬೇಕಾದ ಸಾಮಾನ್ ಎಲ್ಲಾ ತೆಗ್ದದೆ. ಅಷ್ಟಾಕನ ದೂರಂದ ಅವನ ನೋಡಿ ಯಾರೋ,

'ಓ ಹೋಯ್ ಭಾವಾ, ಹೇಂಗೊಳರಿ?' ಎಂತ ದೊಡ್ಡ ದನಿಲಿ ಕರ್‍ಕಂಡ್ ಒಬ್ಬ ದೂರದ ನೆಂಟ ಹಕ್ಕಲೆ ಬಾತ್. ಅಂವನ ನೋಡಿ ಇಂವಂಗೆ ಬಾಳ ಕುಸಿ ಆತ್.

'ನಾ ಸೌಖ್ಯಲಿ ಒಳೆ ಭಾವಾ. ನೀವೇಂಗೊಳರಿ?' ಎಂತ ಕೇಳ್ದೆ . ಅದಕ್ಕಂವ,

'ನಂಗೇನಾಗುಟ್ಟು, ನಾ ಬಾಳ ಕುಸಿಲಿ ಒಳೆ. ಇದೇನ್ ಭಾವ ನಿಮ್ಮ ಅವಸ್ಥೆ. ನೀವು ಬಾಳ ಬೊಚ್ಚಿ ಹೋಗಳರಿ. ಏನಾತ್ ನೀವ್ಗೆ?' ಎಂತ ಅಂವ ಕೇಳ್ದೆ.

ಅದಕ್ಕೆ ಇಂವ, 'ಏನ್‌ಂತ ಹೇಳ್ದು ಭಾವಾ, ನನ್ನ ಹಣೆ ಬರ. ಪೂರ್ವ ಜನ್ಮದ ಕರ್ಮಂದ ನಂಗೆ ಈ ಜನ್ಮಲಿ ಮೂರು ಹೆಣ್ಣ್ ಮಕ್ಕ ಹುಟ್ಟ್ಯೊಳೊ. ಅವರ ಮೊದ್ವೆದೇ ಚಿಂತೆ' ಎಂತ ಹೇಳ್ದೆ. ನೀವೇನ್ ಬಾವಾ ನಿಮ್ಮ ಆಸ್ತಿ ಎಲ್ಲಾ ಅಳ್ಯಂದರಿಗೆ

ಅಲ್ಲನೋ? ಯಾರಾದರ್ ತಕಂಡೋವೊ'. ಎಂತ ಅಂವ ಹೇಳ್ತ್.

ಆಗ ಗಂಡ ಅವರೊಟ್ಟಿಗೆ ಗೂಡೆಗಳಿಗೆ ಮಾತಾಡಿಕನ ಕೊಂಞೆ ಉಟ್ಟುಂತ ಹೇಳ್ದೆ. ಊರ್‌ನ ಗಂಡ್‌ಗ ಯಾರೂ ಮೊದ್ವೆ ಆಕೆ ಮುಂದೆ ಬಾದ್ಲೇಂತ ಹೇಳ್ದೆ. ಆಗ ಇಂವನ ಬಾವನೆಂಟ ಹೇಳ್ದೆ.

'ನೀವೇನ್ ಹೆದ್ರ್ ಬೊಡಿ. ನಾ ನಿಮ್ಮ ಮಕ್ಕಳಿಗೆ ಗಂಡ್ ನೋಡ್ನೆ. ನನ್ನ ಮಂಜನ ಜೋಸ್ತಿ ಒಬ್ಬ ಹೈದ ಉಟ್ಟು. ನಾಳೆನೇ ನನ್ನ ಮಂಜನೊಟ್ಟಿಗೆ ಅಂವನ ಕಳ್ಸಿನೆ. ದೊಡ್ಡ ಗೂಡೆಗೆ ಮೊದ್ವೆ ಆದರೆ ಉಳ್ದವರ ಯಾರೂ ತಕಂಡೋವೊ. ಆದರೆ ಗಂಡ್ ಬಂದ್ ಹೋಕನ ಮುಟ್ಟ ನಿಮ್ಮ ಗೂಡೆಗ ಅವನೆದ್ರ್ ಮಾತಾಡಿಕೆ ಬೊತ್ತ್. ಮೊದ್ವೆ ಒಂದು ಆಗಲಿ. ಮತ್ತೆ ಆಸ್ತಿನ ಆಸೆಗೆ ಗಂಡ್‌ಗ ಸುಮ್ಮನಿರುವೊ' ಎಂತ ಹೇಳ್ತ್.

ಇದರ ಕೇಳಿ ಗೂಡೆಗಳ ಅಪ್ಪಂಗೆ ಬಾಳ ಕುಸಿ ಆತ್. ಅಂವ ಬಾವನೆಂಟನ ಕೈ ಹಿಡ್ಕಂಡ್, 'ನಿಮ್ಮ ಉಪಕಾರನ ನಾ ಸಾಯಕನ ಮುಟ್ಟ ಮರ್ಯೆಕಿಲ್ಲೆ.' ಎಂ ಹೇಳ್ತ್.

ಸಾಮಾನ್ ಹೊತ್ತ್‌ಕಂಡ್ ಮನೆಗೆ ಬಂದ್ ಹೆಣ್ಣ್‌ನೊಟ್ಟಿಗೆ ಹೇಳ್ತ್,

'ಇಂದನೆ, ನಾಳೆ ದೊಡ್ಡ ಗೂಡೆನ ನೋಡಿಕೆ ಗಂಡ ಬಂದದೆ'. ಎಂತ ಹೇಳಿ ನಡ್ದ ಕತೆನೆಲ್ಲಾ ಹೇಳ್ದೆ. ಅದರ ಕೇಳಿ ಹೆಣ್ಣ್‌ಗೆ ಬಾಳ ಕುಸಿ ಆದೆ. ಅದ್ ಗೂಡೆಗಳ ಕರ್ದ್,

'ನಾಳೆ ದೊಡ್ಡಕ್ಕನ ನೋಡಿಕೆ ಗಂಡ್ ಬಂದದೆ. ನೀವು ಮೂರು ಜನ ಬಾಯಿ ಮುಚ್ಚಿಕಂಡ್ ಅವು ಎದ್ದ್ ಹೋಗುವವರೆಗೆ ಇರೊಕು. ಮಾತಾಡ್ರೆ ನಿಮ್ಮ ಚೋಲಿ ತೆಗ್ಯಂವೆ' ಎಂತ ಹೇಳ್ದೆ.

ಗೂಡೆಗ ತಲೆ ಹಂದಾಡ್ಸದೊ.

ಮೊರ್ದಿನ ಬಾವನೆಂಟನ ಮಂಜ ಗಂಡ್‌ನ ಕರ್ಕಂಡ್ ಬಾತ್. ಅವು ಬಂದಾಕನ ಗೂಡೆಗಳ ಅಪ್ಪ ಅವ್ಕೆ ನೀರ್ ಕೊಟ್ಟದೆ. ಅಯ್ಯೆ ಮೊಂದ್ರಿ ಹಾಸಿದೆ. ಹೈದಂಗ ಕೈಕಾಲ್ ತೊಳ್ದ್, ಬೈರಾಸ್‌ಲಿ ಚಂಡಿ ತೆಗ್ದ್ ಮೊಂದ್ರಿಲಿ ಕುದ್ದೊ. ದೊಡ್ಡ ಗೂಡೆ ಒಂದು ಚೊಂಬುಲಿ ನೀರ್ ಎರ್ಡ್ ಗ್ಲಾಸ್‌ಗ, ಒಂದು ತಟ್ಟೆಲಿ ಬೆಲ್ಲದ ತುಂಡುಗ ಇಸಿ ಅದರ ಹೈದಂಗಳ ಮುಂದೆ ಇಸಿತ್. ಗೂಡೆನ ನೋಡಿ ಹೈದಂಗೆ ಬಾಳ ಕುಸಿ ಆತ್. ಹೈದಂಗೆ ಅಪ್ಪ–ಅವ್ವ ಇತ್ಲೆ. ಅಂವ ತಬ್ಬೆಲಿ ಹೈದ. ಮನೆ ಅಳಿಯ ಆಕೆ ಒಪ್ಪಿತ್. ಮೊದ್ವೆ ಖರ್ಚೆಲ್ಲಾ ಗೂಡೆನ ಅಪ್ಪನೇ ಮಾಡೊಕೂಂತ ಬಾವ ನೆಂಟ ಹೇಳ್ದೆ. ಇಂವಂಗೆ ಹೇಂಗಾದರೂ ಗೂಡೆಗೆ ಮೊದ್ವೆ ಆದರೆ ಸಾಕಾಗಿತ್ತ್. ಅಂವ ಒಪ್ಪಿಕಂಡದೆ. ಗಡ್ದ್‌ಲಿ ಮೊದ್ವೆ ಆದೆ.

ಗಂಡಂಗೆ ಬಾಳ ಕುಸಿ ಆದೆ. ಅಂವ ಹೆಣ್ಣ್‌ನೊಟ್ಟಿಗೆ ಹೇಳ್ದೆ, 'ಹೇಂಗೂ ಮೊದ್ವೆ ಆತಲೆ. ಇಂದ್ ಒಂದು ಪುಂಡಿ ಗಡ್ದ್‌ಲಿ ಉಮ್ಮೊನೊ. ಗೂಡ್ಲಿದ್ದ ದೊಡ್ಡ ಹುಂಜನ ಬೊಡ್ದ್ ಹುಳಿ ಮೆಣ್ಸ್‌ಲಿ ಆರ್ಸಿದ ಒಂದು ಕೊಟಕ್ಕನೆ ಗೈಪು ಮಾಡ್. ಪೊಕ್ಕ ರೊಟ್ಟಿನನೂ ಮಾಡ್. ರೊಟ್ಟಿ ತಿಂಬಕೆ ಕೋಳಿನ ಕಾಯಾಮ್ರನೂ ಇರ್ಲಿ'. ಎಂತ ಹೇಳ್ತ್.

ಮೊದ್ವೆ ಆದ ದಿನ ಇರ್ಕ್ ನೆಂಟ್ರೆಲ್ಲಾ ಹೋದೊ. ಮನೆವೇ ಇದ್ದೊ. ಹೆಣ್ಣ್ ಪೊಕ್ಕ ರೊಟ್ಟಿ–ಕೋಳಿಗೈಪು ಮಾಡ್ತ್. ಎಲ್ಲೋವೂ ಸಾಲಾಗಿ ಉಂಬಕೆ ಕುದ್ದೊ. ಬಾಳೆಲೆ ಹಾಕಿದೊ. ನೀರ್ ಬುಟ್ಟೊ. ಎಲೆ ಒರ್ಸಿದ ಮೇಲೆ ಎಲ್ಲರ ಎಲೆ ಮೇಲೆ ನಾಕ್ ನಾಕ್ ರೊಟ್ಟಿ , ಕೋಳಿ ಕಾಯಾಂಬ್ರ, ಹುಳಿ ಮೆಣ್ಸ್‌ಲಿ ಆರ್ಸಿದ ಕೊಟಕ್ಕನೆ ಗೈಪುನ

ಎಜಮಾನ್ತಿ ಗೋಂಜಿ, ಗೋಂಜಿ ಇಕ್ಕಿತ್. ಎಲ್ಲೋವು ಕುಸಿಲಿ ಉಂಡೊ. ಅಷ್ಟ್ ದಿನ ಬಾಯಿ ಮುಚ್ಚಿಕಂಡ್ ಇದ್ದ ಗೂಡೆಗಳಿಗೆ ಸಾಕಾಗಿತ್ತ್. ಸಣ್ಣ ಗೂಡೆ ಬಾವನ ಕೇಳ್ತ್,

'ಕೋಲಿ ಗೈಪು ಕಾಯ ಉಟ್ಟೋ ಬಾವಾ' ಎಂತ. ಆಗ ಮೊದ್‌ಮಂಜ ಅದರ ಮೋರೆ ನೋಡ್ದ. ಆಗ ಎರ್ಡ್ನೇ ಗೂಡೆ ಸಣ್ಣ ಗೂಡೆಗೆ ಕುಟ್ಟಿಕಂಡ್,

'ಅವ್ವ ಹೇಲಿದೇನ್? ನೀ ಮಾದಿದೇನ್? ಎಂತ ಕೇಳ್ದ. ಅದರ ಕೇಳಿ ಮೊದ್‌ಮಂಜ ಪೆರ್ಚಿ ಬದ್ದತ್. ಆಗ ದೊಡ್ಡ ಗೂಡೆ ಮೊದೊಳ್ತಿಗೆ,

'ಯಾಯಿ ಮಾತಾದಿಯುನೂ ನಾ ಮಾತಾದಿಕಿಲ್ಲೆ' ಎಂತ ಹೇಳ್ತ್. ಇದರ ಕೇಳಿ ಮೊದ್‌ಮಂಜ ಸೊರ್‌ಂಕ್ ನೆತ್ತಿಗೆ ಹತ್ತಿ ಕೆಮ್ಮಿಕೆ ಸುರು ಮಾಡ್ತ್. ನಾ ದೊಡ್ಡ ಗುಂಡಿಲಿ ಬಿದ್ದೇಂತ ಆಗ ಅಂವಂಗೆ ಗೊತ್ತಾತ್. ಗೂಡೆಗಳ ಅಪ್ಪ ಅಳಿಯಂಗೆ ನೆತ್ತಿನ ತಟ್ಟಿ ಕುಡ್ಯಕೆ ನೀರ್ ಕೊಟ್ಟತ್. ಆಗ ನಾವು ಕೇಳ್ದೊ, 'ಹಾಂಗಾದರೆ ಅಂವ ಹೆಣ್ಣ್‌ನ ಬುಟ್ಟ್ ಹೋದೊನೋ ಅಜ್ಜಪ್ಪಾ? ಎಂತ. ಆಗ ಅಜ್ಜಪ್ಪ.

'ಅದ್ ಹೇಂಗೆ ಆದೆ. ಈಗ ಅವಂಗೆ ಮೊದ್ವೆ ಆಗುಟ್ಟು, ಮೊದ್ವೆ ಆದ ಮೇಲೆ ಹೆಣ್ಣ್‌ನ ಬುಡಿಕ್ಕೆ ಆದೆನೋ? 'ಪಾಲ್‌ಗೆ ಬಂದದ್ ಪಂಚಾಮೃತ' ಎಂತ ಬಂದದರ್ಲೆ ಸುಖ ಪಡೊಕು. ಅದ್ ಅಲ್ಲದೆ ಅಂವ ತಬ್ಬಲಿ. ಅಂವ ಎಲ್ಲಿಗೆ ಹೋದು? ಅಂವ ಹೆಣ್ಣ್‌ನ ಒಟ್ಟಿಗೆ ಸುಕಲಿ ಇತ್ತ್.' ಎಂತ ಹೇಳ್ದೊ. ಆಗ ನಾವು,

'ಉಳ್ದ ಗೂಡೆಗಳಿಗೆ ಮೊದ್ವೆ ಆದೆನೊ?' ಎಂತ ಕೇಳ್ದೊ.

'ಮೊದ್ವೆ ಆಗದೆ ಏನ್. ಒಂದು ಗೂಡೆಗೆ ಒಂದು ಹೈದನ

ದೇವ್ರು ಹುಟ್ಟಿಕಾಕನನೇ ಸೃಷ್ಠಿ ಮಾಡಿವೆ. ಯಾರಾದರೊಬ್ಬ ಗುರ್ತು ಅರ್ತ ಇಲ್ಲದಂವ ಸಿಕ್ಕುದು. ಯಾರಾದರೊಬ್ಬ ಪರವೂರ್ನ ಹೈದ ನೋಡಿಕೆ ಬಂದ್, ಆ ಗೂಡೆ ಬಾಯ್ಮುಚ್ಚಿಕಂಡಿದ್ದರೆ ಅವ್ಕೆ ಮೊದ್ವೆ ಆದು' ಎಂತ ಹೇಳಿ ಅಜ್ಜಪ್ಪ ಮೀಯಕೆ ಹೋದೊ. ನಾವು ಬಿದ್ದ್ ಬಿದ್ದ್ ನೆಗಾಡಿಕಂಡ್, 'ಕೋಲಿಗೈಪು ಕಾಯ ಉಟ್ಟೊಂತ'. ಎಂತ ಒಬ್ಬ, 'ಅವ್ವ ಹೇಲಿದೇನ್ ನೀ ಮಾಡಿದೇನ್' ಎಂತ ಇನ್ನೊಬ್ಬ, 'ಯಾಯ ಮಾತಾದಿಯಾ ನಾ ಮಾತಾದಿಕಿಲ್ಲೆ' ಎಂತ ಮತ್ತೊಬ್ಬನೂ ಹೇಳಿಕಂಡ್ ಒಂದ ವಾರ ಮುಟ್ಟ, ಕೊಣ್ಯತಿದ್ದೊ.

*****

"ಅಜ್ಜಪ್ಪನ ಕತೆಗಳ ಬಂಡಾರಂದ ಹನ್ನರ್ಡನೇ ಕತೆ."

ಮಿಡ್ಚಂಬಟ್ಟನ ಬಲ್ಮೆ

ಒಂದ್ ಊರ್ಲಿ ಒಂದ್ ಅಜ್ಜಿ ಇತ್ತ್. ಅದ್ಕೆ ಒಬ್ಬ ಪುಳ್ಳಿ ಇತ್ತ್. ಅವನ ಎಲ್ಲೋವೂ ಮಿಡ್ಚಂಬಟ್ಟಂತ ಕರ್‍ಯತಿದ್ದೊ. ಅಜ್ಜಿ ಪುಳ್ಳಿನ ಕೊಂಡಾಟಲಿ ಸಾಕಿದೆ. 'ಅಜ್ಜಿ ಸಾಂಕಿದ ಕೂಸು ಬೊಜ್ಜಕ್ಕೂ ಆಕಿಲ್ಲೇಂತ' ಗಾದೆ ಉಟ್ಟು. ಹಾಂಗಾತ್ ಮಿಡ್ಚಂಬಟ್ಟನ ಕತೆ. ಅಂವ ಪೇಟೆ ತಿರ್‍ಗಿಕಂಡ್ ಉಂಬಕಾಕನ ಮನೆಗೆ ಬಾತಿತ್ತ್. ಏನ್ ಕೆಲ್ಸ ಮಾಡ್‌ತಿತ್ಲೆ. ಇದರ ನೋಡಿ ನೋಡಿ ಅಜ್ಜಿಗೆ ಸಾಕಾತ್. ಒಂದು ದಿನ ಅಜ್ಜಿ ಪುಳ್ಳಿನ ಕರ್‍ದ್,

'ಎಂತಾ ಮಂಜ ನಿನ್ನ ಕತೆ? ನಿನ್ನ ಎಷ್ಟ್ ದಿನಾಂತ ನಾ ಸಾಕುದು? ನಂಗೂ ರಟ್ಟೆ ಬಲ ಕಮ್ಮಿ ಆದೆ. ನೀ ದೊಡ್ಡ ಕೋಣನ

ಹಾಂಗೆ ಬೆಳ್ದಳ. ನಿಂಗೆ ದುಡ್ಯಕೆ ಆದುಲ್ಲೆನೋ? ಹೀಂಗೆ ಕುದ್ದ್ ತಿಂದರೆ ನಾ ಹೇಂಗೆ ನಿನ್ನ ಹೊಟ್ಟೆ ತುಂಬುಸುದು?' ಎಂತ ಹೇಳಿ,

'ಇಂದಾ ನಾನಿಂಗೆ ಹಂಞ ದುಡ್ಡು ಕೊಟ್ಟನೆ. ಇದರ ತಕಂಡೋಗಿ ಏನಾರ ಕೆಲ್ಸ ಕಲ್ತ್‌ಕಂಡ್ ಬಾ.' ಅಂವಂಗೆ ಖರ್ಚಿಗೆ ಹಂಞ ದುಡ್ಡು ಕೊಟ್ಟದೆ.

'ಆತ್ ಉಗ್ಗವ. ನಾ ಪೇಟೆಗೆ ಹೋಗಿ ಏನಾದರ್ ಹೊಟ್ಟೆ ತುಂಬುಸುವ ಕೆಲ್ಸ ಕಲ್ತ್ ಬಂದನೆ' ಎಂತ ಹೇಳಿ ದುಡ್ಡು ತಕಂಡ್ ಪೇಟೆಗೆ ಹೋದೆ. ಅಲ್ಲಿ ಇಂವ ಉಂಡಾಡಿ ಗುಂಡನ ಹಾಂಗೆ ಆ ದುಡ್ಡು ತೀರಿಕನ ಮುಟ್ಟ ಪೇಟೆಲಿ ತಿರ್ಗಿ ತಿಂದ್, ಉಂಡ್ ಗುಂಡು ಗುಂಡು ಆದೆ. ಕೈಲಿದ್ದ ದುಡ್ಡು ಪೂರಾ ಮುಗ್ದಾಕನ ಇನ್ ಏನ್ ಮಾಡ್ದೂಂತ ಹೆದ್ರಿ ಹೆದ್ರಿ ಮನೆಗೆ ಬಂದತ್. ಹಗಲ್ ಇಡೀ ಊರ್‌ನ ಹೊರಗೆ ಇದ್ದ ಅಶ್ವತ್ಥ ಕಟ್ಟೆಲಿ ಗುಡಿಹೊದ್ದ್ ಮೊಲ್ಗಿದೆ. ಇರ್ಳ್ ಆಕನ ಉಟ್ಟ ಮುಂಡುನ ತಲೆಗೆ ಹಾಕಂಡ್, ಮನೆ ಹಕ್ಕಲೆ ಬಂದದೆ. ಒಳಗೆ ಹೋಕೆ ಅಜ್ಜಿ ಬ್ಯೊದದೇಂತ ಹೆದ್ರಿಕೆ ಆದೆ. ಅಂವ ಮನೆ ಹಿಂದೆ ಇದ್ದ ದನದ ಕೊಟಗೆಲಿ ಅಡಿಂಗಿ ಕುದ್ದದೆ. ಹಂಞ ಹೊತ್ತ್ ಆಕನ ಅಂವಂಗೆ ಹೊಟ್ಟೆ ಇಸುದು ತಡ್ಯಕಾತ್ಲೆ. ಮೆಲ್ಲಂಗೆ ಮನೆ ಹಕ್ಕಲೆ ಬಂದದೆ. ಅಜ್ಜಿ ಅಡ್ಗೆ ಕೋಣೆಲಿ ಕೆಲ್ಸ ಮಾಡುವ ಸದ್ದ್ ಕೇಳ್ತಿತ್ತ್. ಅಂವ ಅಡ್ಗೆ ಕೋಣೆ ಕಿಡ್ಕಿ ಹಕ್ಕಲೆ ಹೋಗಿ ಬೊಗ್ಗಿ ನೋಡ್ದೆ. ಅಜ್ಜಿ ಒಲೆ ಮೇಲೆ ಕಾವೆಲಿ ಇಸಿತ್. ಮಡ್ಕೆಂದ ಬಂದ ತೆಗ್ದ್ ದೋಸೆ ಹೊಯ್ಯಕೆ ಸುರು ಮಾಡ್ತ್. ದೋಸೆ ಹೊಯ್ಯುವ ಸದ್ದ್ ಚಂಯಿ, ಚುಂಯಿಂತ ಕೇಳ್ತಿತ್ತ್. ಇಂವ ಒಂದೊಂದು ದೋಸೆ ಹೊಯ್ಯಕಾಕನನೂ ಲೆಕ್ಕ ಮಾಡ್ತ್. ದೋಸೆ ಹೊಯ್ದ್ ಮುಗ್ಯಕಾಕನ ಇಪ್ಪತ್ತ್ ದೋಸೆ ಆತ್. ಅಂವಂಗೆ ಹೊಟ್ಟೆ

ಇಸುದು ತಡ್ಯಕಾಗದೆ, ಆದ ಹಾಂಗೆ ಆಗಲೀಂತ ಎದ್ರ್ ಬಾಕಿಲ್‌ಗೆ ಹೋಗಿ ಬಾಕಿಲ್ ತಟ್ಟಿದೆ. ಅಜ್ಜಿ ಚಿಮಿಣಿ ದೀಪ ಹಿಡ್ಕಂಡ್ ಬಂದ್, 'ಯಾರದ್' ಎಂತ ಕೇಳಿ ಬಾಕಿಲ್ ತೆಗ್ದದೆ. ಎದ್ರ್ ಗುಂಡು ಗುಂಡಾಗಿ ಬೆಳ್ದ ಮಳ್ಳಿ ನಿಂತದರ ನೋಡಿ ಅಜ್ಜಿಗೆ ಬಾಳ ಕುಸಿ ಆದೆ. ಅದ್ ಮಳ್ಳಿನ ಕೈ ಹಿಡ್ದ್,

'ಬಂದನಾ ಮಂಜ. ನಂಗೆ ನಿನ್ನದೇ ಚಿಂತೆ ಆಗ್ತಿತ್ತ್. ಬಾ ಕುದ್ರು' ಎಂತ ಹೇಳಿ ಮೊಂದ್ರಿ ಹಾಸಿದೆ. ಕುಡ್ಯಕೆ ಒಂದು ಚೊಂಬು ನೀರ್ ತಂದ್ ಕೊಟ್ಟದೆ. ಬೆಲ್ಲನೂ ತಂದದೆ. ಅಂವ ನೀರ್ ಕುಡ್ದ್ ಬೆಲ್ಲ ತಿಂದ್ ಸುದಾರ್ಸಿಕಂಡದೆ. ಅಜ್ಜಿ ಕೇಳ್ದೆ,

'ಇಸ್ಟ್ ದಿನ ಎಲ್ಲಿಗೆ ಹೋಗಿದ್ದೆ ಮಗಾ? ಹೊಟ್ಟೆ ಪಾಡ್‌ನ ನೋಡಿಕೊಂಡನೋ? ಹೇಂಗೆ?' ಎಂತ ಕೇಳ್ದೆ.

ಆಗ ಅಂವ, 'ನಾ ಜೋತಿಷ್ಯ ಕಲ್ತಳೆ, ಬಲ್ಮೆ ಹೇಳ್ನೆ' ಎಂತ ಹೇಳ್ತ್, ಅಜ್ಜಿ ಬಾಳ ಕುಸಿಂದ 'ಹೌದಾ' ಎಂತ ಕೇಳ್ತ್. 'ಹೌದು' ಎಂತ ಹೇಳಿ ಕಣ್ಣ್ ಮುಚ್ಚಿ, ಕೈ ಬೆರ್ಳ್‌ನ ಲೆಕ್ಕ ಮಾಡಿ, ಮಣ ಮಣ ಮಂತ್ರ ಹೇಳಿ,

'ಮಿಡ್ಜಂಬಟ್ಟನ ಬಲ್ಮೆ ಹೇಳ್ದೆ. ಚಂಯಿ, ಚುಂಯಿ ದೋಸೆ ಇಪ್ಪತ್ತ್ ದೋಸೆ. ನೋಡು ಇಂದ್ ನೀ ದೋಸೆ ಮಾಡ್ಯಳ. ಅದರ್ಲಿ ಲೆಕ್ಕ ಮಾಡಿ ಇಪ್ಪತ್ತ್ ದೋಸೆ ಉಟ್ಟು.' ಎಂತ ಹೇಳ್ದೆ. ಅಜ್ಜಿಗೆ ಬಾಳ ಕುಸಿ ಆದೆ. ನಾ ದೋಸೆ ಮಾಡ್ದ್ ಇಂವಂಗೆ ಹೇಂಗೆ ಗೊತ್ತಾತ್? ಇಂವ ಜ್ಯೋತಿಷ್ಯ ಕಲ್ತದ್ ನಿಜ' ಎಂತ ಹೇಳಿಕಂಡ್ ಒಳಗೆ ಹೋಗಿ ದೋಸೆನ ಲೆಕ್ಕ ಮಾಡ್ದೆ. ಸರಿಯಾಗಿ ಇಪ್ಪತ್ತ್ ದೋಸೆ ಇತ್ತ್. ಕುಸಿಲಿ ಅಜ್ಜಿ ಆ ದೋಸೆನೆಲ್ಲಾ ಅಂವಂಗೇ ತಿಂಬಕೆ ಕೊಟ್ಟ್, ಅಜ್ಜಿ ಮಧ್ಯಾಹ್ನದ ಗಂಜಿ ತಿಂದ್ ಮೊಲ್ಗಿತ್.

ಮೊರ್ದಿನ ಅಜ್ಜಿ ಊರ್‌ಲೆಲ್ಲಾ 'ನನ್ನ ಪುಳ್ಳಿ ಬಲ್ಮೆ ಹೇಳ್ದೆ. ಜ್ಯೋತಿಷ್ಯ ಕಲ್ತುಟ್ಟು' ಎಂತ ಕುಸಿಲಿ ಹೇಳ್ದೆ. ಅದರ ಕೇಳಿ ಊರೋವ್ವೆ ಕುಸಿ ಆದೆ. ಹಿಂಬೊತ್ತು ಆಕನ ಆ ಊರ್‍ನ ಒಬ್ಬ ರೈತನ ದನ ಕಾಣೆ ಆತ್. ಎಷ್ಟ್ ಹುಡ್ಕಿರೂ ಸಿಕ್ಕಿತಿಲ್ಲೆ. ಅಂವ ಬಂದ್ ಮಿಡ್ಜಂಬಟ್ಟನಲ್ಲಿ ಬಲ್ಮೆ ಕೇಳ್ದೆ. ಆಗ ಇಂವ,

'ಈಗ ಕತ್ತಲಾತ್. ನಾ ಮಧ್ಯಾಹ್ನದ ಮೇಲೆ ಬಲ್ಮೆ ಹೇಳುದಿಲ್ಲೆ. ನಾಳೆ ಬೊಳ್ಪುಗೆ ಬಾ' ಎಂತ ಹೇಳಿ ಅಂವನ ಕಳ್ಸಿದೆ. ಮಿಡ್ಜಂಬಟ್ಟಂಗೆ ಇರ್‍ಳ್ ಇಡೀ ನಿದ್ದೆ ಬಾತ್ಲೆ. ಅಂವ ನಡಿರ್‍ಳ್ ಎದ್ದ್ ದನನ ಹುಡ್ಕಿಕಂಡ್ ಹೋದೆ. ಆಗ ಅಜ್ಜಪ್ಪನ ಕೇಳ್ದೆ.

'ನಡಿರ್‍ಳ್ ಅಂವಂಗೆ ಕತ್ತಲೆಲಿ ಕಣ್ಣ್ ಕಂಡದೆನೋ?' ಎಂತ . ಅದ್ಕೆ ಅಜ್ಜಪ್ಪ,

'ಆಗ ತಿಂಗಳ ಬೊಳ್ಪು ಇತ್ತ್. ಹುಣ್ಣಿಮೆ ಹಕ್ಕಲೆ ಬಾತಿತ್ತ್' ಎಂತ ಹೇಳ್ದೊ.

ಮಿಡ್ಜಂಬಟ್ಟಂಗೆ ದನನ ಹುಡ್ಕಿ ಹುಡ್ಕಿ ಸಾಕಾತ್. ಅಂವ ಬೇಜಾರ್‌ಲಿ ಮನೆಗೆ ಹೊರ್ಡಿಕಾಕನ ಒಂದು ಮರದ ಕೆಳಗೆ ಒಂದು ದನ ಮೊಲ್ಗಿಕಂಡಿತ್ತ್. ಇದೇ ದನ ಆಗಿರೊಕು ಎಂತ ಅಂವ ಆ ದನನ ಅಲ್ಲೆ ಇದ್ದ ಒಂದು ಕಾಯರ ಮರಕ್ಕೆ ಕಟ್ಟಿ ಹಾಕಿತ್.

'ಕಟ್ಟಿ ಹಾಕಿಕೆ ಅಂವನಕ್ಕಲೆ ಬೊಳ್ಳಿ ಇತ್ತೋ?' ತಮ್ಮ ಕೇಳ್ತ್.

'ಕಾಡ್‌ಲಿ ಬೊಳ್ಳಿಗೇನ್ ಬರ. ಒಂದು ಕಾಡ್ ಬೊಳ್ಳಿನ ತುಂಡು ಮಾಡಿ ಕಟ್ಟಿತ್.' ಅಜ್ಜಪ್ಪ ಹೇಳ್ದೊ.

ನಾ ತಮ್ಮಂಗೆ ಸುಮ್ಮನೆ ಕುದ್ರುಂತ ಜೋರ್ ಮಾಡ್ದೆ. ಅಜ್ಜಪ್ಪ ಕತೆ ಮುಂದರ್ಸಿದೊ. ಮಿಡ್ಜಂಬಟ್ಟ ಮನೆಗೆ ಬಂದ್

ಮೊಲ್ಗಿತ್. ಮಾರ್ನೆ ದಿನ ರೈತ ಬಂದ್ ಬಲ್ಮೆ ಕೇಳಿಕೆ ಕುದ್ದತ್. ಮಿಡ್ಚಂಬಟ್ಟ ಮಿಂದ್ ಮಡಿ ಬಟ್ಟೆ ಹಾಕಂಡ್, ಹಣೆಗೆ ನಾಮ ಎಳ್ಕಂಡ್ ತಿಣೆಗೆ ಬಂದ್ ಚಕ್ಕಳ ಬಕ್ಕಳ ಹಾಕಿ ಕುದ್ದತ್. ರೈತ ಅಂವನೆದ್‌ರ್ ಐದೆಲೆ ಒಂದು ಅಡ್ಕೆ, ನಾಕಾಣೆ ದುಡ್ಡುನ ಇಸಿ ಬಲ್ಮೆ ಕೇಳ್ದೆ. ಮಿಡ್ಚಂಬಟ್ಟ ಕಣ್ಣ ಮುಚ್ಚಿ, ಲೆಕ್ಕ ಮಾಡಿ 'ಮಿಡ್ಚಂಬಟ್ಟನ ಬಲ್ಮೆ ಹೇಳ್ದೆ, ಇಲ್ಲಿಂದ ಹತ್ತ್ ಮಾರ್ ದೂರಲಿ ಮೂಡು ದಿಕ್ಕ್‌ಲಿ, ಒಂದು ಕಾಯರ ಮರಕ್ಕೆ ನಿನ್ನ ದನನ ಕಟ್ಟಿ ಹಾಕೊಳೊ. ಹೋಗಿ ಬುಡ್ಸಿಕಂಡ್ ಬಾ' ಎಂತ ಹೇಳ್ದೆ.

ಅದರ ಕೇಳಿ ರೈತಂಗೆ ಕುಸಿ ಆದೆ. ಅಂವ ಇಂವಂಗೆ ಅಡ್ಡಬಿದ್ದ್, ಎದ್ದ್ ದನನ ಹುಡ್ಕಿಕೆ ಹೊರ್ಟದೆ. ಮೂಡ್ ದಿಕ್ಕ್‌ಲಿ ಹತ್ತ್ ಮಾರ್ ಹೋಕಾಕನ ಕಾಯರ ಮರಕ್ಕೆ ಕಟ್ಟಿ ಹಾಕಿದ ದನ ಸಿಕ್ಕಿದೆ. ಮಿಡ್ಚಂಬಟ್ಟನ ಅದೃಷ್ಟ ಒಳ್ಳೆದಿತ್ತ್. ಆ ದನ ರೈತಂದೇ ಆಗಿದ್ದದೆ. ರೈತಂಗೆ ಬಾಳ ಕುಸಿ ಆದೆ. ದನ ಸಿಕ್ಕಿದ ಕುಸಿಲಿ ಅಂವ ಮಿಡ್ಚಂಬಟ್ಟಂಗೆ ಒಂದ್ ದೊಡ್ಡ ಬಾಳೆಗೊನೆ ತಂದ್ ಕೊಟ್ಟದೆ. ಅಜ್ಜಿಗೆ ಮುಳ್ಳಿ ಸಂಪಾದ್ನೆ ಮಾಡಕಾತ್‌ಂತ ಬಾಳ ಕುಸಿ ಆದೆ. ಹೀಂಗೆ ಇಂವ ಚಪ್ಡಿ ಮಾಡಿಕಂಡ್, ಬಾಯಿಗೆ ಬಂದ ಹಾಗೆ ಬಲ್ಮೆ ಹೇಳಿಕಂಡ್, ಜನರ ಮೋಸಂದ ನಂಬಿಸಿದೆ. ಆದರೆ ಅಂವ ಹೇಳ್ದ ಬಲ್ಮೆ ಹೆಚ್ಚಾಗಿ ಸರಿ ಆಗ್ತಿತ್ತ್. ಇಂವನ ದೆಸೆ ಒಳ್ಳೆದುಟ್ಟು. ಜನ ಇಂವನ ದೊಡ್ಡ ಜೋಯಿಸಾಂತ ಹೊಗ್ಳುವೆ. ಇಂವನ ಹೆಸ್ರ್ ಊರ್ಲಿ ಹಬ್ಬದೆ.

ಹೀಂಗಿರಿಕಾಕನ ಆ ವೂರ್‌ನ ರಾಜನ ಹೆಣ್ಣ್ ಮಹಾರಾಣಿನ ಚಂದ್ರಹಾರ ಒಂದು ಕಳವಾತ್. ಆಗ ರಾಜಂಗೂ ಇಂವ ದೊಡ್ಡ ಬಲ್ಮೆ ಹೇಳವಾಂತ ಗೊತ್ತಾತ್. ಇಂವನ ಕರ್ಕಂಡ್

ಬಾಕೆ ಸೈನಿಕರ ಕಳ್ಸಿದೆ. ಇಂವ ಹೆದ್ರಿ ಅಡಂಗಿದೆ. ಸೈನಕರ್ ಇಂವನ ಹುಡ್ಕಿ ಹಿಡ್ದ್ ರಾಜನಲ್ಲಿಗೆ ಎಳ್ಕಂಡ್ ಹೋದವೆ. ಆಗ ದೊರೆ ಇಂವನೊಟ್ಟಿಗೆ ಬಲ್ಮೆ ಕೇಳ್ದೆ.

'ನಾ ಮಧ್ಯಾಹ್ನದ ಮೇಲೆ ಬಲ್ಮೆ ಹೇಳ್‌ದುಲ್ಲೆ. ನಾಳೆ ಬೊಳ್ಪುಗೆ ಹೇಳ್ನೆ' ಎಂತ ಮಿಡ್ಚಂಬಟ್ಟ ಹೇಳ್ದೆ. ಇಂವ ತೊಪ್ಪಿಸಿಕಂಡ್ ಹೋದೂಂತ ಇಂವನ ಒಂದು ಕೋಣೆಲಿ ಕೂಡಿ ಹಾಕಿವೆ. ಅಲ್ಲಿ ಇವಂಗೆ ಇರ್ಳ್ ಇಡೀ ನಿದ್ದೆ ಬಾದುಲ್ಲೆ.

ಮಿಡ್ಚಂಬಟ್ಟ ದೊಡ್ಡ ಬಲ್ಮೆ ಹೇಳವಾಂತ ತಿಳ್ದ್‌ದ್ ದೊರೆನ ಚಂದ್ರಹಾರ ಕದ್ದೊವು ಹೆದ್ರಿದ್, ಅಂವ ಮೊಲ್ಗಿದ ಕೋಣೆ ಹಕ್ಕಲೆ ಬಂದ್ ಬಾಕಿಲ್‌ಗೆ ಕೆಬಿಕೊಟ್ಟ್ ಕೇಳಿವೆ. ನಿದ್ದೆ ಬಾರದೆ ಹೊರ್ಳ್‌ತಿದ್ದ ಮಿಡ್ಚಂಬಟ್ಟ, ನಾ ಸುಳ್ಳ್ ಹೇಳ್ರೆ ರಾಜ ನನ್ನ ಕಣ್ಣ್‌ನ ತೆಗ್ಯೊದು, ಇಲ್ಲರೆ ಕಾಲ್‌ನ ಕತ್ರುಸುದು, ಅದೂ ಇಲ್ಲರೆ ನನ್ನ ಪ್ರಾಣಕ್ಕೆ ಕುತ್ತು ಬಾದೂಂತ ಹೆದ್ರಿದ್,

'ಕಣ್ಣ್‌ಗೆ ಬಾತ್, ಕಾಲಿಗೆ ಬಾತ್, ಮಿಡ್ಚಂಬಟ್ಟನ ಪ್ರಾಣಕೆ ಬಾತ್' ಎಂತ ಗಟ್ಟಿಲಿ ಹೇಳಿ ಕಂಡ್ ಮೊರ್ಡಿಕೆ ಸುರು ಮಾಡ್ದೆ. ಬಾಕಿಲ್‌ನ ಹೊರಗೆ ನಿತ್ತ ಕಣ್ಣಪ್ಪ ಮತ್ತೆ ಕಾಳಪ್ಪ–ಎಂತ ಹೇಳ್ವ ಈ ಇಬ್ಬೊರು ಕಳ್ಳರ್ ಮಿಡ್ಚಂಬಟ್ಟನ ಬಾಯಿಂದ ಈ ಹೆಸ್ರ್ ಬಾಕನ ಹೆದ್ರಿಕೊಂಡೊ. ಅವಿಬ್ಬೊರು ಓಡಿ ಹೋಗಿ ಅಂವನ ಕಾಲಿಗೆ ಬಿದ್ದ್,

'ನಮ್ಮ ಪ್ರಾಣ ನೀವೇ ಉಳ್ಸೊಕು ' ಎಂತ ಹೇಳ್ದೊ. ಸುರುಗೆ ಮಿಡ್ಚಂಬಟ್ಟಂಗೆ ಎಂತದ್‌ಂತ ಅರ್ಥ ಆತ್ಲೆ. ಅವಿಬ್ಬೊರು ಕಳ್ಳರ್,

'ನಾವು ಚಂದ್ರ ಹಾರನ ಕದ್ದೊವು. ನಮ್ಮ ಪ್ರಾಣನ

ಉಳ್ಕೊಸಕೂ' ಎಂತ ಹೇಳ್ದೊ. ಆಗ ಮಿಡ್ಜಂಬಟ್ಟಂಗೆ ದೇವ್ರೇ ನನ್ನ ಕಾಪಾಡ್ತ್‌ಂತ ದೇವ್ರಿಗೆ ಕೈ ಮುಗ್ದ್,

'ನೀವು ಹೆದ್ರ್‌ಬೊಡಿ. ನಂಗೆ ಇದ್ ಮುಂದೆನೇ ಗೊತ್ತಿತ್ತ್. ನೀವು ತೊಪ್ಪು ಒಪ್ಪಿಕಂಡದ್ ಒಳ್ಳೆದಾತ್. ಇಲ್ಲರೆ ನಾಳೆ ನೀವ್ಗೆ ಗಲ್ಲ್ ಶಿಕ್ಷೆ ಆತಿತ್ತ್' ಎಂತ ಹೇಳ್ದೆ. ಅದಕ್ಕವು ಈಗ ನಾವು ಏನ್ ಮಾಡೊಕೂಂತ ಕೇಳ್ದೊ. ಆಗ ಮಿಡ್ಜಂಬಟ್ಟ,

'ನೀವು ಆ ಚಂದ್ರಹಾರನ ಒಂದು ಕೆಂಪು ಎಲಸ್ತ್ರಲಿ ಸುತ್ತಿ ರಾಜನ ಅಡ್ಗೆ ಕೋಣೆನ ಹಿಂದೆನ ಬೂದಿ ಹೊಂಡಲಿ ಗುಂಡಿ ತೆಗ್ದ್ ಇಸಿನಿ. ಮುಂದೆ ಬಂದದರ ನಾ ನೋಡಿಕಣೆ' ಎಂತ ಹೇಳ್ದೆ. ಅವಿಬ್ರೊರು ಭಾರೀ ಕುಸಿಂದ ಅಂವಂಗೆ ಮತ್ತೆ ಮತ್ತೆ ಅಡ್ಡಬಿದ್ದ್, ಅಲ್ಲಿಂದ ಹೋಗಿ ಅಂವ ಹೇಳ್ದಾಂಗೆ ಮಾಡ್ದೊ.

ಮೊರ್ದಿನ ಚಿಮಿಚಿಮಿ ಬೊಳ್ಪುಗೆ ಮಿಡ್ಜಂಬಟ್ಟ ಎದ್ದ್, ತಣ್ಣೀರ್‌ಲಿ ಮಿಂದ್, ಹಣೆಗೆ ನಾಮ ಹಾಕಿ ಗಂಧದ ಬೊಟ್ಟು ಇಸಿ, ಹೊರ್ಟತ್. ರಾಜನ ಸೈನಿಕರ್ ಅಂವನ ರಾಜನ ಹಕ್ಕಲೆ ಕರ್‌ಕೊಂಡು ಹೋದೊ. ಅಂವ ರಾಜನ ಎದ್ರ್ ಅಟ್ಟೆಕಾಲ್ ಹಾಕಿ ಕುದ್ದ್, ಕಣ್ಣ್ ಮುಚ್ಚಿ, ಬೆರ್‍ಳ್ ಲೆಕ್ಕ ಮಾಡಿ, ಮಣ ಮಣ ಮೊಂತ್ರ ಹೇಳಿ,

'ಮಿಡ್ಜಂಬಟ್ಟನ ಬಲ್ಮೆ ಹೇಳ್ದೆ, ರಾಜನ ಅಡ್ಗೆ ಕೋಣೆನ ಹಿಂದೆನ ಬೂದಿ ಹೊಂಡಲಿ, ಕೆಂಪು ಎಲಸ್ತ್ರಲಿ ಸುತ್ತಿದ ಚಂದ್ರಹಾರ ಸಿಕ್ಕಿದೆ' ಎಂತ ಹೇಳ್ದೆ.

ರಾಜ ಸೈನಿಕರೊಟ್ಟಿಗೆ ಅಡ್ಗೆ ಮನೆ ಹಿಂದೆನ ಬೂದಿ ಹೊಂಡದ ಹಕ್ಕಲೆ ಹೋಗಿ, ಅದರ ಎಳ್ಳಿಸಿದೆ. ನಾಕ್ ಕೊಟ್ಟ್ ಎಳ್ಳಿಕಾಕನ ಕೆಂಪು ಎಲಸ್ತ್ರಲಿ ಸುತ್ತಿದ ಗಂಟ್ ಸಿಕ್ಕಿದೆ. ಸೈನಿಕರ್

ಅದರ ತೆಗ್ದ್ ರಾಜನ ಕೈಲಿ ಕೊಟ್ಟವೆ. ರಾಜ ಅದರ ಬುಡ್ಸಿ ನೋಡಿಕಾಕನ ಪಳ ಪಳ ಹೊಳ್ಯವ ಚಂದ್ರಹಾರ ಇದ್ದದೆ. ರಾಜಂಗೆ ಬಾಳ ಸಂತೋಷ ಆದೆ. ಮಿಡ್ಚಂಬಟ್ಟಂಗೆ ಕೈ ಚೀಲ ತುಂಬಾ ದುಡ್ಡು ಕೊಟ್ಟದೆ.ಇನ್ನ ಈ ಊರ್‌ಲಿ ಇದ್ದರೆ ನನ್ನ ಪ್ರಾಣಕ್ಕೆ ಸಂಚಕಾರಾಂತ ಮಿಡ್ಚಂಬಟ್ಟ ಅಜ್ಜಿನ ಕರ್ಕಂಡ್ ದೂರ ದೇಶಕ್ಕೆ ಹೋಗಿ ದೊರೆ ಕೊಟ್ಟ ದುಡ್ಡುಲಿ, ಮೊದ್ವೆ ಗಿದ್ವೆ ಮಾಡಿಕಂಡ್, ಮಕ್ಕಗಿಕ್ಕ ಆಗಿ ಸುಖಲಿ ಇದ್ದದೆ. 'ನಾ ಹೋಗಿ ನೋಡಿಕಂಡ್ ಬಂದಳೆ. ನೀವುನೂ ಹೋಗಿ ನೋಡಿ ಬನ್ನಿ' ಎಂತ ಹೇಳಿ ಅಜ್ಜಪ್ಪ ಕತೆನ ಮುಗ್ಸುವೆ. ನಾವು ಕುಸಿಂದ ಮೀಯಕೆ ಓಡ್ದೊ.

******

"ಅಜ್ಜಪ್ಪನ ಕತೆಗಳ ಭಂಡಾರಂದ ಹದಿಮೂರನೆ ಕತೆ"

ಕಿನ್ನರ ರಾಜಕುಮಾರಿಗಳ ಕತೆ

ಕಿನ್ನರ ಲೋಕಲಿ ಒಬ್ಬ ಕಿನ್ನರ ರಾಜ ಇತ್ತ್. ಅಂವಂಗೆ ಏಳ್ ಜನ ರಾಜಕುಮಾರಿಗ ಇದ್ದೊ. ಅವು ಪ್ರತಿ ಹುಣ್ಣಿಮೆ ದಿನ ತಿಂಗಳ ಬೊಳ್ಪುಗೆ ಭೂಮಿಗೆ ಬಂದ್, ಅಲ್ಲಿ ಒಂದು ಕೆರೆ ನೀರ್‌ಲಿ ಸೊಕ್ಕಿಕಂಡ್ ಆಟ ಆಡ್ತಿದ್ದೊ. ಬೊಳ್ಪಾಕನ ಕಿನ್ನರ ಲೋಕಕ್ಕೆ ಹೋಗ್ತಿದ್ದೊ.

ಒಂದು ಹುಣ್ಣಿಮೆ ದಿನ ಕಿನ್ನರ ಗೂಡೆಗ ತಿಂಗಳ ಬೊಳ್ಪುಗೆ ಕೆರೆ ಹಕ್ಕಲೆ ಬಾಕಾಕನ, ಅಲ್ಲಿ ಒಬ್ಬ ಸನ್ನೇಸಿ ಕುದ್ದ್‌ಕಂಡ್ ಜಪ ಮಾಡ್ತಿತ್ತ್. ಸನ್ನೇಸಿನ ಎದ್ರ್ ಹೇಂಗೆ ಮೀಯೋದೂಂತ ಅವ್ಕೆ ಯೋಚನೆ ಆತ್. ಅದರ್ಲಿ ಸಣ್ಣ ಗೂಡೆಗೆ ಬೆಳ್ಚೆಲ್ ಹೆಚ್ಚ್. ಅದ್ ಅಲ್ಲೇ ಬಿದ್ದ್‌ಕಂಡಿದ್ದ ಸತ್ತ ಕಪ್ಪೆನ ತೆಗ್ದ್‌ದ್ ಸನ್ನೇಸಿ ತಲೆ ಮೇಲೆ

ಹಾಕಿದೆ. ಸನ್ನೇಸಿ ಸಿಟ್ಟ್‌ಂದ ಕಣ್ಣ್ ಬುಟ್ಟತ್. ಎದ್ರ್‌ಗೆ ಏಳ್ ಜನ ಗೂಡೆಗಳ ನೋಡ್ತ್. ಅವರ ನೋಡಿ ಸನ್ನೇಸಿ,

'ನೀವು ಕಪ್ಪೆಗ ಆಗೀಂತ' ಶಾಪ ಕೊಟ್ಟದೆ. ಆಗ ಗೂಡೆಗಳ ತಲೆಗೆ ಅಡರಿದ ಮತ್ತ್ ಕೆಳಗೆ ಇಳ್ತ್. ಅವು ಹೆದ್ರಿ ಮೊರ್ಬ್‌ಕಂಡ್ ಅಂವನ ಕಾಲಿಗೆ ಅಡ್ಡ ಬಿದ್ದೊ. ನಮ್ಮಂದ ತಪ್ಪಾತ್‌ಂತ ಹೇಳ್ದೊ. ಆಗ ಸನ್ನೇಸಿ ಅವ್ಕೆ ಮರುಶಾಪ ಕೊಟ್ಟದೆ.

'ನಿಮ್ಮಲ್ಲಿ ಯಾರಾದರೊಬ್ಬ ನರಮೊಂಯಿಂಸನ ಮೊದ್ವೆ ಆಗಿ ಅಂವನೊಟ್ಟಿಗೆ ಒಂದು ವೊರ್ಸ ಸಂಸಾರ ಮಾಡಿರೆ ನಿಮ್ಮ ಶಾಪ ಕಳ್ದದೆ' ಎಂತ ಹೇಳ್ದೆ.

'ಕಪ್ಪೆಗ ಆದ ನಮ್ಮ ಯಾವ ನರಮೊಂಯಿಂಸರ್ ಮೊದ್ವೆ ಆದವೆ?' ಎಂತ ಕಿನ್ನರ ರಾಜಕುಮಾರಿಗ ಸನ್ನೇಸಿನ ಕೇಳ್ವೆ. ಆಗ ಸನ್ನೇಸಿ,

'ನೀವು ನೀರ್‌ಲಿ ಇರಿಕನ ಮಾತ್ರ ಕಪ್ಪೆಗ. ಹೊರಗೆ ಬಂದರೆ ನಿಮ್ಮ ನಿಜರೂಪ ಇದ್ದದೆ.' ಎಂತ ಹೇಳ್ದೆ. ಆ ಗೂಡೆಗ ಕಪ್ಪೆಗ ಆಗಿ ಕೆರೆಗೆ ಹಾರ್ದೊ.

ಒಂದು ದಿನ ಆ ವೂರ್‌ನ ರಾಜ, ಮಂತ್ರಿನ ಕರ್ಕಂಡ್ ತಿರ್ಗಾಡಿಕಂಡ್ ಬಾಕಾಕನ ಈ ಏಳ್ ಜನ ಕಿನ್ನರ ರಾಜಕುಮಾರಿಗ ಅಂವನ ಕಣ್ಣ್‌ಗೆ ಬಿದ್ದವೆ. ರಾಜ ಕುದ್ರೆಂದ ಇಳ್ದ್, ಅವರ ಹಕ್ಕಲೆ ಬಂದದೆ. ಅವರ ಪೊರ್ಲು ನೋಡಿ ಮೊರ್ಛಾದೆ. ರಾಜನ ನೋಡ್ದ ಹಾಂಗೆ ಆರ್ ಜನ ಗೂಡೆಗ ಕೆರೆಗೆ ಹಾರಿ ಕಪ್ಪೆಗ ಆದೊ. ದೊಡ್ಡ ಗೂಡೆ ಮಾತ್ರ ರಾಜನ ಎದ್ರ್‌ಗೆ ಇದ್ದದೆ. ರಾಜ ಅದರ ಕೈ ಹಿಡ್ದ್,

'ನೀ ನನ್ನ ಮೊದ್ವೆ ಆಗ್. ನಿನ್ನ ಮಹಾರಾಣಿ ಆಗಿ ಮಾಡ್ನೆ.'

ಎಂತ ಹೇಳ್ದೆ. ಆಗ ಕಿನ್ನರ ರಾಜಕುಮಾರಿ, 'ಆದು. ಆದರೆ ಕೆರೆ ಮತ್ತೆ ಬಾವಿ ನನ್ನ ಕಣ್ಣಿಗೆ ಬೀಳಿಕೆ ಬೊತ್ತು. ಇಂದ್‌ಗೆ ಒಂದ್ ವೊರ್ಸ ಆಕಾಕನ ನೀ ನನ್ನ ಈ ಕೆರೆ ಹಕ್ಕಲೆ ತಂದ್ ಬುಡೊಕು' ಎಂತ ಹೇಳ್ದೆ. ರಾಜ ಒಪ್ಪಿದೆ. ಅದರ ಕುದ್ರೆ ಮೇಲೆ ಕುದ್ರಿಸಿಕಂಡ್ ಅವರ ರಾಜ್ಯಕ್ಕೆ ಬಂದದೆ. ಅದರ ಮೊದುವೆ ಆಗಿ, ಅದಕ್ಕೆ ಒಂದು ಬೇರೆ ಅರಮನೆ ಕಟ್ಟಿ ಅದರ್‍ಲಿ ಕುದ್ರಿಸಿದೆ. ರಾಜ ಉದ್ಯಾನವನಲಿ ಇದ್ದ ಕೆರೆಗಳಿಗೆಲ್ಲಾ ಬೇಲಿ ಹಾಕಿಸಿದೆ. ಅದರ ಕಾಯಕೆ ಜನ ಇಸಿದೆ.

ರಾಜ ಕಿನ್ನರಿ ರಾಜಕುಮಾರಿನ ಮೊದ್ವೆ ಆದ ಮೇಲೆ ಉಳ್ದ ರಾಣಿಯರ ತಿರ್‍ಗಿ ನೋಡ್ತಿತ್ಲೆ. ಕಿನ್ನರ ರಾಣಿನ ಅರಮನೆಲೇ ಇರ್ತಿತ್ತ್.ಆಗ ಉಳ್ದ ರಾಣಿಯವ್ಕೆ ಇದರ ಮೇಲೆ ಮಚ್ಚರಸುರು ಆದೆ. ಹೇಂಗಾದರೂ ಮಾಡಿ ಇದರ ಓಡ್ಸೊಕೂಂತ ನೋಡ್ವೆ. ಒಂದು ದಿನ ಹಿರಿ ರಾಣಿ ಇದರ ಅರಮನೆಗೆ ಬಂದದೆ. ಕಿನ್ನರ ರಾಣಿನೊಟ್ಟಿಗೆ ತಂಜಣೆ-ಮಂಜಣೆ ಮಾತಾಡ್ದೆ. ನನ್ನ ಅರಮನೆಗೆ ಬಾಂತ ಕರ್‍ದದೆ. ಕಿನ್ನರ ರಾಣಿ, ಹಿರಿರಾಣಿನ ಬೊಮ್ಮಣದ ಮಾತ್ ಕೇಳಿ ಮರ್‍ಳಾದೆ. ಬಾಕೆ ಒಪ್ಪಿದೆ.

ಕಿನ್ನರ ರಾಣಿ ಹಿರಿರಾಣಿನ ಅರಮನೆಗೆ ಹೋದೆ. ಹಿರಿರಾಣಿ ಅದರ ಬಾಳ ಕೊಂಡಾಟಲಿ ಮಾತಾಡ್ಸಿ, ಉಂಬಕೆ, ತಿಂಬಕೆ ಕೊಟ್ಟ್, ಅದರ ಕರ್‍ಕಂಡ್ ಉದ್ಯಾನವನಕ್ಕೆ ಹೋದೆ. ಅಲ್ಲಿ ಕೆರೆಲಿ ಮೀಯೊಮೋಂತ ಹೇಳ್ದೆ. ಕಿನ್ನರ ರಾಣಿ ಒಪ್ಪಿತ್ಲೆ. ಆಗ ಹಿರಿರಾಣಿ ಅದರ ಕೆರೆಗೆ ದೂಡ್ದೆ. ಕೂಡ್ಲೇ ಅದ್ ಕಪ್ಪೆ ಆದೆ. ಅದ್ ಏನಾತ್‌ಂತ ಹಿರ್‍ಯ ರಾಣಿಗೆ ಗೊತ್ತಾತ್ಲೆ. ಅದ್ ಸುತ್ತೋಳು ಹುಡ್ಕಿದೆ. ಎಲ್ಲೂ ಸಿಕ್ಕುದುಲ್ಲೆ. ಅದ್ ಕೆರೆಲಿ ಮುಳುಂಗಿ ಸತ್‌ಹೋತ್‌ಂತ ನೆನ್ಸಿ, ಕುಸಿಲಿ

ಅರಮನೆಗೆ ಬಂದದೆ. ಅದ್ ಹೋದ ಮೇಲೆ ಕಿನ್ನರ ರಾಣಿ ಕಪ್ಪೆ ರೂಪಲಿ ಇದ್ದದ್, ನೀರ್‌ಂದ ಹೊರಗೆ ಬಂದದೆ. ಆಗ ಅದ್ಕೆ ನಿಜರೂಪ ಬಂದದೆ. ಕಿನ್ನರರಾಣಿ ಅದರ ಅರಮನೆಗೆ ಹೋದೆ.

ಹಿರ್‍ಯ ರಾಣಿಗೆ ಕಿನ್ನರರಾಣಿ ಅದರ ಅರಮನೆಲಿ ಉಟ್ಟೊಂತ ಗೊತ್ತಾತ್. ಅದ್ಕೆ ಸೋಜಿಗ ಆತ್. ಇದ್ ಯಾರೋ ಮಾಟ ಮೊಂತ್ರ ತಿಳ್ದ್ ಹೆಣ್ಣ್‌ಂತ ಹೆದ್ರಿಕೆ ಆದೆ. ಇನ್ನ್ ಅದರ ಸುದ್ದಿಗೆ ನಾವು ಹೋದು ಬೇಡಾಂತ, ಬೇರೆ ರಾಣಿಗಳಿಗೆ ಹೇಳ್ದೆ.

'ಅಜ್ಜಪ್ಪ ಹಾಂಗೆ ರಾಜಂಗೆ ಎಷ್ಟ್ ಜನ ರಾಣಿಗ ಇದ್ದವೆ?' ತಮ್ಮ ಕೇಳ್ದೆ.

'ಆಗನ ಕಾಲಲಿ ರಾಜರ್‌ಗ ಎಷ್ಟ್ ಜನನ ಬೇಕರೂ ಮೊದ್ವೆ ಆಕ್.' ಎಂತ ಅಜ್ಜಪ್ಪ ಹೇಳಿ ಕತೆನ ಮುಂದುವರಿಸಿದೊ.

ಹೀಂಗೆ ಕಿನ್ನರ ರಾಣಿನೊಟ್ಟಿಗೆ ರಾಜ ಒಂದು ವೊರ್ಸ ಮುಟ್ಟ ಸಂತೋಸಲಿ ಇತ್ತ್. ಒಂದು ವೊರ್ಸ ಆಕಾಕನ ಕಿನ್ನರ ರಾಣಿ ರಾಜನೊಟ್ಟಿಗೆ,

'ನಾಳೆ ನಾವು ಮೊದ್ವೆ ಆಗಿ ಒಂದು ವೊರ್ಸ ಆದೆ. ನನ್ನ ನೀ ಆ ಕೆರೆ ಹಕ್ಕಲೆ ಕರ್‍ಕೊಂಡೋಕು' ಎಂತ ಹೇಳ್ದೆ. ರಾಜ ಒಪ್ಪಿ ಅದರ ಮಾರ್‍ನೆ ದಿನ ಕೆರೆ ಹಕ್ಕಲೆ ಕರ್‍ಕಂಡ್ ಹೋದೆ. ಕಿನ್ನರ ರಾಣಿ ಕೆರೆನ ನೋಡ್ದವ್ಳೇ ಅದಕ್ಕೆ ಹಾರಿದೆ. ರಾಜ ಅದರ ನೋಡಿ ಗರ ಬಡ್ದವನಾಂಗೆ ನಿತ್ತದೆ. ಹಂಞ ಹೊತ್ತ್‌ಲಿ ಕೆರೆಂದ ಏಳ್ ಜನ ಕಿನ್ನರ ರಾಜಕುಮಾರಿಗ ಹೊರಗೆ ಬಂದೊ. ರಾಜನ ಎದ್ರಿಗೆ ನಿಂತ್ ಕೈ ಮುಗ್ದೊ. ಇದರೆಲ್ಲಾ ನೋಡಿ ರಾಜಂಗೆ ಸೋಜಿಗದ ಮೇಲೆ ಸೋಜಿಗ ಆದೆ. ಕಿನ್ನರ ರಾಣಿ ರಾಜನೊಟ್ಟಿಗೆ,

'ನಾವು ಏಳ್ ಜನ ಅಕ್ಕ ತಂಗೆಕ. ಕಿನ್ನರ ಲೋಕದ,

ಕಿನ್ನರ ರಾಜನ ಮಕ್ಕ.' ಎಂತ ಹೇಳಿ ನಡ್ಡ ಕತೆನೆಲ್ಲಾ ಅಂವನೊಟ್ಟಿಗೆ ಹೇಳಿ,

'ನಿಮ್ಮ ಉಪಕಾರನ ನಾವು ಮರ್ಯಕಿಲ್ಲೆ. ನಾವು ಇನ್ನ್ ನಮ್ಮ ಲೋಕಕ್ಕೆ ಹೋದವೆ. ಅಪ್ಪಣೆ ಕೊಡಿ' ಎಂತ ಹೇಳ್ದೆ. ರಾಜ ಉಪಾಯ ಇಲ್ಲದೆ.

'ಹಾಂಗೆ ಆಗಲಿ' ಎಂತ ಹೇಳ್ದೆ.

ಅವು ಏಳ್ ಜನ ರಾಜ ನೋಡ್ದಾಂಗೇ ಆಕಾಸಲಿ ಕಿನ್ನರ ಲೋಕಕ್ಕೆ ಹಾರಿ ಹೋದೊ.' ಆಗ ನಾವು,

'ಹಾರಿಕೆ ಅವ್ಕೆ ರೆಕ್ಕೆ ಉಟ್ಟೊ?' ಎಂತ ಕೇಳ್ದೊ. ಆಗ ಅಜ್ಜಪ್ಪ.

'ಕಿನ್ನರ ಲೋಕದವ್ಕೆ ರೆಕ್ಕೆ ಇದ್ದದೆ' ಎಂತ ಹೇಳ್ದೊ. 'ಅವರಾಂಗೆ ನಾವ್ಗೂ ರೆಕ್ಕೆ ಇದ್ದಿದ್ದರೆ ನಾವ್ಗನೂ ಆಕಾಸಲಿ ಹಾರಿ ಹೋಕಾಗಿತ್ತ್'. ಎಂತ ನಾವು ಹೇಳಿಕೊಂಡೊ. ಕತೆ ಮುಗ್ತ್. ನಾವು ಮೀಯಕೆ ಹೋದೊ.

******

“ಅಜ್ಜಪ್ಪನ ಕತೆಗಳ ಭಂಡಾರಂದ ಹದಿನಾಕ್‌ನೇ ಕತೆ”

ಚಿಕವನ ದುರಾಸೆ

ಎಂದ್‌ನ ಹಾಂಗೆ ಅಂದುನೂ ನಾವು ಸಾಲೆ ಬುಟ್ಟು ಬಂದ್ ಕೈ ಕಾಲ್ ತೊಳ್ದ್, ತಿಂಡಿ ತಿಂದ್, ಅಜ್ಜಪ್ಪನ ಹಕ್ಕಲೆ ಬಂದ್ ಕತೆ ಕೇಳಿಕೆ ಅವರ ಸುತ್ತೊಳು ಕುದ್ದೊ. ಅಜ್ಜಪ್ಪ ಕತೆನ ಸುರು ಮಾಡ್ದೊ.

ಒಂದು ಊರ್‌ಲಿ ಒಬ್ಬ ಸಾವ್ಕಾರ ಇತ್ತ್. ಅವಂಗೆ ಮುಂದೆನ ಹೆಣ್ಣ್‌ಲಿ ಒಂದು ಮಗ ಇತ್ತ್. ಅವನ ಎರಡನೇ ಹೆಣ್ಣ್ ದೊಡ್ಡ ಸೂಟೆ. ಅದ್ಕುನೂ ಎರ್ಡ್ ಹೆಣ್ಣ್ ಮಕ್ಕ ಇದ್ದೊ. ಅದ್ ಮುಂದೆನ ಹೆಣ್ಣ್‌ನ ಮಗಳಿಗೆ ತುಂಬಾ ಕಷ್ಟ ಕೊಡ್ತಿತ್ತ್. ಮನೆ ಕೆಲ್ಸ ಎಲ್ಲಾ ಅದರ ಕೈಲೇ ಮಾಡ್ಸ್‌ತಿತ್ತ್. ಸೀರೆ ಒಗ್ಯೊದು, ನೀರ್ ತಾದು, ಗುಡ್ಸೋದು, ಪಾತ್ರ ತೊಳ್ಯೊದು ಎಲ್ಲಾ ದೊಡ್ಡ ಗೂಡೇನೇ ಮಾಡ್ತಿತ್ತ್. ಆ ಗೂಡೆಗೆ ಹೂವುಗಂತೇಳ್ರೆ ಪ್ರಾಣ.

ಅದ್ ದೈಲಿದ್ದ ಹೂನ ಮುಗುರುಗಳ ಕೊಯ್ದ್ ಮಾಲೆ ಕಟ್ಟಿತ್ತ್. ಆದರೆ ಅದರ ಮುಡ್ಯಕೆ ಚಿಕವ ಬುಡ್ತಿತ್ಲೆ. ಅದ್ ಅದರ ಮಕ್ಕಳಿಗೆ ತಲೆಗೆ ಪದಾನ ಎಣ್ಣೆ ಹಾಕಿ ತಲೆ ಬಾಚಿ ದೊಡ್ಡ ಗೂಡೆ ಕಟ್ಟಿ ಇಸಿದ ಹೂ ಮಾಲೆಗಳ ಮುಡ್ಸ್‌ತಿತ್ತ್. ತಬ್ಬೆಲಿ ಗೂಡೆಗೆ ತಲೆಗೆ ಎಂಣೆ ಕೊಡ್ತಿತ್ಲೆ. ಅದರ ತಲೆ ಯಾಗೊಳು ಎಂಣೆ ಕಾಣದೆ ಒಣ್ಗಿದ ಚಪ್ಪರದಾಂಗೆ ಕಾಂಬತಿತ್ತ್. ಅದರ ಕೋಲ ನೋಡಿ ಅಪ್ಪ ಬೊಯ್ದರೆ ಯಾಗಾದರೊಮ್ಮೆ ಹನೀಸ್ ಎಣ್ಣೆನ ಚಿಕವ ಅದರ ತಲೆಗೆ ಹನ್ಕ್‌ಸ್ತಿತ್ತ್. ಹಾಕಿಕೆ ಸರಿಯಾದ ಬಟ್ಟೆ ಕೊಡ್ತಿತ್ಲೆ. ಸೀರೆ ಒಗ್ಯಕೆ ಸಾಬಾನ್‌ನನೂ ಕೊಡ್ತಿತ್ಲೆ. ಅದ್ ಕೆಲ್ಸದವರಾಂಗೆ ಇರ್ತಿತ್ತ್.

ಒಂದು ದಿನ ದೊಡ್ಡ ಗೂಡೆ ಚಿಕವನ ಮತ್ತೆ ತಂಗೆಕಳ ಸೀರೆನೆಲ್ಲಾ ಗಂಟ್ ಕಟ್ಟಿ ಒಗ್ಯಕೆ ಹಳ್ಳಕೆ ತಕಂಡೋತ್. ಅಲ್ಲಿ ನೀರ್‌ಲಿ ಸೀರೆಗಳ ಪದಾನ್ಸಿ, ಸಾಬಾನ್ ಹಾಕಿ ಉಜ್ಜಿಕೆ ಸುರು ಮಾಡ್ತ್. ಆಗ ಅದರ ಕೈಯಿಂದ ಸಾಬಾನ್ ಜಾರಿ ಹಳ್ಳಕೆ ಬೀತ್. ಚಿಕವ ಕೊಟ್ಟದೇ ಸಣ್ಣ ತುಂಡು ಸಾಬಾನ್. ಅದುನೂ ನೀರ್‌ಲಿ ಬೇಳಿಕಾಕನ ಗೂಡೆಗೆ ಮೊರ್ಡಿಗೆ ಬಾತ್. ಅದ್ ಆದಷ್ಟ್ ಹಳ್ಳಲಿ ಹುಡ್ಕಿದೆ. ಹಳ್ಳಲಿ ನೀರ್‌ನೂ ತುಂಬಾ ಇತ್ತ್. ಸಾಬಾನ್ ಸಿಕ್ಕಿತಿಲ್ಲೆ. ಆಗ ಅದ್ಕೆ ಮೊರ್ಡಿಕೆ ಬಾತ್. ಅದ್ ದುಕ್ಡ್‌ಸಿ ದುಕ್ಡ್‌ಸಿ ಮೊರ್ಟದೆ. ಆಗ ಯಾರೋ ಅದರ,

‘ಯಾಕೆ ಮೊರ್ಟಿಯಾ?’ ಎಂತ ಕೇಳ್ದೊ? ಗೂಡೆ ತಲೆ ಎತ್ತಿ ಸುತ್ತೊಳೂ ನೋಡ್ದೆ. ಯಾರೂ ಕಾಂಬೋದಿಲ್ಲೆ. ಅದ್ ಮೊರ್ಟ್ ಕಂಡೇ ಇತ್ತ್. ಹಂಞಾ ಹೊತ್ತ್‌ಲಿ ಪುನಃ,

‘ಏಕೆ ಮೊರ್ಟಿಯಾ?’ ಎಂತ ಕೇಳ್ದೊ. ಅಲ್ಲಿ ಯಾರೂ

ಇತ್ತಿಲ್ಲೆ. ಪಾರೆ ಮೇಲೆ ಒಂದು ದೊಡ್ಡ ಗೋಂಕ್ರ್ ಕಪ್ಪೆ ಕುದ್ದ್‌ಕಂಡಿತ್ತ್. ಗೂಡೆ ಗೊಂಕ್ರ್ ಕಪ್ಪೆನನೇ ನೋಡ್ದೆ. ಆಗ ಆ ಕಪ್ಪೆ ಮಾತಾಡ್ತ್,

'ಏಕೆ ಮೊರ್ಟಿಯಾ?' ಎಂತ.

'ಕಪ್ಪೆಗ ಮಾತಾಡ್ವನೋ ಅಜ್ಜಪ್ಪ?' ಎಂತ ನಾ ಕೇಳ್ದೆ. ಅದಕ್ಕೆ ಅಜ್ಜಪ್ಪ, 'ಆಗ ಸತ್ಯದ ಕಾಲ, ಮುರ್ಗ‌ಗ, ಹಕ್ಕಿಗ, ಮೀನ್‌ಗ, ಕಪ್ಪೆಗ ಎಲ್ಲಾ ಮಾತಾಡ್ತಿದ್ದೊ.' ಅಜ್ಜಪ್ಪ ಹೇಳ್ದೊ. 'ಇನ್ನ ಎಡೆಲಿ ಮಾತಾಬ್ಡೊಡಿ. 'ಎಂತ ಹೇಳಿ ಅಜ್ಜಪ್ಪ ಕತೆ ಮುಂದರ್ಸಿದೊ. ಆಗ ಗೂಡೆಗೆ ಗೋಂಕ್ರ್ ಕಪ್ಪೆನೇ ಮಾತಾಡ್‌ದಂತ ಗೊತ್ತಾತ್. ಅದ್ ಕಪ್ಪೆನೊಟ್ಟಿಗೆ,

'ನನ್ನ ಸಾಬಾನ್ ನೀರಿಗೆ ಬಿದ್ದುಟ್ಟು. ಹುಡ್ಕಿರೆ ಸಿಕ್ಕುದುಲ್ಲೆ. ಸೀರೆ ಒಗ್ಯದೆ ನಾ ಮನೆಗೆ ಹೋದರೆ ನಂಗೆ ಇಂದ್ ಗಂಜಿ ಸಿಕ್ಕಿಕಿಲ್ಲೆ. ಚಿಕವ ಹೊಡ್ದವೆ.' ಎಂತ ಹೇಳ್ತ್. ಅದ್ಕೆ ಕಪ್ಪೆ,

'ನೀ ಹೆದ್ರ್ ಬಡ. ನಾ ಹುಡ್ಕಿ ಕೊಟ್ಟನೇಂತ' ಹೇಳಿ ಹಳ್ಳಕ್ಕೆ ಹಾರ್ತ್. ಮೇಲೆ ಬಾಕಾಕನ ಅದರ ಬಾಯಿಲಿ ಒಂದು ಚಿನ್ನದ ಸಾಬಾನ್ ಇತ್ತ್. 'ಇಂದ ತಕಾಂತ' ಹೇಳ್ತ್. 'ಇದ್ ನನ್ನದಲ್ಲಾಂತ' ಗೂಡೆ ಹೇಳ್ದೆ. ಪುನಃ ಕಪ್ಪೆ ನೀರ್‌ಗೆ ಹಾರ್ತ್. ಈ ಸಲ ಒಂದು ಬೆಳ್ಳಿ ಸಾಬಾನ್ ತುಂಡು ತಾತ್. ಇದುನೂ ನನ್ನದಲ್ಲಾಂತ ಗೂಡೆ ಹೇಳ್ದೆ. ಪುನಃ ಕಪ್ಪೆ ನೀರ್‌ಲಿ ಮುಳುಂಗಿ ಗೂಡೆನ ಸಾಬಾನ್ ತಂದದೆ. ಅದರ ನೋಡಿ ಗೂಡೆಗೆ ಜೀವ ಬಾತ್. ಗೂಡೆ ಕುಸಿಂದ ಆ ಸಾಬಾನ್ ತುಂಡ್‌ನ ತಕಂಡ್, 'ನಿನ್ನ ಉಪಕಾರನ ನಾ ಸಾಯಕನ ಮುಟ್ಟ ಮರ್ಯೆಕಿಲ್ಲೆ' ಎಂತ ಹೇಳಿ ಸೀರೆ ಒಗ್ಯಕೆ ಸುರು ಮಾಡ್ದೆ. ಆಗ ಗೋಂಕ್ರ್ ಕಪ್ಪೆ,

'ನೀ ತುಂಬಾ ಒಳ್ಳೆ ಗೂಡೆ, ಇಂದಾ ಇದುನೂ ನಿಂಗೇ

ಆತ್' ಎಂತ ಹೇಳಿ ಚಿನ್ನದ ಮತ್ತೆ ಬೆಳ್ಳಿನ ಸಾಬಾನ್ ತುಂಡುಗಳ ಅದರ ಕೈಲಿ ಕೊಟ್ಟದೆ. ಗೂಡೆ ಸೀರೆ ಎಲ್ಲಾ ಒಗ್ದ್‌ದ್, ಆ ಸಾಬಾನ್ ತುಂಡುಗಳ ತಕಂಡ್ ಮನೆಗೆ ಬಂದದೆ. ಸೀರೆಗಳ ಒಣ್ಂಗಿಕೆ ಹಾಕಿ ಚಿನ್ನ ಮತ್ತೆ ಬೆಳ್ಳಿನ ಸಾಬಾನ್ ತುಂಡುಗಳ ಚಿಕವನ ಕೈಲಿ ಕೊಟ್ಟದೆ. ಆಗ ಇದರ ನೋಡಿ ಚಿಕವಂಗೆ ಅಚ್ಚರಿ ಆದೆ. 'ಇದ್ ನಿಂಗೆ ಹೇಂಗೆ ಸಿಕಿತ್?' ಎಂತ ಗೂಡೆನ ಕೇಳ್ದೆ. ಗೂಡೆ ನಡ್ದ ಕತೆನೆಲ್ಲಾ ಹೇಳ್ದೆ. ಅದರ ಕೇಳಿ ಚಿಕವಂಗೆ ದುರಾಸೆ ಆದೆ. ಮೊರ್ದಿನ ಅದ್, 'ನಾ ಇಂದ್ ಸೀರೆ ಒಗ್ದ್ ಬನ್ನೆ' ಎಂತ ಹೇಳಿ ಸೀರೆ ಗಂಟ್ ತಕಂಡ್ ಹಳ್ಳಕೆ ಹೋದೆ. ಅಲ್ಲಿ ಸಾಬಾನ್‌ನ ಬೇಕಂತಳೇ ನೀರಿಗೆ ಬೀಳ್ಸಿ, ಬೊಬ್ಬೆ ಹೊಡ್ಕಂಡ್ ಮೊರ್ಡಿಕೆ ಸುರು ಮಾಡ್ದೆ. ಆಗ ಗೋಂಕ್ರ್ ಕಪ್ಪೆ, 'ಏಕೆ ಮೊರ್ಟಿಯಾಂತ' ಕೇಳ್ದೆ. ಗೂಡೆನ ಚಿಕವ 'ನನ್ನ ಸಾಬಾನ್ ಹಳ್ಳಕೆ ಬಿದ್ದುಟು' ಎಂತ ಹೇಳ್ದೆ. ಕಪ್ಪೆ ಹಳ್ಳಕೆ ಹಾರಿ ಚಿನ್ನದ ಸಾಬಾನ್ ತಂದ್, 'ಇದ್ ನಿನ್ನದೊಂತ' ಕೇಳ್ದೆ. ಆಗ ಚಿಕವ ಆ ಸಾಬಾನ್ ತುಂಡುನ ಕಪ್ಪೆನ ಬಾಯಿಂದ ಬೇಗ ತಕಂಡ್, 'ಇನ್ನೊಂದು ಬೆಳ್ಳಿ ಸಾಬಾನ್ ತುಂಡುನೂ ಬಿದ್ದುಟುಂತ' ಹೇಳ್ದೆ. ಅದರ ಕೇಳಿ ಕಪ್ಪೆಗೆ ಸಿಟ್ಟ್ ಬಂದದೆ. 'ನೀ ಎಷ್ಟ್ ದುರಾಸೆನ ಹೆಣ್ಣ್' ಎಂತ ಹೇಳಿ, ಕಪ್ಪೆ ಗೂಡೆನ ಚಿಕವನ ಮೇಲೆ ಹಾರಿದೆ. ಚಿಕವ ಹೆದ್ರಿ ಹಳ್ಳಕೆ ಬಿದ್ದದೆ. ಅದ್ ನೀರ್‌ಲಿ ಕೊಚ್ಚಿಕೊಂಡ್ ಹೋಗಿ ಸತ್ತದೆ. ಇದರ ಕೇಳಿ ನಾವು ಮಕ್ಕ ಚಿಕವಂಗೆ ಹಾಂಗೇ ಆಕುಂತ ಹೇಳಿಕೊಂಡೊ. ಆ ಮೇಲೆ ಅಜ್ಜಪ್ಪನೊಟ್ಟಿಗೆ, 'ಅಜ್ಜಪ್ಪಾ ಸಾವ್ಕಾರಂಗೆ ಹೆಣ್ಣ್ ಸತ್ತತಲೇ? ಮೂರ್ನೆ ಮೊದ್ವೆ ಆದೆನೋ? ಎಂತ ಕೇಳ್ದೊ.

'ಇಲ್ಲೆ ಅವಂಗೆ ಎರಡ್ನೇ ಹೆಣ್ಣ್‌ನ ಮೊದ್ವೆ ಆಗಿ ಸಾಕಾಗುಟ್ಟು.

ಈಗ ಮನೆ ಕೆಲ್ಸ್ ಮಾಡಿಕೆ ದೊಡ್ಡ ಗೂಡೆ ಉಟ್ಟಲೇ? ಅದೇ ಮನೆ ಕೆಲ್ಸ್ ಮಾಡಿಕಂಡ್ ತಂಗೆಕಳ ಸಾಕಿದೆ.' ಎಂತ ಹೇಳಿ ಅಜ್ಜಪ್ಪ ಕತೆನ ಮುಗ್ಸಿದೆ. ನಾವು ಜಾಗೆ ಖಾಲಿ ಮಾಡ್ದೊ.

******

“ಅಜ್ಜಪ್ಪನ ಕತೆಗಳ ಭಂಡಾರಂದ ಹದನೈದನೇ ಕತೆ”

ಹೂ ಮಾರುವ ಅಜ್ಜಿನೂ ಅದರ ಮಗಳೂ

ಅಂದ್ ಐತ್ವಾರ. ಮಾಡಿಕೆ ಬೇರೆ ಕೆಲ್ಸ ಇಲ್ಲೆ. ನಾವು ಬೊಳ್ಪುಗೆನೇ ಅಜ್ಜಪ್ಪನೊಟ್ಟಿಗೆ ಕತೆ ಹೇಳೀಂತ ದುಂಬಾಲು ಬಿದ್ದೊ. ಅವು ಹಗ್ಲ್ ಹೊತ್ತ್ ಕತೆ ಹೇಳಿಕೆ ಒಪ್ಪುದುಲ್ಲೆ. ನಾವು ಅವರ ಬುಡುದುಲ್ಲೆ. ನಮ್ಮ ಹಟಂದಾಗಿ ಅಂದ್ ಅವು ಬೊಳ್ಪುಗೆನೇ ಕತೆ ಹೇಳಿಕೆ ಸುರು ಮಾಡ್ದೊ.

ಒಂದ್ ಊರ್‌ಲಿ ಒಬ್ಬ ರಾಜ ಇತ್ತ್. ಅಂವಂಗೆ ಏಳ್ ಜನ ರಾಣಿಗ. ಒಬ್ಬಂಗೂ ಮಕ್ಕ ಆತ್ಲೆ. ರಾಜಂಗೆ ಬಾಳ ಚಿಂತೆ ಸುರಾದೆ. ಅರಮನೆಂದ ಹಂಞ ದೂರಲಿ ಒಂದ್ ಬಡ ಅಜ್ಜಿ ಇತ್ತ್. ಅದ್ ಅದರ ಮನೆ ಸುತ್ತೊಳು ಹೂವು ಕೊಪ್ಪಳ ಬೆಳ್ಸಿತ್. ಆ ಹೂವುನ ಕೊಪ್ಪಳಲ್ಲಿ ತರತರದ ಮಲ್ಲಿಗೆ, ಜಾಜಿ, ಇರುವಂತಿಕೆ,

ಗುಲಾಬಿ ಹೂಗ ಇದ್ದೊ. ಅದ್ ದಿನಾ ಹೂಗಳ ಕೊಯ್ದ್ ಮಾಲೆ ಮಾಡಿ ಅರಮನೆಗೆ ತಕಂಡೋಗಿ ಅಲ್ಲಿನ ರಾಣಿಗಳಿಗೆ ದೇವರ ಪೂಜೆಗೆ, ಮುಡಿಯಕೆ ಕೊಡ್ತಿತ್ತ್. ಅವು ಕೊಟ್ಟ ದುಡ್ಡುಂದ ಜೀವನ ಸಾಗ್ಸಿತಿತ್ತ್. ಅದ್ಕೆ ಯಾರೂ ಇತ್ಲೆ. ಅದು ಒಂದು ಪಾಪದ ತಬ್ಬೆಲಿ ಹೆಣ್ಣ್ ಕೂಸ್‌ನ ಸಾಕಿ ಬೆಳ್ಸಿತ್. ಆ ಗೂಡೆ ದೊಡ್ಡದಾಕನ ಅಜ್ಜಿಗೆ ಹೂನ ದೈಗಳಿಗೆ ನೀರ್ ಹಾಕುದು, ಹೂ ಕೊಯ್ಯುದು, ಮಾಲೆ ಕಟ್ಟುದು ಮಾಡಿ ಸಾಯ ಮಾಡ್ತಿತ್ತ್. ಒಮ್ಮೊಮ್ಮೆ ಅಜ್ಜಿನೊಟ್ಟಿಗೆ ಅರಮನೆಗೆ ಹೋಗ್ತಿತ್ತ್. ಗೂಡೆ ಮೈ ಕೈ ತುಂಬಿಕಂಡ್ ಬಾಳ ಪೊರ್ಲು ಇತ್ತ್. ಅದರ ಪೊರ್ಲು ನೋಡಿ ರಾಣಿಗ ಅಜ್ಜಿನೊಟ್ಟಿಗೆ, 'ನೀ ಇದರ ಅರಮನೆಗೆ ಕರ್ಕಂಡ್ ಬರ್ಬಡ.' ಎಂತ ಹೇಳ್ದೊ. ಅದರ್‌ಂದ ಮೇಲೆ ಅಜ್ಜಿ ಅದರ ಕರ್ಕೊಂಡೋಗ್ತಿತ್ಲೆ.

ಒಂದು ದಿನ ಅಜ್ಜಿಗೆ ಉಸಾರ್ ತಪ್ಪಿತ್. ಅದ್ಕೆ ಏನ್ ಮಾಡ್ದೂಂತ ಗೊತ್ತಾತ್ಲೆ. ಹೂ ಮಾರ್ತ್‌ಲ್ಲರೆ ಇಂದ್ ಉಪಾಸ ಇರೊಕು. ಆದದ್ದಾಗಲೀಂತ ಅದ್ ಗೂಡೆನೊಟ್ಟಿಗೆ,

'ಮಗಾ, ಈ ದಿನ ನೀ ಹೂನ ತಕಂಡ್ ಅರಮನೆಗೆ ಹೋಗು.' ಎಂತ ಹೇಳಿ ಅದರೊಟ್ಟಿಗೆ ಹೂನ ಮಾಲೆಗಳ ಕಳ್ಸಿದೆ. ಅದ್ ಹೂ ಬುಟ್ಟಿನ ತಲೆಲಿ ಹೊತ್ತ್‌ಕಂಡ್ ಅರಮನೆಗೆ ಬಂದದೆ. ಅರಮನೆಲಿ ರಾಣಿನ ಅಂತಃಪುರಲಿ ರಾಜ ಇದ್ದದೆ. ಅಂವ ಈ ಹೂ ಮಾರುವ ಗೂಡೆನ ನೋಡಿ ಮೊರ್ಹಾದೆ.ರಾಣಿನೊಟ್ಟಿಗೆ ಇದ್ ಯಾರ್‌ಂತ ಕೇಳ್ದೆ. ರಾಣಿ ಕೆಲ್ಸ್ ಕೆಟ್ಟತ್‌ಂತ ನೆನ್ಸಿದೆ. ರಾಜಂಗೆ ಗೂಡೆ ಹೂ ಮಾರುವ ಅಜ್ಜಿನ ಮಗಳ್‌ಂತ ಗೊತ್ತಾದ ಕೂಡ್ಲೆ, ಮೊರ್ದಿನ ಅಜ್ಜಿನ ಅರಮನೆಗೆ ಕರ್ಸಿಕಂಡದೆ. 'ನಿನ್ನ ಮಗಳ ನಾ ಮೊದ್ವೆ ಆನೆ. 'ನಂಗೆ ಇಷ್ಟರವರೆಗೆ ಯಾವ ರಾಣಿಲೂ ಮಕ್ಕ

ಆತ್ಲೆ. ನಿನ್ನ ಮಗಳ ಅದೃಷ್ಟ ಒಳ್ಳೆದಿದ್ದರೆ ಅದರ ಹೊಟ್ಟೆಲಿ ಹುಟ್ಟಿದ ಕೂಸು ರಾಜ ಆದೇಂತ' ಹೇಳ್ದೆ. ಅಜ್ಜಿಗೆ ರಾಜನ ಎದ್ರ್ ನಿಂತ್ ಮಾತಾಡಿಕೆ ಧೈರ್ಯ ಇಲ್ಲೆ. ರಾಜ ಅಜ್ಜಿನ ಮಗಳ ಮೊದ್ವೆ ಆದೆ. ರಾಣಿಗಳಿಗೆಲ್ಲಾ ಅಜ್ಜಿನ ಮೇಲೆನೂ ಈ ಗೂಡೆನ ಮೇಲೆನೂ ಬಾಳ ಸಿಟ್ಟ ಬಂದದೆ. ಒಂದು ಹೂಮಾರುವ ಗೂಡೆ ನಮ್ಮ ಸರಿಸಮಾನ ಆಗಿ ರಾಣಿ ಆತಲೇಂತ ಅವ್ಕೆ ಬಾಳ ಕೋಪ. ರಾಜಂಗೆ ಇದ್ ಗೊತ್ತಾಗಿ ಅದ್ಕೆ ಬೇರೆನೇ ಒಂದು ಅರಮನೆ ಕಟ್ಟಿಸಿಕೊಟ್ಟ್, ಅಜ್ಜಿನನೂ ಅದರೊಟ್ಟಿಗೆ ಇರಿಕೆ ಹೇಳ್ದೆ.

ಅಷ್ಟಾಕನ ಪಕ್ಕದ ರಾಜ್ಯದ ರಾಜ ಇವನ ಮೇಲೆ ದಂಡ್ ತಕಂಡ್ ಕಾಳಗಕ್ಕೆ ಬಂದದೆ. ರಾಜಂಗೆ ಚಿಂತೆ ಸುರು ಆದೆ. ಅದಲ್ಲದೆ ಈ ಸಮಯಲಿ ಹೂ ಮಾರುವ ಗೂಡೆ ಐದ್ ತಿಂಗಳ ಬೊಸ್ರಿ. ರಾಜಂಗೆ ಬಾಳ ಕುಸಿನೂ ಆದೆ. ಹೆಣ್ಣ್‌ನ ಬುಟ್ಟ್ ಕಾಳಗಕ್ಕೆ ಹೋಕಲ್ಲಾಂತ ಬೇಜಾರನೂ ಆದೆ. ಅಂವ ಹಿರಿಯ ರಾಣಿನ ಕರ್ದ್, 'ಕಿರಿ ರಾಣಿಗೆ ಏನೂ ಗೊತ್ತಿಲ್ಲೆ. ನೀವು ಅದರ ಸುದ್ದಿಗೆ ಹೋಕೆ ಬೊತ್ತ್. ಲಾಯ್ಕ್‌ಲಿ ನೋಡೊಕೂಂತ ಹೇಳ್ದೆ. ಹಿರರಾಣಿ, 'ನೀವೇನ್ ಹೆದ್ರ್‌ಬೊಡಿ, ನಾವು ಅದರ ಪೊರ್ಲುಲಿ ಸಾಕುವೆಂತ' ರಾಜಂಗೆ ಸಮಾಧಾನ ಮಾಡ್ದೆ. ಆದರೂ ರಾಜಂಗೆ ಸಮಾಧಾನ ಇಲ್ಲೆ. ಹಿರಿರಾಣಿಗಳಿಗೆ ಕಿರಿರಾಣಿನ ನೋಡ್ರೆ ಆದುಲ್ಲೆ. ಹಿರಿರಾಣಿಗ ಎಲ್ಲಾ ರಾಜ ಕುಟುಂಬಂದ ಬಂದ ರಾಜಕುಮಾರಿಗ. ಅವ್ಕೆ ರಾಜ್ಯದ ಆಡಳ್ತ ಮಾಡ್ದು ಹೇಂಗೇಂತ ಗೊತ್ತುಟ್ಟು. ಕಿರಿರಾಣಿ ಹೂಮಾರುವ ಗೂಡೆ. ಅದ್ಕೆ ಏನೇನೂ ಗೊತ್ತಿಲ್ಲೆ. ರಾಜ ಅಜ್ಜಿನ ಕರ್ದ್, 'ನಿನ್ನ ಮಗಳ ಜಾಗ್ರತೆಲಿ ನೋಡಿಕ. ಹಿರಿಯ ರಾಣಿಗ ಎಲ್ಲಾ ಬಾಳ ಜೋರ್‌ನೊವು. ನಿನ್ನ ಮಗಳಿಗೆ ಮತ್ತೆ ಅದ್ಕೆ ಹುಟ್ಟುವ ಕೂಸುಗೆ

ಏನಾದರ್ ತೊಂದರೆ ಆಕೆ ಬೊತ್ತ್. ನೀ ಕಣ್ಣ್‌ಲಿ ಕಣ್ಣ್ ಇಸಿ ಅದರ ನೋಡುಕು. ಇಂದಾ ಈ ಚಂದ್ರಹಾರನ ನಿಂಗೆ ಕೊಟ್ಟನೆ. ನಿಂಗೆ ಬೇಕಾದಂಗೆ ಇದರ ಉಪಯೋಗಿಸಿಕ' ಎಂತ ಹೇಳಿ ರಾಜನ ಮುದ್ರೆಯಿದ್ದ ಒಂದು ಚಂದ್ರಹಾರನ ಅದರ ಕೈಲಿ ಇಸಿದೆ. ರಾಜ ಸೈನ್ಯ ತಕಂಡ್ ಕಾಳಗಕ್ಕೆ ಹೋದೆ.

ಅಜ್ಜಿ ಆ ಚಂದ್ರಹಾರನ ಒಂದು ಮಡ್ಕೆ ಒಳಗೆ ಹಾಕಿ, ಅಜ್ಜಿನ ಹಳೆಮನೆನ ಹೂ ಕೊಪ್ಪುಳಲಿ ಮಲ್ಲಿಗೆ ಬೊಳ್ಳಿನ ಅಡಿಲಿ ಗುಂಡಿ ತೆಗ್ದ್ ಆ ಮಡ್ಕೆನ ಹೂತ್ ಹಾಕಿದೆ. ಇದರೆಲ್ಲಾ ಅದ್ ಮಗಳೊಟ್ಟಿಗೆ ಹೇಳಿ, ನೀ ಜಾಗ್ರತೆ ಇರ್‌ಂತ ಹೇಳ್ದೆ.

ರಾಜ ದಂಡ್ ತಕಂಡ್ ಹೋದ ಮೇಲೆ ಅರಮನೆ ಆಡಳ್ತ ಎಲ್ಲಾ ಹಿರಿರಾಣಿಗೆ ಸಿಕ್ಕಿತ್. ಅದ್ ಕಿರಿರಾಣಿನ ನೋಡಿಕಂಬಕೆ ನನ್ನೊಟ್ಟಿಗೆ ರಾಜ ಹೇಳಿಟ್ಟೊಂತ ಹೇಳಿ ಅದರ ಅರಮನೆಗೆ ಕರ್ಸಿಕಂಡದೆ. ಅಜ್ಜಿನ ಹೊರಗೆ ಹಾಕಿ, ಕಿರಿರಾಣಿನ ಅರಮನೆಗೆ ಬೀಗ ಜಡ್ದದೆ. ಅಜ್ಜಿಗೆ ಏನೂ ಮಾಡಿಕೆ ಉಪಾಯ ಇಲ್ಲದೆ ಅದರ ಹಳೆ ಮನೆಗೆ ಬಂದದೆ. ಅಜ್ಜಿಗೆ ಹಗ್ಲ್ ಇರ್ಳ್ ಮಗಳ್ದೇ ಚಿಂತೆ. ಕಡೆಗೆ ಅದ್ ಅರಮನೆನ ಸೂಲಗಿತ್ತಿನ ಹೋಗಿ ನೋಡಿ, ಅದರೊಟ್ಟಿಗೆ, 'ಗೋಳೋ' ಎಂತ ಮೊರ್ಟ್‌ಕಂಡ್ ನನ್ನ ಮಗಳ ನೀನೇ ಕಾಪಾಡೊಕೂಂತ' ಹೇಳ್ದೆ. ಸೂಲಗಿತ್ತಿ ಬಾಳ ಒಳ್ಳೆ ಹೆಂಗ್‌ಸ್. ಅಜ್ಜಿಗೆ ಅದ್ ಧೈರ್ಯ ಹೇಳ್ದೆ. ನಾ ನಿನ್ನ ಸಾಯಕ್ಕೆ ಒಳೆ. ನೀ ಹೆದ್‌ಬಡಾಂತ ಹೇಳ್ದೆ.

ಒಂಭತ್ತ್‌ತಿಂಗ ಆಕಾಕನ ಹಿರ್ಯ ರಾಣಿಗ ಕಿರಿಯ ರಾಣಿನ ಕಣ್ಣ್‌ಗೆ ಅರ್ವೆ ಕಟ್ಟಿ, ಅದರ ನೆಲಮಾಳಿಗೆಲಿ ಸೆರೆಲಿ ಇಸುವೆ. ಹೆರ್ಗ್ಗೆ ಬೇನೆ ಬಾಕಾಕನ ಸೂಲಗಿತ್ತಿನ ಕರ್ಸುವೆ. ಅದರ ಕೈಲಿ ಒಂದು

ದುಡ್ಡುನ ಚೀಲನ ಕೊಟ್ಟ್, ‘ಕೂಸು ಹುಟ್ಟಿದ ಕೂಡ್ಲೇ ಅದರ ಕೊಂದ್‌ದ್ ಗುಂಡಿ ತೆಗ್ದ್ ಮುಚ್ಚೊಕೂಂತ ಹೇಳ್ದೆ. ಕಿರಿರಾಣಿಗೆ ನೊಡು ಇರ್ಕ್ ಹೊಟ್ಟೆ ಬೇನೆ ಬಂದದೆ. ಅದ್ ಗಂಡ್ ಕೂಸುನ ಹೆತ್ತದೆ. ಕಣ್ಣಿಗೆ ಅರ್ವೆ ಕಟ್ಟಿದ ಕಿರಿರಾಣಿಗೆ ಹುಟ್ಟಿದ ಕೂಸು ಎಂತದ್‌ಂತ ಗೊತ್ತಾತ್ಲೆ. ಅದರೊಟ್ಟಿಗೆ ಕೂಸು ಸತ್ತೋತ್‌ಂತ ಹೇಳ್ದೊ. ಅದ್ ಮೊರ್ಟತ್.

ಸೂಲಗಿತ್ತಿ ಆ ಗಂಡ್ ಕೂಸುನ ಒಂದ್ ಸೀರೆ ಅರ್ವೆಲಿ ಸುತ್ತಿ ಹೂ ಮಾರುವ ಅಜ್ಜಿನ ಮನೆಗೆ ಬಂದದೆ. ಆ ಕೂಸುನನೂ, ರಾಣಿಗ ಕೊಟ್ಟ ದುಡ್ಡುನ ಗಂಟ್‌ನನೂ ಅಜ್ಜಿಗೆ ಕೊಟ್ಟದೆ. ನೀ ಈಗಂದೀಗಳೇ ಇಲ್ಲಿಂದ ಹೊರ್ಡ್. ಕಾಡ್‌ನ ದಾರಿಲೇ ಹೋಗ್. ಊರ್‌ಲಿ ಕಾವಲ್‌ಗಾರರ ಇರ್ರೋಂತ ಹೇಳ್ದೆ. ಅಜ್ಜಿ ಓಡಿ ಹೋಗಿ ಮಲ್ಲಿಗೆ ಬೊಳ್ಳಿ ಅಡಿಲಿ ಅಡಿಂಗಿಸಿ ಇಸಿದ ಮಡ್ಕೆಂದ ಚಂದ್ರಹಾರನ ತಕಂಡ್ ಮೊಟ್ಟೆಲಿ ಕಟ್ಟಿಕಂಡತ್. ಅಜ್ಜಿ ಸೀರೆ ಅರ್ವೆಲಿ ಕೂಸುನ ಬೆನ್ನಿಗೆ ಕಟ್ಟಿಕಂಡ್ ಹೊರ್ಟತ್. ಸೂಲಗಿತ್ತಿ ಅಜ್ಜಿನ ಕರ್ಕಂಡ್ ಊರ್ ದಾಟಿಸಿ ಬಾತ್. ತಿಂಗಳ ಬೊಳ್ಪುನೂ ಇತ್ತ್. ಅಜ್ಜಿ ನಡ್ದ್ ನಡ್ದ್ ಸುಮಾರ್ ದೂರ ಹೋಕಾಕನ ಬೊಳ್ಪಾತ್. ಬೊಳ್ಪುಂದ ಹಿಂಬೊತ್ತು ಮುಟ್ಟ ಕಾಡ್ ದಾರಿಲಿ ಅಜ್ಜಿ ನಡ್ದದೇ ನಡ್ದದ್ ಕತ್ತಲಾಕಾಕನ ದೂರಲಿ ಒಂದು ರುಸಿನ ಆಶ್ರಮ ಸಿಕ್ಕಿದೆ. ಅಲ್ಲಿಗೆ ಹೋಗಿ ರುಸಿನ ಕಾಲ್‌ಗೆ ಅಡ್ಡ ಬಿದ್ದ್, ಈ ಕೂಸುನ ನೀನೇ ಕಾಪಾಡೊಕೂಂತ ಹೇಳ್ತ್. ರುಸಿ ಇದರ ಕತೆನೆಲ್ಲಾ ಕೇಳ್ದೆ. ಹೊಕ್ಕುಳು ಬೊಳ್ಳಿನೂ ಬೀಳದ ಕೂಸುನ ಹಿಡ್ಕಂಡ್ ಬಂದ ಅಜ್ಜಿನ ನೋಡಿ, ಸುರುಗೆ ರುಸಿಗೆ ಅದರ ಮೇಲೆ ಸಂಶಯ ಬಂದದೆ. ಆದರೆ ಚಂದ್ರಹಾರನ ನೋಡಿ ರುಸಿಗೆ ನಂಬಿಕೆ ಬಂದದೆ. ರುಸಿನ ಆಶ್ರಮಲಿ ಅವನ

ಹೆಣ್ಣ್ ಮತ್ತೆ ವಿದ್ಯೆ ಕಲ್ಯಕೆ ಬಂದ ಮೂರು ನಾಕ್ ಶಿಷ್ಯ್ ಇದ್ದೊ. ದನ ಕರ್, ಪ್ರಾಣಿ, ಪಕ್ಷಿಗ ಆಶ್ರಮಲಿ ಇದ್ದೊ. ರುಸಿನ ಹೆಣ್ಣ್ ಅಜ್ಜಿನ ಕೈಯಿಂದ ಕೂಸುನ ತಕಂಡ್, ಅದ್ಕೆ ಹಾಲ್ ಕುಡ್ಸಿದೆ. ಅಜ್ಜಿಗೆ, 'ನೀ ನಡ್ದ್ ನಡ್ದ್ ಬೊಚ್ಚಿಯಳ. ಹಳ್ಳಲಿ ಮಿಂದ್ ಬಾ. ನಿಂಗೆ ತಿಂಬಕೆ ಕುಡ್ಯಕೆ ಕೊಟ್ಟನೇಂತ' ರುಸಿನ ಹೆಣ್ಣ್ ಹೇಳ್ದೆ. ಅಜ್ಜಿ ತಲೆ ಮೈ ಮಿಂದ್ ಬಂದ್ ಹೊಟ್ಟೆ ತುಂಬಿಸಿಕಂಡತ್. ರುಸಿ ಅಜ್ಜಿಗೆ ಧೈರ್ಯ ಹೇಳ್ದೆ. 'ದಂಡ್‌ಗೆ ಹೋದ ರಾಜ ಬಾಕನ ಮುಟ್ಟ ನೀ ಇಲೇ ಇರ್. ಅಂವ ಬಂದ ಮೇಲೆ ಅಂವನ ಇಲ್ಲಿಗೆ ಬಾಕೆ ಹೇಳಿ ಕಳ್ಸಿನೇಂತ' ಹೇಳಿ ಅಜ್ಜಿನ ಅಲ್ಲಿ ನಿಲ್ಸಿಕಂಡದೆ.

ಮೂರು ತಿಂಗ ಕಳ್ಯಕಾಕನ ಕಾಳಗ ಮುಗ್ದದೆ. ರಾಜ ನೆರೆ ರಾಜ್ಯನ ಗೆದ್ದದೆ. ಅರಮನೆಗೆ ಬಾಕಾಕನ ಹಿರ್‍ಯ ರಾಣಿಗ, ಕಿರಿರಾಣಿ ಹೆರ್‍ಗ್ಲಿ ಕೂಸು ಅಯ್ಯೆ ಸತ್ತೋದೋಂತ ಸುಳ್ಳು ಹೇಳಿವೆ. ರಾಜ ನಂಬಿದೆ. ಅಷ್ಟಾಕನ ಒಂದ್ ದಿನ ರುಸಿನ ಎರ್ಡ್ ಶಿಷ್ಯರ್ ಬಂದ್, ಆಶ್ರಮಕ್ಕೆ ಬಾಕೆ ರುಸಿ ಹೇಳಿಕಳ್ಸಿಟ್ಟೂಂತ ಹೇಳ್ದೆ. ರಾಜ ನಾಲ್ಕಾರ್ ಜನ ಸೈನಿಕರ ಕರ್‍ಕಂಡ್ ಕುದ್ರೆ ಮೇಲೆ ಕುದ್ದ್‌ಕಂಡ್ ರುಸಿನ ಆಶ್ರಮಕ್ಕೆ ಬಂದದೆ. ಅಲ್ಲಿ ರುಸಿ ರಾಜಂಗೆ ಹಾಲ್ ಹಣ್ಣ್ ಕೊಟ್ಟ್‌ದ್ ಉಪಚಾರ ಮಾಡಿ, 'ನಿಂಗೆ ಒಂದು ದೊಡ್ಡ ಉಡ್ಗೊರೆನ ಕೊಟ್ಟನೇಂತ' ರಾಜಂಗೆ ಹೇಳ್ದೆ. ರಾಜಂಗೆ ಸೋಜಿಗ ಆದೆ. ರುಸಿನ ಹೆಣ್ಣ್ ಒಳಗೆ ಹೋಗಿ, ಗುಂಡುಗುಂಡಾದ ಮೂರು ತಿಂಗಳ ಗಂಡ್ ಕೂಸ್‌ನ ತಂದ್ ರಾಜನ ತೊಡೆಲಿ ಮೊಲ್ಗಿಸಿದೆ. ಆ ಕೂಸುನ ಕುತ್ತಿಗೆಲಿ ರಾಜ ಅಜ್ಜಿಗೆ ಕೊಟ್ಟ ಚಂದ್ರಹಾರ ಇದ್ದದೆ. ರಾಜ, 'ಇದ್ ಯಾರ ಕೂಸೂಂತ' ಕೇಳ್ದೆ. 'ಇದ್ ನಿನ್ನ ಕೂಸೂಂತ' ರುಸಿ ಹೇಳ್ದೆ. ರಾಜಂಗೆ ಸೋಜಿಗದ ಮೇಲೆ ಸೋಜಿಗ ಆದೆ.

ಹೆಕ್ಕಿದ ಕತೆಗ

ಇದ್ ಕನ್ಸೋ, ನೆನ್ಸೋ ಗೊತ್ತಾತ್ಲೆ. ಅಷ್ಟಾಕನ ಅಜ್ಜಿನೂ ಆಶ್ರಮದ ಒಳಗೆಂದ ಬಂದ್ ರಾಜಂಗೆ ಕಯ್‌ಮುಗ್ದ್ ನಡ್ದ ಕತೆನೆಲ್ಲಾ ಹೇಳ್ದೆ. ಇದರೆಲ್ಲಾ ಕೇಳಿ ರಾಜಂಗೆ ಆಶ್ಚರ್ಯ, ಕುಸಿ, ಸಿಟ್ಟ್ ಎಲ್ಲಾ ಒಟ್ಟೊಟ್ಟಿಗೆ ಬಂದದೆ. ರಾಜ ಕೂಸುನನೂ, ಅಜ್ಜಿನನೂ ಕರ್‍ಕಂಡ್ ಅರಮನೆಗೆ ಬಂದದೆ. ಹಿರಿಯರಾಣಿಯರ ಕಂಭಕ್ಕೆ ಕಟ್ಟಿ ಹಾಕಿ ಅವ್ಕೆ ಚಡಿಯೇಟ್ ಕೊಡಿಕೆ ಹೇಳ್ದೆ. ಎರ್‍ಡ್ ಏಟ್ ಬೀಳಿಕಾಕನ ಅವು ತೊಪ್ಪು ಒಪ್ಪಿಕಂಡವೆ. ಕಿರಿರಾಣಿ ನೆಲಮಾಳಿಗೆಲಿ ಸೆರೆಲಿ ಉಟ್ಟೂಂತ ಹೇಳ್ವೆ. ರಾಜ ಕಿರಿಯ ರಾಣಿನ ಬುಡ್ಸಿಕಂಡ್ ಬಂದದೆ. ಹಿರ್‍ಯ ರಾಣಿಯರ ನೆಲಮಾಳಿಗೆಲಿ ಸೆರೆಲಿ ಇರಿಸಿದೆ. ಸೂಲಗಿತ್ತಿಗೆ ಹೇಳಿ ಕಳ್ಸಿದೆ. ಅದ್ ಬಕಾಕನ ಅದ್ಕೆ ದುಡ್ಡುನ ಚೀಲ ಉಡ್ಗೊರೆ ಕೊಟ್ಟ್, 'ನನ್ನ ವಂಶನ ಉಳ್ಸಿದೆ' ಎಂತ ಹೇಳ್ದೆ. ಅಜ್ಜಿನನೂ ತುಂಬಾ ಹೊಗ್ಳ್‌ದೆ. ಅವು ಎಲ್ಲೋವೂ ನೂರಾರ್ ವೊರ್ಸ ರಾಜ್ಯಭಾರ ಮಾಡಿಕಂಡ್ ಕುಸಿಲಿ ಇದ್ದೊ. ನಾ ಹೋಗಿ ನೋಡಿಕಂಡ್ ಬಂದಳೆ. ನೀವುನೂ ಹೋಗಿ ನೋಡಿ ಬನ್ನಿ ಮಕ್ಕಳೇ' ಎಂತ ಅಜ್ಜಪ್ಪ ಹೇಳ್ದೊ. ನಾವೆಲ್ಲಾ ಕುಸಿಂದ ಆತ್ ಅಜ್ಜಪ್ಪಾ'ಂತ ಹೇಳಿ ಉಂಬಕೆ ಓಡ್ದೊ.

******

ಹಕ್ಕಿದ ಕತೆಗ



ಎಂ.ಜಿ ಕಾವೇರಮ್ಮ ಮಾವಜಿ ಎಪ್ಪತ್ತಾರರ ಹರೆಯದ ಹಿರಿಯ ಜೀವ.
ಆಗಳೆ 'ಒಳಹರಿವು' ಕವನ ಸಂಕಲನ ಕನ್ನಡಲಿ ಬರ್ದ್ ಪ್ರಕಟಿಸಿಯೊಳೊ.
ಈಗ ಮತ್ತೆ ಸರ್ಮಾಲೆ ಕವನ ಸಂಕಲನ ಕರ್ನಾಟಕ ಅರೆಭಾಷೆ ಅಕಾಡೆಮಿಂದ
ಪ್ರಕಟವಾಗ್‌ತ್ತುಟ್ಟು.
'ಅಜ್ಜಪ್ಪನ ಕತೆಗಳ ಭಂಡಾರಂದ ಹೆಕ್ಕಿದ ಕತೆಗ ' ಕತೆ ಹೇಳ್ವ ಖುಷಿಆರುವ
ಎಂ.ಜಿ ಕಾವೇರಮ್ಮನವರ ಸುರುನ ಅರೆಭಾಷಿಕ ಕತಾ ಸಂಕಲನ.
ಈ ಸಂಕಲನ ನಂಗೆ ಹಲವು ಕಾರಣಕ್ಕೆ ಮುಖ್ಯ ಕತಾಸಂಕಲನ ಆಗಿ ಕಂಡದೆ.
ಒಟಾರೆಯಾಗಿ ಇಲ್ಲಿನ ಕತೆಗ ಒಗಟಿನಂತ ತಂತ್ರಗಾರಿಕೆಲಿ
ಜಾಣತನದ ಗುಟ್ಟುಗಳ ಒಡ್ಡುವೆ.
ಮುಖ್ಯವಾಗಿ ಈ ಕತೆಗ ಮಕ್ಕಳ ಮುಗ್ಧ ಮನಸ್ಸ್‌ಗೆ ಅಯಸ್ಕಾಂತದ ಹಾಂಗೆ
ಆಕರ್ಷಕ ಆವ ಗುಣಗಳ ಹೊಂದಿಯೊಳ. ಆಶಯದ ದೃಷ್ಟಿಂದ ನ್ಯಾಯದ ಪರವಾಗಿ,
ಮಾನವಕೇಂದ್ರಿತ ಮೌಲ್ಯ ಪ್ರತಿಪಾದನೆಯ ತುಡ್ತಂದ ಗಮನ ಸೆಳ್ದವೆ.
ನೀತಿ ಬೋಧನೆ ಇಲ್ಲಿನ ಕತೆಗಳ ಮುಖ್ಯ ಸ್ಥಾಯಿಭಾವ.
ಜನಪದ ಕತೆಗಳ ತಂತ್ರ ಮತ್ತು ಆಶಯನ ನೆನ್ಪಿಸುವೆ.
ಕತೆ ಹೇಳ್ವ - ಕತೆ ಕೇಳ್ವ ಪರಂಪರೆ ನಮ್ಮಲ್ಲಿ
ಹಿಂದೆನ ಕಾಲಂದಳು ನಡ್ದ್ ಬಂದ ಸಂಗತಿ.
ನಮ್ಮ ಕಾಲಲಿ ಇದ್, ವಿಜ್ಞಾನ - ತಂತ್ರಜ್ಞಾನದ ವೈಪರೀತ್ಯದಿಂದಾಗಿ ಅಳ್ದ್‌ಟು.
ಇಲ್ಲಿ ಆ ಪರಂಪರೆನ ನೆನ್ಪುಸುವ ಬಗೆಲಿ, ಅಜ್ಜಪ್ಪ ಕತೆ ಹೇಳ್ವಾಂಗೆ
ಮಕ್ಕ ಕುತೂಹಲಲಿ ಕತೆ ಕೇಳ್ವ ತಂತ್ರ ಉಟ್ಟು.
ಈ ತಂತ್ರಲಿ ನಮ್ಮಲ್ಲಿ ಇದ್ದ ಕೂಡುಕುಟುಂಬ ವ್ಯವಸ್ಥೆ ಅನನ್ಯ ಆಗಿ
ಅನಾವರಣ ಆವ ರೀತಿ ಇಲ್ಲಿ ವೈಶಿಷ್ಟ್ಯ ಪೂರ್ಣ ಆಗಿ ಒಡಮೂಡಿಟು.
ಹಾಂಗೆನೆ ಕತಾ ಹಂದರಕೆ ಪೂರಕ ಆಗಿ ಬಂದ
ಅರೆಭಾಷೆನ ಸೊಗಡ್ ಇಲ್ಲಿನ ಕತೆಗಳಿಗೆ ಒಂದು ಜೀವ ತುಂಬಿಟು..

ಡಾ. ಪೂವಪ್ಪ ಕಣಿಯೂರು

ಅಜ್ಜಪ್ಪನ ಕತಾ ಭಂಡಾರಂದ

ಹೆಕ್ಕಿದ ಕತೆಗ

ಎಂ. ಜಿ ಕಾವೇರಮ್ಮ